www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಸಿವಿಲ್ ಸರ್ವೀಸಸ್‌ನ ಮುಖ್ಯ ಪರೀಕ್ಷೆಯ ಪ್ರಶ್ನೆಗಳು ನಿಖರ, ವಿಶ್ಲೇಷಣಾತ್ಮಕ ಮತ್ತು ಮೌಲಿಕವಾದ ಉತ್ತರಗಳನ್ನು ನಿರೀಕ್ಷಿಸುತ್ತವೆ. ಹಾಗಾಗಿ ಈ ಪರೀಕ್ಷೆಗೆ ಕಠಿಣ ಸಿದ್ಧತೆ ಅಗತ್ಯ...



ಸಂಖ್ಯೆ-ಸುದ್ದಿ 2020: ದೇಶದಲ್ಲಿ ಸಂಭವಿಸಿದ ಸಾವುಗಳೆಷ್ಟು?

'ವಿದ್ಯಾರ್ಥಿಗಳ ಸೇವಾ ಕೇಂದ್ರ' ಸ್ಥಾಪನೆಗೆ ಯುಜಿಸಿ ಸಲಹೆ 7

2024ಕ್ಕೆ 'ಶುಕ್ರಯಾನ': ಇಸ್ರೊ ಸಿದ್ಧತೆ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
56,669 ▼	16,678 ▼	₹52,650 (ಬೆಂಗಳೂರು) ▼	₹64,000 (ಬೆಂಗಳೂರು) ▼	76.40 ▲

ಆರ್‌ಬಿಐನಿಂದ ಹಣದುಬ್ಬರ ನಿಯಂತ್ರಣ ಉದ್ದೇಶ • ರಿವರ್ಸ್ ರೆಪೊ ದರ ಬದಲಿಲ್ಲ

ರೆಪೊ ದರ ಏರಿಕೆ, ಸಾಲ ತುಟ್ಟಿ


ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ/ನವದೆಹಲಿ: ಹಣದುಬ್ಬರ ದರವನ್ನು ನಿಯಂತ್ರಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಶೇಕಡಾ 0.40ರಷ್ಟು ಹೆಚ್ಚಿಸಿದೆ. ಇದರಿಂದಾಗಿ ರೆಪೊ ದರವು ಶೇಕಡಾ 4.40ಕ್ಕೆ ಏರಿಕೆ ಆಗಿದೆ. ಆರ್‌ಬಿಐ ತೀರ್ಮಾನದ ಪರಿಣಾಮವಾಗಿ ಗೃಹ, ವಾಹನ ಹಾಗೂ ಇತರ ಸಾಲಗಳ ಮೇಲಿನ ಬಡ್ಡಿ ದರ ಹೆಚ್ಚಾಗಿ, ಸಾಲದ ತಿಂಗಳ ಕಂತಿನ ಮೊತ್ತವೂ ಹೆಚ್ಚಲಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ದೇಶದಲ್ಲಿ ಮೂರು ತಿಂಗಳುಗಳಿಂದ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಬ್ಯಾಂಕ್‌ಗಳು ಕಾಯ್ದುಕೊಳ್ಳಬೇಕಾದ ಠೇವಣಿಯ (ನಗದು ಮೀಸಲು ಅನುಪಾತ) ಪ್ರಮಾಣವನ್ನು ಶೇ 0.50ರಷ್ಟು (ಶೇ 4.5ಕ್ಕೆ) ಹೆಚ್ಚಿಸಿದೆ. ನಗದು ಮೀಸಲು ಅನುಪಾತ ಹೆಚ್ಚಳವು ಮೇ 21ರಿಂದ ಅನ್ವಯವಾಗಲಿದೆ.

ಎಂಪಿಸಿಯು ರೆಪೊ ದರವನ್ನು ಹೆಚ್ಚಿಸಿರುವುದು 2018ರ ಆಗಸ್ಟ್ ನಂತರ ಇದೇ ಮೊದಲು. ಹೊಂದಾಣಿಕೆಯ ಹಣಕಾಸಿನ ನಿಲುವನ್ನು ಕಾಯ್ದುಕೊಂಡು, ರೆಪೊ ದರ ಹೆಚ್ಚಿಸಲು ಎಂಪಿಸಿ ಒಕ್ಕೊರಲಿನಿಂದ ತೀರ್ಮಾನಿಸಿದೆ. ಎಂಪಿಸಿಯು ಸೋಮವಾರದಿಂದ ಬುಧವಾರದವರೆಗೆ ಸಭೆ ಸೇರಿತ್ತು.



ಏಪ್ರಿಲ್ ತಿಂಗಳಿನಲ್ಲಿ ಕೂಡ ಹಣದುಬ್ಬರ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿಯೇ ಇರುವ ಸಾಧ್ಯತೆ ಇದೆ ಎಂದು ದಾಸ್ ಹೇಳಿದ್ದಾರೆ. ಹಣದುಬ್ಬರ ಪ್ರಮಾಣವು ಬಹುಕಾಲ ಹೆಚ್ಚಿನ ಮಟ್ಟದಲ್ಲಿಯೇ ಉಳಿದರೆ ಬೆಳವಣಿಗೆ ಹಾಗೂ ಹಣಕಾಸಿನ ಸ್ಥಿರತೆಗೆ ಅಡ್ಡಿಯಾಗಬಹುದು ಎಂದು ಎಚ್ಚರಿಸಿದ್ದಾರೆ.

'ಈಕ್ವಿಟಿ ಮಾರುಕಟ್ಟೆಗಳ ಮೇಲೆ ನಕಾರಾತ್ಮಕ ಪರಿಣಾಮ ಇರಲಿದೆ. ಮುಂದಿನ ಎಂಪಿಸಿ ಸಭೆಯಲ್ಲಿ ರೆಪೊ ದರ ಹೆಚ್ಚಾಗಬಹುದು ಎಂದು ನಾವು ನಿರೀಕ್ಷಿಸಿದ್ದೆವು' ಎಂದು ಐಸಿಐಸಿಐ ಸೆಕ್ಯುರಿಟೀಸ್‌ನ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಸೆನ್‌ಜಿತ್ ಬಸು ಹೇಳಿದ್ದಾರೆ.

> **ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ಹೆಚ್ಚಾದುದರಿಂದ ಹಣದುಬ್ಬರದ ಮೇಲೆ ನೇರ ಪರಿಣಾಮ ಆಗುತ್ತಿದೆ**
> **ಶಕ್ತಿಕಾಂತ ದಾಸ್,** ಆರ್‌ಬಿಐ ಗವರ್ನರ್

ರಷ್ಯಾ–ಉಕ್ರೇನ್ ಯುದ್ಧವು ಮೇ, ಜೂನ್ ನಂತರವೂ ಮುಂದುವರಿದಲ್ಲಿ ರೆಪೊ ದರ ಇನ್ನಷ್ಟು ಹೆಚ್ಚು ಮಾಡಬೇಕಾಗಬಹುದು ಎಂದು ಬಸು ಅಂದಾಜಿಸಿದ್ದಾರೆ.

ಅಮೆರಿಕ: ಬಡ್ಡಿದರ ಹೆಚ್ಚಳ 4A

ಉಳಿತಾಯ ಮಾಡುವವರಿಗೆ ಸಿಹಿ

• ವಿಜಯ್ ಜೋಷಿ

ಬೆಂಗಳೂರು: ರೆಪೊ ದರವನ್ನು ಶೇಕಡ 0.4ರಷ್ಟು ಹೆಚ್ಚಳ ಮಾಡಿರುವುದರಿಂದ ಸಣ್ಣ ಹೂಡಿಕೆದಾರರು ಹಾಗೂ ಉಳಿತಾಯ ಮನೋಭಾವದವರಿಗೆ ಒಂದಿಷ್ಟು ಪ್ರಯೋಜನ ಆಗಲಿದೆ ಎಂದು ತಜ್ಞರು ಹೇಳಿದ್ದಾರೆ.

'ಸಾಲದ ಮೇಲಿನ ಬಡ್ಡಿ ದರ ಹೆಚ್ಚಾಗುತ್ತದೆ ಎಂಬುದು ಬಹುತೇಕ ಖಚಿತ. ಆದರೆ, ಇದರ ಜೊತೆಯಲ್ಲೇ ಸರ್ಕಾರಿ ಸಾಲಪತ್ರಗಳ ಮೇಲಿನ ಹೂಡಿಕೆಗೆ ಸಿಗುವ ಲಾಭಾಂಶದಲ್ಲಿ ತುಸು ಹೆಚ್ಚಳ ಆಗಬಹುದು. ಇದು ಸಣ್ಣ ಹೂಡಿಕೆದಾರರಿಗೆ ಒಳ್ಳೆಯ ಸುದ್ದಿ' ಎಂದು ಹೂಡಿಕೆ ಸಲಹಾ ಸಂಸ್ಥೆ ಪ್ರೈಮ್ ಇನ್ವೆಸ್ಟರ್ ಡಾಟ್ ಇನ್ ಸಂಸ್ಥೆಯ ಸಹ ಸಂಸ್ಥಾಪಕಿ ವಿದ್ಯಾ ಬಾಲಾ 'ಪ್ರಜಾವಾಣಿ'ಗೆ ತಿಳಿಸಿದರು.

'ಆರ್‌ಬಿಐ ತನ್ನ ರಿಟೇಲ್ ಡೈರೆಕ್ಟ್ ಯೋಜನೆಯ ಮೂಲಕ ಸರ್ಕಾರಿ ಸಾಲಪತ್ರಗಳಲ್ಲಿ ಹೂಡಿಕೆ ಮಾಡಲು ಸಣ್ಣ ಹೂಡಿಕೆದಾರರಿಗೂ ಅವಕಾಶ ಕಲ್ಪಿಸಿದೆ. 10 ವರ್ಷಗಳ ಅವಧಿಯ ಜಿ–ಸೆಕ್‌ನಿಂದ ಸಿಗುವ ಲಾಭಾಂಶವು ಶೇಕಡ 7.39ಕ್ಕೆ ತಲುಪಿದೆ. ಉಳಿತಾಯ ಮಾಡುವವರಿಗೆ ಇದು ಒಳ್ಳೆಯ ಅವಕಾಶ' ಎಂದು ವಿದ್ಯಾ ಹೇಳಿದರು. ಆದರೆ, ಜಿ–ಸೆಕ್‌ಗಳ ಟ್ರೇಡಿಂಗ್ ಸದ್ಯಕ್ಕೆ ಬೇಡ ಎಂದು ಕಿವಿಮಾತು ಹೇಳಿದರು.

ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವು ಹೆಚ್ಚಳ ಆಗಬಹುದು ಎಂದು ಅವರು ಅಂದಾಜಿಸಿದರು. ಈಗ ಪಿಪಿಎಫ್ ಹೂಡಿಕೆಗೆ ಶೇ 7.1ರಷ್ಟು, ಎನ್‌ಎಸ್‌ಸಿ ಹೂಡಿಕೆಗೆ ಶೇ 6.8ರಷ್ಟು ಬಡ್ಡಿ ಸಿಗುತ್ತಿದೆ.

ಈಗ ಸಣ್ಣ ಅವಧಿಯ, ಸಾಲಪತ್ರ ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದರಿಂದ ತುಸು ಉತ್ತಮ ಲಾಭ ಪಡೆದುಕೊಳ್ಳಬಹುದು. ನೇರವಾಗಿ ಷೇರುಗಳಲ್ಲಿ ಹೂಡಿಕೆ ಮಾಡುವವರಿಗೆ, ಮಾರುಕಟ್ಟೆಯಲ್ಲಿನ ಅಸ್ಥಿರತೆಯ ಕಾರಣದಿಂದಾಗಿ ಉತ್ತಮ ಷೇರುಗಳನ್ನು ಆಯ್ಕೆ ಮಾಡುವುದು ತುಸು ಕಷ್ಟವಾಗಬಹುದು ಎಂದು ತಿಳಿಸಿದರು.

ರೆಪೊ ದರ ಹೆಚ್ಚಾದ ಕಾರಣದಿಂದಾಗಿ ವಾಹನ ಸಾಲ, ಗೃಹ ಸಾಲದ ಮೇಲಿನ ಬಡ್ಡಿ ದರವು ಶೇ 0.5ರವರೆಗೆ ಹೆಚ್ಚಳ ಕಾಣಬಹುದು ಎಂದು ಚಾರ್ಟರ್ಡ್ ಅಕೌಂಟೆಂಟ್ ಕುಮಾರ್ ಪ್ರಸಾದ್ ಅಂದಾಜಿಸಿದರು. ಆದರೆ, ಇದೇ ಸಂದರ್ಭದಲ್ಲಿ ಹಿರಿಯ ನಾಗರಿಕರಿಗೆ ಠೇವಣಿಗಳ ಮೇಲಿನ ಬಡ್ಡಿ ದರವು ಶೇ 0.5ರಷ್ಟು ಜಾಸ್ತಿ ಆಗಬಹುದು ಎಂದರು.

5ನೇ ಪುಟ ನೋಡಿ

ಪ್ರಭಾವಿಗಳ ಕೈವಾಡ: ದೂರು

ಪಿಎಸ್‌ಐ ಅಕ್ರಮ: ಸಚಿವ, ಮಾಜಿ ಸಿ.ಎಂ ಮಗ ಭಾಗಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ಹಾಗೂ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಅಕ್ರಮಗಳಲ್ಲಿ ಪ್ರಭಾವಿ ವ್ಯಕ್ತಿಗಳೂ ಭಾಗಿಯಾಗಿರುವ ಅನುಮಾನವಿದೆ. ಈ ದಿಕ್ಕಿನಲ್ಲೂ ತನಿಖೆ ಕೈಗೊಂಡು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಕೊಡಿಸಬೇಕು ಎಂದು ವಕೀಲರ ನಿಯೋಗವು ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಸಿಐಡಿ ಡಿಜಿಪಿಗೆ ದೂರು ನೀಡಿದೆ.

ವಕೀಲರಾದ ಎ.ಪಿ.ರಂಗನಾಥ್, ಕೆ.ಎನ್.ಜಗದೀಶ್ ಕುಮಾರ್, ಬಾಲನ್ ಹಾಗೂ ಇತರರಿದ್ದ ನಿಯೋಗವು ಸಿಐಡಿ ಕಚೇರಿಗೆ ತೆರಳಿ ಬುಧವಾರ ದೂರು ಸಲ್ಲಿಸಿತು.

'545 ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಸುಮಾರು ₹500 ಕೋಟಿಯ ವ್ಯವಹಾರ ನಡೆದಿರುವ ಸಾಧ್ಯತೆ ಇದೆ. ಇದರಲ್ಲಿ ಪ್ರಭಾವಿಗಳಿಗೂ ಪಾಲು ಹೋಗಿದೆ. ಕೆಲವು ವ್ಯಕ್ತಿಗಳ ಹೆಸರು ಮುಖ್ಯವಾಗಿ ಕೇಳಿಬಂದಿದೆ. ಅವರೆಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಬೇಕು' ಎಂದು ಎ.ಪಿ. ರಂಗನಾಥ್ ಆಗ್ರಹಿಸಿದರು.

'ಮಾಜಿ ಮುಖ್ಯಮಂತ್ರಿಯೊಬ್ಬರ ಮಗ, ನಂಬಿಕಸ್ತ ಮಧ್ಯವರ್ತಿಯೊಬ್ಬನ ಮೂಲಕ ಒಟ್ಟು 63 ಅಭ್ಯರ್ಥಿಗಳಿಂದ ಹಣ ಪಡೆದಿದ್ದಾರೆ. ಒಬ್ಬರಿಂದ ₹50 ಲಕ್ಷ, ಮತ್ತೊಬ್ಬರಿಂದ ₹70 ಲಕ್ಷ ಪಡೆದಿರುವುದು ಗೊತ್ತಾಗಿದೆ. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೂ ಹಣ ಸಂದಾಯವಾಗಿದೆ ಎಂಬ ಸುದ್ದಿ ಇದೆ. ಸಚಿವರ ಸಹೋದರ ಸತೀಶ್ 'ಹೊಂಬಾಳೆ ಕನ್‌ಸ್ಟ್ರಕ್ಷನ್' ಹೆಸರಿನ ಕಂಪನಿ ನಡೆಸುತ್ತಿದ್ದಾರೆ. ಸತೀಶ್ ಮೂಲಕ ಅಭ್ಯರ್ಥಿಗಳು ಸಚಿವರಿಗೆ ಹಣ ನೀಡಿದ್ದಾರೆ ಎಂದು ಹೇಳಾಗುತ್ತಿದೆ. ಹೀಗಾಗಿ ಇಬ್ಬರಿಗೂ ನೋಟಿಸ್ ನೀಡಿ ವಿಚಾರಣೆಗೆ ಕರೆಸಬೇಕು' ಎಂದು ದೂರಿನಲ್ಲಿ ಕೋರಲಾಗಿದೆ.

5ನೇ ಪುಟ ನೋಡಿ

'ಡಿಕೆಶಿ ಭ್ರಷ್ಟಾಚಾರದ ಗ್ಯಾಂಗ್ ಲೀಡರ್'

ಬೆಂಗಳೂರು: 'ಡಿ.ಕೆ. ಶಿವಕುಮಾರ್ ಜೈಲಿಗೆ ಹೋಗಿ ಬಂದಿರುವ ಆಸಾಮಿ, ಭ್ರಷ್ಟಾಚಾರದ ಗ್ಯಾಂಗ್ ಲೀಡರ್' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಹೇಳಿದರು.


ಕಾಂಗ್ರೆಸ್ ನಾಯಕರ ಅರೋಪಕ್ಕೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ನಾನು ಶಿವಕುಮಾರ್ ರೀತಿ ಜೀವನ ಮಾಡುತ್ತಿರುವವನಲ್ಲ. ನನ್ನ ಜೀವನ ತೆರೆದ ಪುಸ್ತಕದಂತಿದೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಶಿವಕುಮಾರ್ ಮಟ್ಟಕ್ಕೆ ಇಳಿಯಬಾರದಿತ್ತು' ಎಂದರು.

ಶಿವಕುಮಾರ್, ಸಿದ್ದರಾಮಯ್ಯ, ಉಗ್ರಪ್ಪ ಸೇರಿ ಕಾಂಗ್ರೆಸ್ ನಾಯಕರು ನನ್ನ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಕಾಂಗ್ರೆಸ್ ಭ್ರಷ್ಟಾಚಾರದ ಮೂಲ. ಹಗರಣ ಮುಚ್ಚಿ ಹಾಕುವುದು ಅದರ ಸಂಸ್ಕೃತಿ ಎಂದು ಹೇಳಿದರು.

'ಮಾಗಡಿ ತಾಲ್ಲೂಕಿನವರು ಪಿಎಸ್‌ಐ ಹುದ್ದೆಗೆ ನೇಮಕ ಆಗಬಾರದು ಎಂದು ಹೇಳಲಾಗದು. ದರ್ಶನ್ ಗೌಡ ಸೇರಿದಂತೆ ಗೌಡರೆಲ್ಲರೂ ನಮ್ಮ ನೆಂಟರೇ ಆಗಿದ್ದಾರೆ. ಈ ವಿಚಾರದಲ್ಲಿ ಆಧಾರರಹಿತ ಆರೋಪ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇನೆ' ಎಂದರು.

ಡಿವೈಎಸ್‌ಪಿ, ಪಿಐ ಅಮಾನತು

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮದಲ್ಲಿ ಶಾಮೀಲಾದ ಆರೋಪದ ಮೇಲೆ ಕಲಬುರಗಿ ಬೆರಳಚ್ಚು ವಿಭಾಗದ ಡಿವೈಎಸ್‌ಪಿ ಆರ್.ಆರ್. ಹೊಸಮನಿ ಮತ್ತು ಮಹಿಳಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ದಿಲೀಪ್ ಸಾಗರ್ ಅವರನ್ನು ಬುಧವಾರ ಅಮಾನತು ಮಾಡಲಾಗಿದೆ.



ಹೊಸಮನಿ



ದಿಲೀಪ್ ಸಾಗರ್

ಪರೀಕ್ಷಾ ಅಕ್ರಮ ನಡೆದಿರುವ ಕಲಬುರಗಿಯ ಜ್ಞಾನ ಜ್ಯೋತಿ ಪರೀಕ್ಷಾ ಕೇಂದ್ರದ ಉಸ್ತುವಾರಿಯಾಗಿ ಆರ್.ಆರ್. ಹೊಸಮನಿ ಮತ್ತು ಮೇಲ್ವಿಚಾರಕರಾಗಿ ದಿಲೀಪ್ ಸಾಗರ್ ಕಾರ್ಯನಿರ್ವಹಿಸಿದ್ದರು. ಈ ಇಬ್ಬರೂ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವುದು ಕಂಡುಬಂದಿರುವ ಕಾರಣದಿಂದ ಅಮಾನತು ಮಾಡಲಾಗಿದೆ ಎಂದು ಗೃಹ ಇಲಾಖೆ ಮೂಲಗಳು ತಿಳಿಸಿವೆ.

ಫುಟ್‌ಬಾಲ್: ಫೈನಲ್‌ಗೆ ಲಿವರ್‌ಪೂಲ್ 12

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒತ್ತುವರಿದಾರರಿಗೆ ಡೀಮ್ಡ್ ಅರಣ್ಯ

6 ಲಕ್ಷ ಹೆಕ್ಟೇರ್ ಅರಣ್ಯ ಭೂಮಿ ಕಂದಾಯ ಇಲಾಖೆಗೆ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರಣ್ಯ ಇಲಾಖೆ ತನ್ನ ವಶದಲ್ಲಿರುವ ಆರು ಲಕ್ಷ ಹೆಕ್ಟೇರ್ ಡೀಮ್ಡ್ ಭೂಮಿಯನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಲಿದ್ದು, ಈ ಭೂಮಿಯಲ್ಲಿ ಅಗತ್ಯ ಇರುವಷ್ಟನ್ನು ಸರ್ಕಾರದ ಬಳಿಯೇ ಉಳಿಸಿಕೊಂಡು ಉಳಿದ ಭೂಮಿಯನ್ನು ಒತ್ತುವರಿದಾರರಿಗೆ ಹಂಚಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಆ ಮೂಲಕ, ಮೈಸೂರು, ಚಾಮರಾಜನಗರ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳೂ ಸೇರಿದಂತೆ ರಾಜ್ಯದ ವಿವಿಧೆಡೆಯಲ್ಲಿರುವ ಬಗರ್ ಹುಕುಂ ಸಮಸ್ಯೆಗೆ ಶಾಶ್ವತ ಮುಕ್ತಿಕೊಡಿಸಲು ಸರ್ಕಾರ ಮುಂದಾಗಿದೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ, 'ಅರಣ್ಯ ಇಲಾಖೆಯ ವಶದಲ್ಲಿರುವ ಆರು ಲಕ್ಷ ಹೆಕ್ಟೇರ್ ಭೂಮಿಯನ್ನು ಡೀಮ್ಡ್ ಅರಣ್ಯ ಪ್ರದೇಶವೆಂದು ಗುರುತಿಸಲಾಗಿದೆ. ಈ ಭೂಮಿ ಕಂದಾಯ ಇಲಾಖೆಗೆ ಸೇರಿದೆ' ಎಂದರು.

ಮುಖ್ಯಾಂಶಗಳು
- ಬಗರ್‌ಹುಕುಂ ಸಮಸ್ಯೆ ಇತ್ಯರ್ಥಕ್ಕೆ ದಾರಿ
- 30 ವರ್ಷ ಗುತ್ತಿಗೆ ಆಧಾರದಲ್ಲಿ ಹಂಚಿಕೆ
- ನಿಗದಿತ ಮೊತ್ತ ಪಾವತಿಸಿದವರಿಗೆ ಭೂಮಿ

'ಕಂದಾಯ ಇಲಾಖೆಗೆ ಬರಲಿರುವ ಭೂಮಿಯ ಪೈಕಿ, ಆಸ್ಪತ್ರೆ ನಿರ್ಮಾಣ ಸೇರಿದಂತೆ ನಾಗರಿಕ ಅಗತ್ಯಗಳಿಗೆ ಎಷ್ಟು ಪ್ರಮಾಣದ ಭೂಮಿ ಅಗತ್ಯವಿದೆ ಎಂದು ಗುರುತಿಸಲಾಗುವುದು. ಐದು ಲಕ್ಷ ಹೆಕ್ಟೇರ್‌ನಷ್ಟು ಭೂಮಿಯನ್ನು ರೈತರಿಗೆ ಹಂಚಲಾಗುವುದು' ಎಂದರು.

'ಕೊಡಗು ಜಿಲ್ಲೆಯಲ್ಲಿ 12 ಸಾವಿರ, ಹಾಸನದಲ್ಲಿ 30 ಸಾವಿರ, ಚಿಕ್ಕಮಗಳೂರು ಜಿಲ್ಲೆಯಲ್ಲಿ 45 ಸಾವಿರ ಎಕರೆ ಭೂಮಿ ಒತ್ತುವರಿಯಾಗಿದೆ. ಈ ಭೂಮಿಯಲ್ಲಿ ಕಾಫಿ, ಏಲಕ್ಕಿ ಸೇರಿದಂತೆ ಹಲವು ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ 30 ವರ್ಷಗಳ ಅವಧಿಗೆ ಒತ್ತುವರಿದಾರರಿಗೆ ನೀಡಲು ತೀರ್ಮಾನಿಸಲಾಗಿದೆ. ಈ ಪೈಕಿ ಶೇ 80ರಷ್ಟು ಮಂದಿ ಐದು ಎಕರೆಗಿಂತಲೂ ಕಡಿಮೆ ಭೂಮಿ ಒತ್ತುವರಿ ಮಾಡಿಕೊಂಡಿದ್ದಾರೆ' ಎಂದು ವಿವರಿಸಿದರು.

ಒತ್ತುವರಿ ಭೂಮಿಗೆ ಗುತ್ತಿಗೆ ದರ

ಭೂಮಿ (ಎಕರೆಯಲ್ಲಿ)	ವಾರ್ಷಿಕ ದರ (ಎಕರೆಗೆ ₹ ಗಳಲ್ಲಿ)
1ರಿಂದ 2 ಎಕರೆ	1,500 ರಿಂದ 2,000
3 ರಿಂದ 5 ಎಕರೆ	2,000 ದಿಂದ 2,500
5ಕ್ಕಿಂತ ಹೆಚ್ಚು	2,500 ದಿಂದ 3,000

'ಒತ್ತುವರಿ ಮಾಡಿಕೊಂಡವರು ಸರ್ಕಾರಕ್ಕೆ ಹಣ ಪಾವತಿಸದೆ ಹಲವು ವರ್ಷಗಳಿಂದ ಭೂಮಿಯನ್ನು ಅನುಭವಿಸುತ್ತಿದ್ದರು. ಇನ್ನು ಮುಂದೆ ಅವರು ಗುತ್ತಿಗೆ ಹಣ ಪಾವತಿಸಬೇಕಾಗುತ್ತದೆ. ಆ ಮೂಲಕ, ಒತ್ತುವರಿ ಜಮೀನು ಸರ್ಕಾರಕ್ಕೆ ಸೇರಿದ್ದು ಎಂದು ದಾಖಲೆಗಳಲ್ಲಿ ಗುರುತಿಸಲಾಗುತ್ತದೆ. ಇದೇ ರೀತಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒತ್ತುವರಿಯಾಗಿರುವ ಗೇರು ಭೂಮಿಯನ್ನು ಕೂಡಾ ಗುತ್ತಿಗೆ ನೀಡಲು ನಿರ್ಧರಿಸಲಾಗಿದೆ' ಎಂದು ಅವರು ವಿವರಿಸಿದರು.

ಸೂರ್ಯನ ಸುತ್ತ ಉಂಗುರ: ಆಗಸದಲ್ಲಿ ಕೌತುಕ



ಪ್ರಜಾವಾಣಿ ವಾರ್ತೆ

ಚಾಮರಾಜನಗರ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬುಧವಾರ ಬೆಳಿಗ್ಗೆ ಆಗಸದಲ್ಲಿ ಸೂರ್ಯನ ಸುತ್ತ ಬಣ್ಣಗಳಿಂದ ಕೂಡಿದ ವೃತ್ತಾಕಾರದ ರಚನೆ ಗೋಚರಿಸಿತು.

ಅಪರೂಪದ ಈ ವಿದ್ಯಮಾನ ಜನರಲ್ಲಿ ಕುತೂಹಲ ಮೂಡಿಸಿತು. ಬೆಳಿಗ್ಗೆ 11 ಗಂಟೆ ನಂತರ ಗೋಚರಿಸಿದ ಉಂಗುರ ಸುಮಾರು ಮುಕ್ಕಾಲು ಗಂಟೆ ಕಂಡು ಬಂತು. ಅಚ್ಚರಿಗೊಂಡ ಜನರು ಮೊಬೈಲ್, ಕ್ಯಾಮೆರಾಗಳಲ್ಲಿ ಕೌತುಕವನ್ನು ಸೆರೆ ಹಿಡಿದರು. ಸೂರ್ಯನ ಸುತ್ತಲೂ ಆವರಿಸಿರುವ ಮೋಡದಲ್ಲಿರುವ ಮಂಜಿನ ಹರಳುಗಳ ಮೇಲೆ ಬೆಳಕು ಬಿದ್ದು ವಕ್ರೀಭವನಗೊಂಡಾಗ ಕಾಮನಬಿಲ್ಲು ಮಾದರಿಯ ಬಣ್ಣಗಳನ್ನು ಹೊಂದಿರುವ ವೃತ್ತ ಗೋಚರಿಸುತ್ತದೆ.

4Bನೇ ಪುಟ ನೋಡಿ



ಹಿಮಪಾತ ಹಿಮಾಚಲ ಪ್ರದೇಶದ ಬರಲಾಚ ಪಾಸ್‌ನಲ್ಲಿ ಬುಧವಾರ ತೀವ್ರ ಹಿಮಪಾತದ ನಡುವೆಯೇ ಮನಾಲಿ–ಲೇಹ್ ಹೆದ್ದಾರಿಯಲ್ಲಿ ವಾಹನಗಳು ಸಾಗಿದವು

–ಪಿಟಿಐ ಚಿತ್ರ

ಠಾಣೆಯಲ್ಲಿ ಬಾಲಕಿ ಮೇಲೆ ಪೊಲೀಸ್ ಅಧಿಕಾರಿ ಅತ್ಯಾಚಾರ ಆರೋಪ: ಬಂಧನ

ಲಖನೌ(ಪಿಟಿಐ): ತನ್ನ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಬಗ್ಗೆ ದೂರು ನೀಡಲು ಹೋದ 13 ವರ್ಷದ ಬಾಲಕಿ ಮೇಲೆ ಲಲಿತ್‌ಪುರ ಜಿಲ್ಲೆ ಪಾಲಿಯ ಪೊಲೀಸ್ ಠಾಣಾಧಿಕಾರಿ (ಎಸ್‌ಎಚ್‌ಒ) ಪೊಲೀಸ್ ಠಾಣೆಯಲ್ಲೇ ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

ಬಾಲಕಿ ಮೇಲೆ ಅತ್ಯಾಚಾರವೆಸಗಿದ ಅಧಿಕಾರಿ ಸೇರಿದಂತೆ ಐವರ ವಿರುದ್ಧ ಪೋಕ್ಸೊ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ನಿಯಂತ್ರಣ ಕಾಯ್ದೆಗಳಡಿ ಪ್ರಕರಣ ದಾಖಲಿಸಲಾಗಿದ್ದು, ಆರು ಮಂದಿಯನ್ನೂ ಬಂಧಿಸಲಾಗಿದೆ. ತಲೆಮರೆಸಿಕೊಂಡಿದ್ದ ಠಾಣಾಧಿಕಾರಿ ತಿಲಕ್‌ಧಾರಿ ಸರೋಜ್ ಅವರನ್ನು ಪ್ರಯಾಗ್‌ರಾಜ್‌ನಲ್ಲಿ ಬಂಧಿಸಲಾಗಿದೆ. ತಿಲಕ್‌ಧಾರಿಯನ್ನು ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಬಾಲಕಿ ತಂದೆ ಮಂಗಳವಾರ ದಾಖಲಿಸಿರುವ ದೂರಿನಲ್ಲಿ, ನಾಲ್ವರು ಆಕೆಗೆ ಆಮಿಷ ಒಡ್ಡಿ ಏ. 22 ರಂದು ಭೋಪಾಲ್‌ಗೆ ಕರೆದೊಯ್ದು ನಾಲ್ಕು ದಿನಗಳ ಕಾಲ ಅತ್ಯಾಚಾರ ಎಸಗಿದ್ದರು. ನಂತರ ಆರೋಪಿಯೊಬ್ಬ ಆಕೆಯನ್ನು ಗ್ರಾಮಕ್ಕೆ ಮರಳಿ ಕರೆತಂದು ಪರಾರಿಯಾಗುವ ಮೊದಲು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಕರೆತಂದಿದ್ದಾನೆ ಎಂದು ಹೇಳಲಾಗಿದೆ.

ಠಾಣಾಧಿಕಾರಿ ಬಾಲಕಿಯನ್ನು ಆಕೆಯ ಚಿಕ್ಕಮ್ಮನ ಮನೆಗೆ ಕಳುಹಿಸಿದ್ದಾರೆ. ಮರುದಿನ ಹೇಳಿಕೆಯನ್ನು ದಾಖಲಿಸಲು ಆಕೆಯನ್ನು ಠಾಣೆಗೆ ಕರೆಸಿದ್ದರು ಎನ್ನಲಾಗಿದೆ.

5ನೇ ಪುಟ ನೋಡಿ

ಭೋವಿ ನಿಗಮ: ನಿರ್ದೇಶಕರ ವಿರುದ್ಧ ದೂರು

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಆರ್.ಲೀಲಾವತಿ ಅವರ ಸಹಿ ನಕಲು ಮಾಡಿದ ಆರೋಪದ ಮೇಲೆ ನಿಗಮದ ನಿರ್ದೇಶಕ ರವಿಕುಮಾರ್ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿವಿಧ ಜಿಲ್ಲೆಯ ಫಲಾನುಭವಿಗಳಿಗೆ ನಿಗಮದಿಂದ ಒಟ್ಟು ₹1.83 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ನಕಲಿ ಆದೇಶ ಹೊರಡಿಸಲಾಗಿದೆ. ಇದಕ್ಕೆ ನನ್ನ ಸಹಿ ನಕಲು ಮಾಡಲಾಗಿದೆ’ ಎಂದು ಲೀಲಾವತಿ ಅವರು ದೂರು ನೀಡಿದ್ದು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದೇವೆ’ ಎಂದು ಪೊಲೀಸ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ಶೀಘ್ರ ವಿತರಿಸಲು ಆಗ್ರಹ

ಬೆಂಗಳೂರು: ‘ಕಳೆದ ಎರಡು (2020–21, 2021–22) ಶೈಕ್ಷಣಿಕ ವರ್ಷಗಳಲ್ಲಿ ಮಕ್ಕಳಿಗೆ ಉಚಿತ ಸೈಕಲ್ ವಿತರಿಸದ ಕಾರಣ ಸಾವಿರಾರು ಮಕ್ಕಳು ಶಿಕ್ಷಣದ ಹಕ್ಕಿನಿಂದ ವಂಚಿತರಾಗಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಸೈಕಲ್ ವಿತರಿಸಲು ತುರ್ತು ಕ್ರಮ ತೆಗೆದುಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ಒತ್ತಾಯಿಸಿದೆ.

‘ಮಕ್ಕಳ ಶಿಕ್ಷಣದ ಹಕ್ಕು ಎತ್ತಿ ಹಿಡಿಯುವ ಜೊತೆಗೆ, ಮಕ್ಕಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲು 2006-07ರಲ್ಲಿ ಸೈಕಲ್ ವಿತರಣೆ ಯೋಜನೆ ಆರಂಭಿಸಲಾಗಿತ್ತು. ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶದ ವಿದ್ಯಾರ್ಥಿಗಳು ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು ದೂರದ ಶಾಲೆಗೆ ಹೋಗಲು ಇದರಿಂದ ಅನುಕೂಲವಾಗಿದೆ’ ಎಂದು ವೇದಿಕೆಯ ವಿ.ಪಿ. ನಿರಂಜನಾರಾಧ್ಯ ಹೇಳಿದ್ದಾರೆ.

‘ಕೋವಿಡ್ ಕಾರಣದಿಂದ ಎರಡು ವರ್ಷ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು. ಆ ಹಣವನ್ನು ಅರ್ಹ ಮಕ್ಕಳ ಬ್ಯಾಂಕ್ ಖಾತೆಗೆ ವರ್ಗಾಯಿಸಿ, ವಿತರಣೆಯಾಗುವ ಸೈಕಲ್ ಅನ್ನು ಉತ್ತಮ ಸ್ಥಿತಿಯಲ್ಲಿ ನಿರ್ವಹಿಸಲು ನೆರವಾಗಬೇಕು. ಪ್ರಸಕ್ತ ಶೈಕ್ಷಣಿಕ ವರ್ಷ ಆರಂಭಕ್ಕೂ ಮೊದಲೇ ಅರ್ಹ ವಿದ್ಯಾರ್ಥಿಗಳಿಗೆ ಸೈಕಲ್ ವಿತರಿಸಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ಪರಿಶೀಲನಾ ಸಭೆಗೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

‘ಬಜೆಟ್ ಅನುಷ್ಠಾನಕ್ಕೆ ವೇಳಾಪಟ್ಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಜೆಟ್ ಘೋಷಣೆಗಳನ್ನು ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ತಂದು, ಫಲಾನುಭವಿಗಳಿಗೆ ತ್ವರಿತವಾಗಿ ಸೌಲಭ್ಯ ಒದಗಿಸುವುದಕ್ಕಾಗಿ ಎಲ್ಲ ಇಲಾಖೆಗಳಿಗೂ ವೇಳಾಪಟ್ಟಿ ನಿಗದಿಪಡಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪ್ರಸಕ್ತ ವರ್ಷದ ಬಜೆಟ್ ಘೋಷಣೆಗಳ ಅನುಷ್ಠಾನದ ಕುರಿತು ಪ್ರಮುಖ ಇಲಾಖೆಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಅವರು ಬುಧವಾರ ಇಡೀ ದಿನ ಪರಿಶೀಲನಾ ಸಭೆಗಳನ್ನು ನಡೆಸಿದರು. ಸಭೆಗೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ, ‘ವೇಳಾಪಟ್ಟಿಯ ಪ್ರಕಾರವೇ ಬಜೆಟ್ ಅನುಷ್ಠಾನಕ್ಕೆ ಬರಲಿದೆ’ ಎಂದರು.

ಬಜೆಟ್‌ನಲ್ಲಿ ಪ್ರಕಟಿಸಿದ್ದ ಘೋಷಣೆಗಳ ಪೈಕಿ ಶೇಕಡ 80ರಷ್ಟು ಆದೇಶಗಳಾಗಿವೆ. ಕಾನೂನು ಮತ್ತು ತಾಂತ್ರಿಕ ತೊಡಕುಗಳಿರುವ ಶೇ 20ರಷ್ಟು ಘೋಷಣೆಗಳ ಅನುಷ್ಠಾನಕ್ಕೆ ಸಿದ್ಧತೆ ನಡೆದಿದೆ. ಶೀಘ್ರದಲ್ಲಿ ಆದೇಶ ಹೊರಡಿಸಲಾಗುವುದು. ಮೊದಲ ಹಂತದಲ್ಲಿ ಕಾರ್ಯಕಾರಿ ಆದೇಶ ಹೊರಡಿಸಲಾಗುವುದು. ಎರಡನೇ ಹಂತದಲ್ಲಿ ಅನುಷ್ಠಾನ ಆರಂಭಿಸಲಾಗುವುದು. ಆರಂಭದಲ್ಲಿ ಪ್ರಮುಖ ಇಲಾಖೆಗಳಿಗೆ ವೇಳಾಪಟ್ಟಿ ನೀಡಲಾಗುವುದು. ನಂತರ ಎಲ್ಲ ಇಲಾಖೆಗಳಿಗೂ ವಿಸ್ತರಿಸಲಾಗುವುದು ಎಂದು ಹೇಳಿದರು.

ರಾಜ್ಯ ಮಟ್ಟದಲ್ಲಿ ಮಾತ್ರವಲ್ಲ, ಕೆಳಹಂತದವರೆಗೂ ನಿಗಾ ಇರಿಸಲಾಗುವುದು. ಫಲಾನುಭವಿಗಳ ಆಯ್ಕೆ ಹಾಗೂ ಸ್ಥಳೀಯವಾಗಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಂದಿನ ವಾರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಸಭೆ ನಡೆಸಲಾಗುವುದು ಎಂದರು.

ಸರಣಿ ಸಭೆ: ವೈದ್ಯಕೀಯ ಶಿಕ್ಷಣ, ಜಲ ಸಂಪನ್ಮೂಲ, ಲೋಕೋಪಯೋಗಿ, ಸಮಾಜ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ಬಜೆಟ್ ಘೋಷಣೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸರಣಿ ಸಭೆಗಳನ್ನು ನಡೆಸಿದರು.

ಹುಬ್ಬಳ್ಳಿಯಲ್ಲಿ ₹ 250 ಕೋಟಿ ವೆಚ್ಚದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಕೇಂದ್ರ ನಿರ್ಮಾಣಕ್ಕೆ ಆಗಸ್ಟ್ 15ರೊಳಗೆ ಭೂಮಿಪೂಜೆ ನೆರವೇರಿಸಬೇಕು. ರಾಮನಗರ ಜಿಲ್ಲೆಯ ಅರ್ಚಕರಹಳ್ಳಿಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕ್ಯಾಂಪಸ್ ನಿರ್ಮಾಣ ಕಾಮಗಾರಿಗೆ ಜೂನ್ ಅಂತ್ಯದೊಳಗೆ ಚಾಲನೆ ನೀಡಬೇಕು ಎಂದು ನಿರ್ದೇಶನ ನೀಡಿದರು.

ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನೆರವಿನಲ್ಲಿ 1,000 ಅಂಗನವಾಡಿಗಳಿಗೆ ಸ್ವಂತ ಕಟ್ಟಡ ನಿರ್ಮಿಸುವ ಯೋಜನೆಗೆ ವೇಗ ನೀಡಬೇಕು ಎಂದು ಮುಖ್ಯಮಂತ್ರಿ ಗಡುವು ನೀಡಿದರು.

ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್.ಪ್ರಸಾದ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಯೋಜನೆಗಳ ಜಾರಿ ಸಂಬಂಧ ಸಿ.ಎಂ ಸಭೆ
- ಬಜೆಟ್‌ನಲ್ಲಿ ಪ್ರಕಟಿಸಿದ್ದ ಘೋಷಣೆಗಳ ಪೈಕಿ ಶೇ 80 ರಷ್ಟು ಅನುಷ್ಠಾನಕ್ಕೆ ಆದೇಶ
- ಯೋಜನೆಗಳ ಅನುಷ್ಠಾನಕ್ಕೆ ಜಿಲ್ಲಾಧಿಕಾರಿಗಳು, ಜಿ.ಪಂ. ಅಧಿಕಾರಿಗಳ ಜೊತೆ ಸಭೆ

ದೇಸಿ ಕ್ರೀಡಾ ಉತ್ಸವ

ಗ್ರಾಮೀಣ ಹಾಗೂ ದೇಸಿ ಕ್ರೀಡೆಗಳಿಗೆ ಉತ್ತೇಜನ ನೀಡಲು ಖಾಸಗಿ ಪ್ರಾಯೋಜಕತ್ವದಲ್ಲಿ ಮೂರು ತಿಂಗಳ ಕಾಲ ವಿಶೇಷ ಕ್ರೀಡಾ ಉತ್ಸವ ನಡೆಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಕಬಡ್ಡಿ, ಖೋ- ಖೋ, ಕುಸ್ತಿ, ಎತ್ತಿನಗಾಡಿ ಓಟ ಸೇರಿದಂತೆ ಹತ್ತು ಪ್ರಮುಖ ದೇಸಿ ಹಾಗೂ ಗ್ರಾಮೀಣ ಕ್ರೀಡೆಗಳನ್ನು ಗುರುತಿಸಿ ಉತ್ಸವ ಆಯೋಜಿಸುವಂತೆ ಸೂಚನೆ ನೀಡಿದರು.

‘ಸಂಪುಟ ವಿಸ್ತರಣೆ: ದೆಹಲಿಯಿಂದ ಸಂದೇಶ ಬರಲಿದೆ’

ಬೆಂಗಳೂರು: ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಕುರಿತು ದೆಹಲಿಗೆ ಹೋದ ಬಳಿಕ ಸಂದೇಶ ನೀಡುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಈ ಕುರಿತು ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರಿಸದ ಅವರು, ‘ದೆಹಲಿಗೆ ಹೋಗಿ ಮಾತನಾಡುತ್ತೇನೆ ಎಂದು ಅಮಿತ್ ಶಾ ಹೇಳಿದ್ದಾರೆ’ ಎಂದರು.

ಸಂಕ್ಷಿಪ್ತ ಸುದ್ದಿ

ಅಮೆರಿಕದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಗೆ ಆಯ್ಕೆ


ಡಾ. ಕಮಲ್ ಬಾವಾ

ಬೆಂಗಳೂರು: ನಗರದ ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಇಕಾಲಜಿ ಆ್ಯಂಡ್ ಎನ್ವಿರಾನ್‌ಮೆಂಟ್ (ಎಟಿಆರ್‌ಇಇ) ಅಧ್ಯಕ್ಷ ಡಾ. ಕಮಲ್ ಬಾವಾ ಅವರು ಅಮೆರಿಕದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಗೆ ಆಯ್ಕೆಯಾಗಿದ್ದಾರೆ.

ಈ ಅಕಾಡೆಮಿಯು 170 ವರ್ಷದಷ್ಟು ಹಳೆಯದಾಗಿದೆ. ಡಾ. ಕಮಲ್ ಬಾವಾ ಅವರು ಲಂಡನ್‌ನ ರಾಯಲ್ ಸೊಸೈಟಿ ಮತ್ತು ಅಮೆರಿಕನ್ ಫಿಲಾಸಫಿಕಲ್ ಸೊಸೈಟಿಗೂ ಆಯ್ಕೆಯಾಗಿದ್ದರು.

'ಅಕಾಡೆಮಿಗೆ ಆಯ್ಕೆ ಮಾಡುವ ಮೂಲಕ ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಬದ್ಧತೆಯಿಂದ ನಾವು ಕೈಗೊಂಡಿರುವ ಕಾರ್ಯಗಳನ್ನು ಗುರುತಿಸಲಾಗಿದೆ’ ಎಂದು ಬಾವಾ ಪ್ರತಿಕ್ರಿಯಿಸಿದ್ದಾರೆ.

ಮೇ 7ಕ್ಕೆ ‘ಇಜ್ಞಾನ’ ವಿಚಾರ ಸಂಕಿರಣ

ಬೆಂಗಳೂರು: ಕನ್ನಡ ವಿಜ್ಞಾನ ಜಾಲತಾಣ ‘ಇಜ್ಞಾನ’ದ 15ನೇ ವಾರ್ಷಿಕೋತ್ಸವದ ಅಂಗವಾಗಿ ‘ಕನ್ನಡದಲ್ಲಿ ವಿಜ್ಞಾನ-ತಂತ್ರಜ್ಞಾನ ಶಿಕ್ಷಣ’ ಕುರಿತ ವಿಚಾರ ಸಂಕಿರಣವನ್ನು ಇದೇ 7ರಂದು ಸುರಾನ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಕಾಲೇಜಿನ ಕನ್ನಡ ವಿಭಾಗ ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಸಹಯೋಗದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಅಕಾಡೆಮಿ ಸಿಇಒ ಎ.ಎಂ.ರಮೇಶ್, ಕಾಲೇಜಿನ ಪ್ರಾಂಶುಪಾಲರಾದ ಎಂ.ಆರ್. ಭವಾನಿ, ವಿಜ್ಞಾನ ಸಂವಹನಕಾರರಾದ ಕೊಳ್ಳೇಗಾಲ ಶರ್ಮ, ಉದಯ ಶಂಕರ ಪುರಾಣಿಕ ಭಾಗವಹಿಸಲಿದ್ದಾರೆ.

ನಾಳೆಯಿಂದ ಎಲೆಕ್ಟ್ರಿಕ್ ವಾಹನಗಳ ಪ್ರದರ್ಶನ

ಬೆಂಗಳೂರು: ಕರ್ನಾಟಕ ಎಲೆಕ್ಟ್ರಿಕ್ ವಾಹನ ತಯಾರಕರು ಮತ್ತು ವಿತರಕರ ಸಂಘವು ಮೇ 6ರಿಂದ 8ರವರೆಗೆ ಎಲೆಕ್ಟ್ರಿಕ್ ವಾಹನಗಳ ಪ್ರದರ್ಶನವನ್ನು ತುಮಕೂರು ರಸ್ತೆಯಲ್ಲಿರುವ ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎ.ಆರ್.ನಾಗೇಶ್,‘ಎಲೆಕ್ಟ್ರಿಕ್ ವಾಹನಗಳ ಉದ್ಯಮದ 100ಕ್ಕೂ ಹೆಚ್ಚು ವಾಹನ ತಯಾರಿಕಾ ಕಂಪನಿಗಳು, ಬ್ಯಾಟರಿ ಕಂಪನಿಗಳು, ಬಿಡಿಭಾಗಗಳ ತಯಾರಕರು ಹಾಗೂ ವಿತರಕರು, ಹಣಕಾಸು ಸೇವೆ ಮತ್ತು ವಿಮಾ ಸಂಸ್ಥೆಗಳು ಪ್ರದರ್ಶನದಲ್ಲಿ ಭಾಗವಹಿಸಲಿವೆ’ ಎಂದು ಹೇಳಿದರು.

‘ರಾಷ್ಟ್ರಮಟ್ಟದ ಎಲೆಕ್ಟ್ರಿಕ್ ವಾಹನಗಳ ಸಂಸ್ಥೆಗಳು ಭಾಗವಹಿಸಲಿದ್ದು, ಒಂದೇ ಸೂರಿನಡಿ ಎಲೆಕ್ಟ್ರಿಕ್ ವಾಹನಗಳ ಲೋಕ ಅನಾವರಣಗೊಳ್ಳಲಿದೆ. ಮೂರು ದಿನ ನಡೆಯಲಿರುವ ಪ್ರದರ್ಶನದಲ್ಲಿ ಸಾರ್ವಜನಿಕರು ಭಾಗವಹಿಸಬಹುದು’ ಎಂದು ಅವರು ಮಾಹಿತಿ ನೀಡಿದರು.



ಓಕಳಿಪುರದ ರೈಲ್ವೆ ಕೆಳ ಸೇತುವೆಯಲ್ಲಿ ಮಳೆ ನೀರು ಸಂಗ್ರಹವಾಗಿದ್ದರಿಂದ ವಾಹನ ಸವಾರರು ಪರದಾಡಿದರು



ಜೆ.ಪಿ.ನಗರ 7ನೇ ಹಂತದಲ್ಲಿರುವ (ಪುಟ್ಟೇನಹಳ್ಳಿ) ಜಿನ ಮಂದಿರ ಆವರಣದಲ್ಲಿ ಮಳೆ ನೀರು ಸಂಗ್ರಹವಾಗಿತ್ತು —ಪ್ರಜಾವಾಣಿ ಚಿತ್ರಗಳು

‘ಮೇ 5ರಿಂದ ಟ್ರಾನ್ಸ್‌ಫಾರ್ಮರ್ ನಿರ್ವಹಣಾ ಅಭಿಯಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲ ಸಮೀಪಿಸುತ್ತಿರುವುದರಿಂದ ಟ್ರಾನ್ಸ್‌ಫಾರ್ಮರ್(ಪರಿವರ್ತಕ) ಸಂಬಂಧಿಸಿದ ದುರಂತಗಳನ್ನು ತಪ್ಪಿಸಲು ಮೇ 5ರಿಂದ20ರವರೆಗೆ ಟ್ರಾನ್ಸ್‌ಫಾರ್ಮರ್ ನಿರ್ವಹಣಾ ಅಭಿಯಾನ ಹಮ್ಮಿಕೊಳ್ಳಲು ಇಂಧನ ಇಲಾಖೆ ನಿರ್ಧರಿಸಿದೆ.

‘ರಾಜ್ಯದಲ್ಲಿ 15 ವರ್ಷಕ್ಕಿಂತಲೂ ಹಳೆಯ ಪರಿವರ್ತಕಗಳು ಸಾಕಷ್ಟಿವೆ. ಮಳೆಗಾಲದಲ್ಲಿ ಅವುಗಳ ನಿರ್ವಹಣೆ ಸಮಸ್ಯೆಯಾಗುತ್ತದೆ. ಸಿಡಿಲು ಇತ್ಯಾದಿ ಕಾರಣಗಳಿಂದ ಮತ್ತು ಒಮ್ಮೆಗೆ ಹೆಚ್ಚುವರಿ ವಿದ್ಯುತ್ ಪ್ರವಹಿಸಿ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿ ಉಂಟಾಗುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ಪರಿಶೀಲನೆಗೆ ಅಭಿಯಾನ ನಡೆಸಲಾಗುತ್ತಿದೆ’ ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದ್ದಾರೆ.

‘ಎಲ್ಲ ಹಂತದ ಅಧಿಕಾರಿಗಳು ಈ ಅಭಿಯಾನದಲ್ಲಿ ಭಾಗಿಯಾಗಬೇಕು. ಪರಿಶೀಲನೆ ನಡೆಸಿದ ಟ್ರಾನ್ಸ್‌ಫಾರ್ಮರ್‌ಗಳಲ್ಲಿನ ನ್ಯೂನತೆ, ಯಾವ ಕಾರಣಕ್ಕೆ ತೊಂದರೆ ಕಾಣಿಸಿಕೊಂಡಿದೆ ಎಂಬ ವಿವರವನ್ನು ಕೇಂದ್ರ ಕಚೇರಿಗೆ ಪ್ರತಿದಿನ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ. ಪ್ರತಿವರ್ಷ ಈ ರೀತಿಯ ಅಭಿಯಾನ ನಡೆಸುವುದರಿಂದ ಟ್ರಾನ್ಸ್‌ಫಾರ್ಮರ್‌ಗಳ ಕ್ಷಮತೆ ಹೆಚ್ಚಲಿದೆ’

‘ಇಲಾಖೆ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗೆ ಇಲಾಖೆ ಪ್ರತಿವರ್ಷ ₹ 150 ಕೋಟಿ ವೆಚ್ಚ ಮಾಡುತ್ತದೆ. ನಿರ್ವಹಣಾ ಕೆಲಸವನ್ನು ಕಾಲ ಕಾಲಕ್ಕೆ ನಡೆಸಿದರೆ ದುರಸ್ತಿ ವೆಚ್ಚ ತಗ್ಗಿಸಲು ಸಾಧ್ಯ. 24 ಗಂಟೆಯಲ್ಲಿ ಟ್ರಾನ್ಸ್‌ಫಾರ್ಮರ್ ಬದಲಾವಣೆ ಯೋಜನೆಯ ಮುಂದುವರಿದ ಭಾಗವಿದು. ನಿರ್ವಹಣಾ ಸಮಸ್ಯೆ ಏಕೆ ಉಂಟಾಗುತ್ತಿದೆ ಎಂಬುದನ್ನು ಅರ್ಥೈಸಿಕೊಂಡರೆ ಪರಿಹಾರ ಕಲ್ಪಿಸುವುದು ಸುಲಭ. ಅಲ್ಲದೆ, ಎಲ್ಲಿ ಹೊಸ ಟ್ರಾನ್ಸ್‌ಫಾರ್ಮರ್‌ಗಳ ತುರ್ತು ಅಗತ್ಯವಿದೆ ಎಂಬುದನ್ನೂ ತಿಳಿದುಕೊಳ್ಳಬಹುದು’ ಎಂದಿದ್ದಾರೆ. ‘ಕಳೆದೊಂದು ತಿಂಗಳ ಅವಧಿಯಲ್ಲಿ ನಡೆದ ಟ್ರಾನ್ಸ್‌ಫಾರ್ಮರ್ ದುರಂತಗಳ ಕಾರಣಕ್ಕೆ ಈ ಅಭಿಯಾನ ನಡೆಸಲು ತೀರ್ಮಾನಿಸಲಾಗಿದೆ’ ಎಂದೂ ಸುನಿಲ್ ಕುಮಾರ್ ತಿಳಿಸಿದ್ದಾರೆ.

ಮಳೆ: ಹೊಳೆಯಂತಾದ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಬುಧವಾರವೂ ಜೋರು ಮಳೆ ಸುರಿಯಿತು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಬಿಸಿಲಿನ ವಾತಾವರಣ ಇತ್ತು. ಸಂಜೆ ವೇಳೆಗೆ ಆಗಸದಲ್ಲಿ ಕಾರ್ಮೋಡ ದಟ್ಟೈಸಿತ್ತು. ಬಳಿಕ ಧಾರಾಕಾರ ಮಳೆಯಾಗಿದ್ದರಿಂದ ರಸ್ತೆಗಳು ಹೊಳೆಯಂತಾಗಿದ್ದವು.

ಅರ್ಧ ಗಂಟೆಗೂ ಹೆಚ್ಚು ಸಮಯ ಮಳೆ ಸುರಿಯಿತು. ದಿಢೀರ್ ಮಳೆಯಿಂದಾಗಿ ಚಳಿಯ ಅನುಭವವೂ ಆಯಿತು.



ಅವೆನ್ಯೂ ರಸ್ತೆಯ ಕುಂಬಾರ ಪೇಟೆಯಲ್ಲಿ ವ್ಯಾಪಾರಿಗಳು ರಸ್ತೆ ದಾಟಲು ಪರದಾಡಿದರು

ಮೈಸೂರು ಮತ್ತು ಮಾಗಡಿ ರಸ್ತೆ, ಜೆ.ಸಿ.ನಗರದಲ್ಲಿರುವ ದೂರದರ್ಶನ ಕೇಂದ್ರ, ಸಂಜಯನಗರ, ಗಂಗಾನಗರ, ಆರ್.ಟಿ.ನಗರ, ಹೆಬ್ಬಾಳ, ಚಾಮರಾಜಪೇಟೆ, ಕೆ.ಆರ್.ಮಾರುಕಟ್ಟೆ, ವಿಜಯನಗರ, ನಾಯಂಡಹಳ್ಳಿ, ಕೆಂಗೇರಿ, ಬ್ಯಾಟರಾಯನಪುರ, ಗಿರಿನಗರ, ಹೊಸಕೆರೆಹಳ್ಳಿ, ಶ್ರೀನಿವಾಸನಗರ, ಕತ್ರಿಗುಪ್ಪೆ, ಹನುಮಂತ ನಗರ, ರಾಜರಾಜೇಶ್ವರಿ ನಗರ, ದಾಸರಹಳ್ಳಿ, ಮಲ್ಲೇಶ್ವರ, ಮಹಾಲಕ್ಷ್ಮಿ ಬಡಾವಣೆ, ಎಂ.ಜಿ.ರಸ್ತೆ, ಇಂದಿರಾನಗರ, ಬ್ರಿಗೇಡ್ ರಸ್ತೆ, ಹಲಸೂರು, ಜೀವನ್‌ಬಿಮಾ ನಗರ, ಕೋರಮಂಗಲ, ಎಚ್‌ಎಸ್‌ಆರ್ ಬಡಾವಣೆ ಸೇರಿದಂತೆ ಹಲವೆಡೆ ಧಾರಾಕಾರ ಮಳೆಯಾಯಿತು. ಕೆಲವೆಡೆ ಸಂಚಾರ ದಟ್ಟಣೆಯೂ ಉಂಟಾಯಿತು.

ಶಾಂತಿನಗರ, ಮೆಜೆಸ್ಟಿಕ್, ಕಾರ್ಪೊರೇಷನ್ ವೃತ್ತ, ಕೆ.ಆರ್. ವೃತ್ತ, ಮೈಸೂರು ಬ್ಯಾಂಕ್ ವೃತ್ತ ಸೇರಿದಂತೆ ವಿವಿಧೆಡೆ ತಗ್ಗು ಪ್ರದೇಶಗಳಲ್ಲಿ ನೀರು ಸಂಗ್ರಹಣೆಯಾಗಿತ್ತು. ನಗರದ ಹಲವೆಡೆ ನೆಲದಡಿಯಲ್ಲಿ ವಿದ್ಯುತ್ ಕೇಬಲ್ ಅಳವಡಿಕೆ ಹಾಗೂ ಮೆಟ್ರೊ ಕಾಮಗಾರಿ ಪ್ರಗತಿಯಲ್ಲಿದ್ದು, ಇದಕ್ಕಾಗಿ ಅಗೆಯಲಾಗಿದ್ದ ಗುಂಡಿಗಳಲ್ಲೂ ಮಳೆ ನೀರು ಸಂಗ್ರಹವಾಗಿತ್ತು. ಅಲ್ಲಲ್ಲಿ ರಾಶಿ ಹಾಕಿದ್ದ ಮಣ್ಣು ಮಳೆಗೆ ಕೊಚ್ಚಿಕೊಂಡು ರಸ್ತೆ ಮೇಲೆ ಹರಡಿಕೊಂಡಿತ್ತು. ಆ ಮಾರ್ಗದಲ್ಲಿ ಸಾಗುವವರಿಗೆ ಕೆಸರಿನ ಸಿಂಚನವಾಯಿತು.

ಜೆ.ಪಿ.ನಗರ 7ನೇ ಹಂತದಲ್ಲಿರುವ (ಪುಟ್ಟೇನಹಳ್ಳಿ) ಜಿನ ಮಂದಿರ ಆವರಣದಲ್ಲಿ ಮಳೆ ನೀರು ಸಂಗ್ರಹವಾಗಿತ್ತು. ಕೆ.ಆರ್.ಮಾರುಕಟ್ಟೆ, ಅವೆನ್ಯೂ ರಸ್ತೆ ಸೇರಿ ಪ್ರಮುಖ ಮಾರುಕಟ್ಟೆಗಳಲ್ಲಿನ ವರ್ತಕರು ಹಾಗೂ ಬೀದಿಬದಿ ವ್ಯಾಪಾರಿಗಳು ಸಂಕಷ್ಟ ಅನುಭವಿಸಿದರು.



ಪ್ರತಿಭಟನೆ

ಪಿಎಸ್‌ಐ ಹಾಗೂ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಅಕ್ರಮದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಬೇಕು. ವಂಚಕರನ್ನು ಜೈಲಿಗೆ ಕಳುಹಿಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) ಬೆಂಗಳೂರು ಘಟಕದ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

ಅಧಿಕಾರಿಗಳ ವರ್ಗ

ಬೆಂಗಳೂರು: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿ ಡಾ.ಪಿ. ರವೀಂದ್ರನಾಥ್ ಅವರನ್ನು ಪೊಲೀಸ್ ತರಬೇತಿ ವಿಭಾಗದ ಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿದೆ. ಸ್ಥಳ ನಿರೀಕ್ಷಣೆಯಲ್ಲಿದ್ದ ಎಡಿಜಿಪಿ ಜೆ. ಅರುಣ್ ಚಕ್ರವರ್ತಿ ಅವರನ್ನು ನಾಗರಿಕ ಹಕ್ಕುಜಾರಿ ನಿರ್ದೇಶನಾಲಯಕ್ಕೆ ನಿಯೋಜಿಸಲಾಗಿದೆ.

ಪೊಲೀಸ್ ತರಬೇತಿ ವಿಭಾಗದ ಎಡಿಜಿಪಿ ಪಿ. ಹರಿಶೇಖರನ್ ಅವರನ್ನು ರಾಜ್ಯ ಅಗ್ನಿ ಮತ್ತು ತುರ್ತುಸೇವೆಗಳ ಮತ್ತು ಎಸ್‌ಡಿಆರ್‌ಎಫ್ ಘಟಕದ ಎಡಿಜಿಪಿಯಾಗಿ ವರ್ಗಾಯಿಸಲಾಗಿದೆ.

ನಕಲಿ ಜಾತಿ ಪ್ರಮಾಣಪತ್ರಗಳ ವಿಚಾರಣೆ ಕುರಿತು ಈಚೆಗೆ ಮಾಹಿತಿ ನೀಡಿದ್ದ ಡಾ.ಪಿ. ರವೀಂದ್ರನಾಥ್, ‘ಒಟ್ಟು 1,097 ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದು, 165 ಪ್ರಕರಣಗಳಲ್ಲಿ ತಹಶೀಲ್ದಾರ್ ಮತ್ತು ಇತರ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಪತ್ರ ಬರೆಯಲಾಗಿದೆ’ ಎಂದಿದ್ದರು.



ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ನಡೆದಿರುವ ಭ್ರಷ್ಟಾಚಾರವನ್ನು ಖಂಡಿಸಿ ಸ್ವಾತಂತ್ರ್ಯ ಉದ್ಯಾನದಿಂದ ಕೆಪಿಎಸ್‌ಸಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಹೊರಟಿದ್ದ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರನ್ನು ಪೊಲೀಸರು ಬುಧವಾರ ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ

ಹೊಸ ಬಾಗಲೂರಿನಲ್ಲಿ 'ಬರಿಗೊಡೆಗಳಿಗೆ ಸಮಾಧಾನ' ಹೇಳುತ್ತಿವೆ ನೀರಿಲ್ಲದ ಕೊಳವೆಗಳು

ಬಡಾವಣೆಯಲ್ಲಿ ನೀರಿಗೆ ಹಾಹಾಕಾರ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕಾವೇರಿ ನೀರಿನ ಕೊಳವೆಗಳಲ್ಲಿ ವಾರದಿಂದ ಬರೀ ಗಾಳಿ, ಪ್ರತಿ ಮನೆಯ ಮುಂದೆಯೂ ಪ್ಲಾಸ್ಟಿಕ್ ತೊಟ್ಟಿಗಳ ಸಾಲು, ಕಿಲೋ ಮೀಟರ್‌ಗಟ್ಟಲೆ ಸುತ್ತಾಡಿ ನೀರು ತರುವ ನಿವಾಸಿಗಳು...

ಇದು ಯಾವುದೋ ಹಳ್ಳಿಯ ಸ್ಥಿತಿಯಲ್ಲ, ನಗರದ ಒಳಭಾಗದಲ್ಲೇ ಇರುವ ಸಗಾಯಪುರ ವಾರ್ಡ್‌ನ ಹೊಸ ಬಾಗಲೂರು ಬಡಾವಣೆಯ ಸ್ಥಿತಿ. ಬೆಂಗಳೂರು ಪೂರ್ವ ರೈಲು ನಿಲ್ದಾಣದಿಂದ ಹೆಣ್ಣೂರು ಮುಖ್ಯ ರಸ್ತೆಯಲ್ಲಿ ಸಾಗಿದರೆ ಎದುರಾಗುವ ಮೇಲ್ಸೇತುವೆಯ ಎಡಭಾಗದಲ್ಲಿ ಹೊಸ ಬಾಗಲೂರು ಬಡಾವಣೆ ಇದೆ.

ಈ ಬಡಾವಣೆಯ ಚಿಕ್ಕ–ಚಿಕ್ಕ ಮನೆಗಳಲ್ಲಿ ಸಾವಿರಾರು ಕುಟುಂಬಗಳು ನೆಲೆಸಿವೆ. ಎಲ್ಲರ ಮನೆಯ ಮುಂದೆಯೂ ನೀಲಿ ಬಣ್ಣದ ದೊಡ್ಡ ದೊಡ್ಡ ಪ್ಲಾಸ್ಟಿಕ್ ತೊಟ್ಟಿಗಳು ನಿಂತಿವೆ. ಆಗೊಮ್ಮೆ ಈಗೊಮ್ಮೆ ಜಲಮಂಡಳಿ ಒದಗಿಸುವ ಕಾವೇರಿ ನೀರು ಸಂಗ್ರಹ ಮಾಡಿಕೊಳ್ಳಲು ನಿವಾಸಿಗಳು ಈ ತೊಟ್ಟಿಗಳನ್ನು ಇರಿಸಿಕೊಂಡಿದ್ದಾರೆ.

'ಕೆಲವು ಬಾರಿ ವಾರಕ್ಕೊಮ್ಮೆ ನೀರು ಬಂದರೆ, ಮತ್ತೆ ಕೆಲವೊಮ್ಮೆ 10 ದಿನಗಳ ನಂತರ ನೀರು ಬರುತ್ತದೆ. ಅದೂ ಮಧ್ಯರಾತ್ರಿಯಲ್ಲಿ. ದಿನವಿಡೀ ಕೆಲಸ ಮಾಡಿ ಬಂದು ರಾತ್ರಿ ನಿದ್ರೆಗೆ ಜಾರಿದರೆ ಮುಂದಿನ ವಾರದ ತನಕ ಕಾಯಬೇಕಾಗುತ್ತದೆ' ಎಂದು ನಿವಾಸಿಗಳು ಅಳಲು ತೋಡಿಕೊಳ್ಳುತ್ತಾರೆ.

'ಜಲಮಂಡಳಿ ಅಧಿಕಾರಿಗಳಿಗೆ ಎಷ್ಟು ಬಾರಿ ಮನವಿ ಮಾಡಿದರೂ ಪ್ರಯೋಜನವೇ ಆಗಿಲ್ಲ. ಮನೆಯಲ್ಲಂತೂ ನೀರಿಲ್ಲ, ಅಧಿಕಾರಿಗಳ ಮುಂದೆ ಕಣ್ಣೀರು ಹಾಕಿ ಅವೂ ಬತ್ತಿ ಹೋಗಿವೆ. ಕನಿಷ್ಠ ಕುಡಿಯುವ ನೀರು ಪೂರೈಸದಿದ್ದರೆ ನಮ್ಮ ಜೀವಗಳು ಉಳಿಯುವುದಾದರೂ ಹೇಗೆ' ಎಂದು ಭಾವುಕರಾಗಿ ಪ್ರಶ್ನಿಸುತ್ತಾರೆ.



ಸಗಾಯಪುರ ವಾರ್ಡ್‌ನ ಹೊಸ ಬಾಗಲೂರು ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ನೀರು ತುಂಬಿಟ್ಟುಕೊಳ್ಳಲು ಮನೆಗಳ ಮುಂದೆ ಜೋಡಿಸಿರುವ ಪ್ಲಾಸ್ಟಿಕ್ ಡ್ರಮ್‌ಗಳು –ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.



ಎಲ್ಲರೂ ಕೂಲಿ ಮಾಡಿಕೊಂಡೇ ಜೀವನ ಸಾಗಿಸುತ್ತಿದ್ದಾರೆ. ನೀರು ತರಲು ಕಿಲೋ ಮೀಟರ್‌ಗಟ್ಟಲೆ ಸುತ್ತಾಡಿ ದಿನ ಕಳೆದರೆ ಆ ದಿನ ಹೊಟ್ಟೆಗೆ ತಿನ್ನುವುದಾದರೂ ಏನು

ಅರುಣ್, ಹೊಸ ಬಾಗಲೂರು ನಿವಾಸಿ



ನೀರು ಹುಡುಕಿ ತರುವುದೇ ನಮಗೆ ದೊಡ್ಡ ಕೆಲಸವಾಗಿದ್ದು, ಈ ಸಮಸ್ಯೆಯಿಂದ ಬಿಡುಗಡೆ ಕೊಡಿಸಬೇಕು. ಸಮರ್ಪಕವಾಗಿ ಕುಡಿಯುವ ನೀರು ಪೂರೈಸಬೇಕು

ಸುಧಾಕರ್, ಹೊಸ ಬಾಗಲೂರು ನಿವಾಸಿ

'ಮೀಟರ್ ಅಳವಡಿಕೆ ಆಗದ ಸಮಸ್ಯೆ'

'ಮೀಟರ್ ಅಳವಡಿಕೆ ಮಾಡಿಕೊಳ್ಳಲು ನಿವಾಸಿಗಳು ಹಿಂದೇಟು ಹಾಕುತ್ತಿರುವುದೇ ಸಮಸ್ಯೆಗೆ ಮೂಲ ಕಾರಣ. ಅದರೂ ಅವರು ದಿನನಿತ್ಯವೂ ನೀರು ಪೂರೈಸುತ್ತಿದ್ದೇವೆ' ಎಂದು ಜಲಮಂಡಳಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹರಿನಾಥ್ ಸ್ಪಷ್ಟಪಡಿಸಿದರು.

'ಮೀಟರ್ ಅಳವಡಿಕೆ ಮಾಡಿಕೊಳ್ಳದಿದ್ದರೆ ನೀರಿನ ಬಳಕೆ ಲೆಕ್ಕಕ್ಕೆ ಸಿಗುತ್ತಿಲ್ಲ. ಈ ಬಡಾವಣೆಗೆ 100 ಎಂಎಲ್‌ಡಿ ನೀರು ಪೂರೈಸಲಾಗುತ್ತಿದ್ದು, 15 ಎಂಎಲ್‌ಡಿ ನೀರಿಗಷ್ಟೇ ಶುಲ್ಕ ಸಂಗ್ರಹವಾಗುತ್ತಿದೆ. ಉಳಿದ ನೀರಿಗೆ ಲೆಕ್ಕ ಕೊಡುವುದು ಕಷ್ಟವಾಗಿದೆ' ಎಂದರು.

'ಮೀಟರ್ ಅಳವಡಿಕೆ ಬಗ್ಗೆ ಹತ್ತಾರು ಬಾರಿ ತಿಳುವಳಿಕೆ ನೀಡಲಾಗಿದೆ. ನಿವಾಸಿಗಳು ಆ ಬಗ್ಗೆ ಗಮನ ಹರಿಸುತ್ತಿಲ್ಲ. ಆದರೂ ನೀರು ಪೂರೈಸಲಾಗುತ್ತಿದೆ. ಮೂರು ತಿಂಗಳಿಂದ ನೀರು ಪೂರೈಕೆ ಆಗದಿರುವ ಬೀದಿಗಳಿದ್ದರೆ ಪರಿಶೀಲಿಸಿ ಸಮಸ್ಯೆ ಬಗೆಹರಿಸಲಾಗುವುದು' ಎಂದು ಹೇಳಿದರು.

'ಮೂರು ತಿಂಗಳಿಂದ ನೀರಿಲ್ಲ'

'ಇದೇ ಬಡಾವಣೆಯ 21ನೇ ಮುಖ್ಯ ರಸ್ತೆಗೆ ಮೂರು ತಿಂಗಳಿಂದ ನೀರು ಬಂದಿಲ್ಲ. ಮನೆಯ ಮೇಲಿಂದ ಬೀಳುವ ನೀರನ್ನು ಸಂಗ್ರಹಿಸಿಕೊಂಡು ಬಳಸುತ್ತಿದ್ದೇವೆ' ಎಂದು ಮಣ್ಣು ಮಿಶ್ರಿತ ನೀರನ್ನು ನಿವಾಸಿಗಳು ತೋರಿಸುತ್ತಾರೆ.

'ವಾರಕ್ಕೊಮ್ಮೆ ಬೀದಿಗಳಲ್ಲಿ ಬರುವ ನೀರು ತರಲು ಹೋದರೆ ಅವಕಾಶ ಸಿಗುವುದಿಲ್ಲ. ಬರುವ ನೀರು ಆ ಬೀದಿಗಳ ನಿವಾಸಿಗಳಿಗೇ ಸಾಕಾಗುವುದಿಲ್ಲ, ಬೇರೆ ಕಡೆಯಿಂದ ನಾವು ಪಾಲು ಕೇಳುವುದು ಕಷ್ಟವಾಗಿದೆ' ಎಂದು ಜಯಮ್ಮ ಅಳಲು ತೋಡಿಕೊಂಡರು.

'ಮನೆಗಳ ಮುಂದಿರುವ ಪೈಪ್‌ಗಳಿಗೆ ನಳಗಳನ್ನು ಜೋಡಿಸಿ, ಮೀಟರ್ ಅಳವಡಿಸಿ ಬೇಡಿಕೆಗೆ ತಕ್ಕಂತೆ ನೀರು ಪೂರೈಸಿದರೆ ಶುಲ್ಕ ಪಾವತಿಸಲು ನಾವು ಸಿದ್ಧರಿದ್ದೇವೆ. ಆದರೆ ಶುಲ್ಕದ ಬಗ್ಗೆಯಷ್ಟೇ ಅಧಿಕಾರಿಗಳು ಮಾತನಾಡುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಕಾನೂನು ಉಲ್ಲಂಘನೆ ಸಹಿಸುವುದಿಲ್ಲ'

ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಎಚ್ಚರಿಕೆ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆ ಪ್ರಕರಣದಲ್ಲಿ 36 ವರ್ಷ ಜೈಲುವಾಸ ಅನುಭವಿಸಿರುವ ಎ.ಜಿ ಪೆರಾರಿವಾಲನ್ ಕ್ಷಮಾಪಣೆ ಬಗ್ಗೆ ರಾಷ್ಟ್ರಪತಿಗಳು ನಿರ್ಧಾರ ತೆಗೆದುಕೊಳ್ಳುವವರೆಗೆ ಕೋರ್ಟ್ ಕಾಯಬೇಕು ಎಂದು ಕೇಂದ್ರ ಸರ್ಕಾರ ನೀಡಿದ್ದ ಸಲಹೆಯನ್ನು ಸುಪ್ರೀಂಕೋರ್ಟ್ ಬುಧವಾರ ತಳ್ಳಿಹಾಕಿದೆ.

'ವಾದ ಮುಂದುವರಿಸಲು ನೀವು ಸಿದ್ಧರಿಲ್ಲದಿದ್ದರೆ ಪೆರಾರಿವಾಲನ್ ಬಿಡುಗಡೆಗೆ ನಾವು ಆದೇಶ ನೀಡುತ್ತೇವೆ. ಸಂವಿಧಾನ ಉಲ್ಲಂಘಿಸಿ ನಡೆಯುತ್ತಿರುವ ವಿದ್ಯಮಾನಗಳನ್ನು ಕಣ್ಣುಮುಚ್ಚಿಕೊಂಡು ನೋಡಲು ಸಾಧ್ಯವಿಲ್ಲ' ಎಂದು ಕೋರ್ಟ್ ಹೇಳಿತು.

ಕಡತವನ್ನು ರಾಜ್ಯಪಾಲರು ರಾಷ್ಟ್ರಪತಿಗಳಿಗೆ ಕಳುಹಿಸಿದ್ದಾರೆ ಎಂದು ಕೇಂದ್ರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ತಿಳಿಸಿದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರಿದ್ದ ಪೀಠವು, ಪೆರಾರಿವಾಲನ್ ವಿಚಾರದಲ್ಲಿ ತಮಿಳುನಾಡು ರಾಜ್ಯ ಮಂತ್ರಿ ಪರಿಷತ್ ಕೈಗೊಂಡ ನಿರ್ಣಯಕ್ಕೆ ರಾಜ್ಯಪಾಲರು ಬದ್ಧರಾಗಿರುತ್ತಾರೆ. ಆದರೆ, ಈ ವಿಚಾರದಲ್ಲಿ ರಾಜ್ಯಪಾಲರಿಗಿಂತ ಕೋರ್ಟ್ ನಿರ್ಧಾರವೇ ಮುಖ್ಯವಾಗುತ್ತದೆ. ಈ ವಿಚಾರ ಪರಿಶೀಲಿಸುತ್ತೇವೆ' ಎಂದಿತು.

ರಾಜ್ಯ ಸಂಪುಟದ ನಿರ್ಣಯವನ್ನು ರಾಷ್ಟ್ರಪತಿಗಳಿಗೆ ರಾಜ್ಯಪಾಲರು ಕಳುಹಿಸಬಹುದೇ ಎಂಬ ಬಗ್ಗೆ ಕೋರ್ಟ್ ನಿರ್ಧರಿಸುತ್ತದೆ ಎಂದು ಪೀಠ ಹೇಳಿತು.

ಎಸಿಬಿ ಹೆಸರಲ್ಲಿ ಸುಲಿಗೆ: ಎಫ್‌ಐಆರ್

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳ ಹೆಸರು ಬಳಸಿಕೊಂಡು ದುಷ್ಕರ್ಮಿಗಳು ಸರ್ಕಾರಿ ಅಧಿಕಾರಿಗಳು ಮತ್ತು ನೌಕರರಿಂದ ಹಣ ವಸೂಲಿ ಮಾಡುತ್ತಿರುವ ಆರೋಪದ ಮೇಲೆ ರಾಜ್ಯದ ವಿವಿಧೆಡೆ ಒಟ್ಟು 26 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಎಸಿಬಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸೀಮಾಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

'ಸರ್ಕಾರಿ ನೌಕರರು ನೀಡಿರುವ ದೂರುಗಳನ್ನು ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ಈ ಪೈಕಿ ಆರು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿದೆ. 20 ಪ್ರಕರಣಗಳು ತನಿಖಾ ಹಂತದಲ್ಲಿವೆ' ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಎಸಿಬಿ ಅಧಿಕಾರಿಗಳ ಹೆಸರಿನಲ್ಲಿ ಸಂಪರ್ಕಿಸಿ, ಹಣ, ಇತರ ಉಡುಗೊರೆಗಳಿಗೆ ಬೇಡಿಕೆ ಇಟ್ಟಲ್ಲಿ ಸರ್ಕಾರಿ ನೌಕರರು ತಕ್ಷಣ ಎಸಿಬಿಗೆ ಮಾಹಿತಿ ನೀಡಿ, ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಬೇಕು ಎಂದು ತಿಳಿಸಿದರು.

7ರಂದು ಪುಲಿಕೇಶಿನಗರದಲ್ಲಿ ಜನಸ್ಪಂದನ

ಜನಸ್ಪಂದನ ಸಿಟಿಜನ್ಸ್ ಫಾರ್ ಚೇಂಜ್

ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಮೇ 7ರಂದು ಸುಲ್ತಾನ್ ಪಾಳ್ಯದ ಗಣೇಶ ಬ್ಲಾಕ್‌ನ ಒಂದನೇ ಅಡ್ಡರಸ್ತೆಯ ಪಾಲಿಕೆಯ ಮೈದಾನದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಆಯೋಜಿಸಲಾಗಿದೆ. ಶಾಸಕ ಅಖಂಡ ಶ್ರೀನಿವಾಸಮೂರ್ತಿ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು. ಆಸಕ್ತರು ಬೆಳಿಗ್ಗೆ 9ರಿಂದ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಸಂಪರ್ಕ: 9916674666

'ಕಾಂಗ್ರೆಸ್‌ನ ಟೂಲ್‌ಕಿಟ್ ರಾಜಕಾರಣ'

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಅಕ್ರಮ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಕಾಂಗ್ರೆಸ್ ಪಕ್ಷವು ಯಾವುದೇ ದಾಖಲೆಗಳ ಆಧಾರವಿಲ್ಲದೇ ರಾಜ್ಯದ ಸಚಿವರ ವಿರುದ್ಧ ಸುಳ್ಳು ಆರೋಪ ಹೊರಿಸುವ 'ಟೂಲ್‌ಕಿಟ್' ರಾಜಕಾರಣ ಮಾಡುತ್ತಿದೆ ಎಂದು ಬಿಜೆಪಿ ಶಾಸಕ ಪಿ. ರಾಜೀವ್ ಆರೋಪಿಸಿದರು.

ಬುಧವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಅವರು, 'ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರ ಬಳಿ ಪಿಎಸ್‌ಐ ನೇಮಕಾತಿ ಅಕ್ರಮದ ಕುರಿತು ದಾಖಲೆಗಳಿದ್ದರೆ ಸಿಐಡಿ ಅಧಿಕಾರಿಗಳಿಗೆ ನೀಡಲಿ. ಅದು ಸಾಧ್ಯವಾಗದಿದ್ದರೆ ಮಾಧ್ಯಮಗಳಿಗೆ ಬಿಡುಗಡೆ ಮಾಡಲಿ' ಎಂದು ಸವಾಲು ಹಾಕಿದರು.

ಹರ್ಷ ಹತ್ಯೆ: ಎನ್‌ಐಎ ಕಸ್ಟಡಿಗೆ ಐವರು ಆರೋಪಿಗಳು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಜರಂಗದಳ ಕಾರ್ಯಕರ್ತ ಶಿವಮೊಗ್ಗದ ಹರ್ಷ ಹತ್ಯೆಯ ಐವರು ಕೊಲೆ ಆರೋಪಿಗಳನ್ನು ಹೆಚ್ಚಿನ ತನಿಖೆಗಾಗಿ, ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯವು ಎನ್‌ಐಎ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಈ ಕುರಿತಂತೆ ಎನ್‌ಐಎ ಪರ ವಕೀಲರು ಸಲ್ಲಿಸಿದ ಅರ್ಜಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯದ ಉಸ್ತುವಾರಿ ನ್ಯಾಯಾಧೀಶ ಬಿ.ಜಿ. ಪ್ರಮೋದ್ ಬುಧವಾರ ವಿಚಾರಣೆ ನಡೆಸಿ ಆರೋಪಿಗಳನ್ನು ಎನ್‌ಐಎ ವಶಕ್ಕೆ ನೀಡಲು ಆದೇಶಿಸಿದರು.

ಆರೋಪಿಗಳಾದ ಅಬ್ದುಲ್ ಅಫ್ನಾನ್ (21), ಅಬ್ದುಲ್ ಖಾದರ್ ಜಿಲಾನ್ (25), ಫರಜ್ ಪಾಷಾ (24), ಸೈಯದ್ ನದೀಂ (20) ಮತ್ತು ಜಾಫರ್ ಸಾದಿಕ್ (50) ಇವರನ್ನು ಮೇ 5 ರಿಂದ 9ರ ಮಧ್ಯಾಹ್ನದವರೆಗೆ ಎನ್‌ಐಎ ಕಸ್ಟಡಿಗೆ ನೀಡಿ ಆದೇಶಿಸಲಾಗಿದೆ.

ಶಿವಮೊಗ್ಗದಲ್ಲಿ ನಡೆದ ಹರ್ಷ ಹತ್ಯೆಯಾದ ಪ್ರಕರಣವನ್ನು ಎನ್‌ಐಎ ತನಿಖೆಗೆ ಒಪ್ಪಿಸಲಾಗಿದ್ದು, ಈವರೆಗಿನ ಹತ್ತು ಜನ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ.

ಲ್ಯಾಪ್‌ಟಾಪ್, ಫೋನ್ ಬಿಟ್ಟು ಪರಾರಿಯಾದ ಪ್ರಯಾಣಿಕ

ಬೆಂಗಳೂರು: ಅನುಮಾನಾಸ್ಪದ ವ್ಯಕ್ತಿಯೊಬ್ಬರು ಬಸ್‌ನಲ್ಲಿ ಏಳು ಲ್ಯಾಪ್‌ಟಾಪ್ ಮತ್ತು ಮೊಬೈಲ್ ಫೋನ್‌ಗಳನ್ನು ಬಿಟ್ಟು ಪರಾರಿಯಾಗಿದ್ದು, ಅವುಗಳನ್ನು ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕ ಸುರಕ್ಷಿತವಾಗಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಮೇ 3ರಂದು ಬೆಂಗಳೂರಿನಿಂದ ವೇಲೂರಿಗೆ ಹೊರಟ್ಟಿದ್ದ ಬಸ್‌ನಲ್ಲಿ ಬಿ.ಸಿ. ಮಂಜುನಾಥ್ ನಿರ್ವಾಹಕರಾಗಿದ್ದರು. ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಮಧ್ಯಾಹ್ನ 2.30ಕ್ಕೆ ಹೊರಟ ಬಸ್‌ನಲ್ಲಿ ಬ್ಯಾಗ್ ಸಹಿತ ಹತ್ತಿದ್ದ ವ್ಯಕ್ತಿಯೊಬ್ಬ ಅಂಬೂರಿಗೆ ಟಿಕೆಟ್ ಪಡೆದಿದ್ದರು.

ಕೊನೆಯ ಸೀಟಿನಲ್ಲಿ ಕುಳಿತಿದ್ದ ಆ ವ್ಯಕ್ತಿ ಬಗ್ಗೆ ಅನುಮಾನ ಬಂದು ಬ್ಯಾಗ್ ಪರಿಶೀಲಿಸಲು ನಿರ್ವಾಹಕ ಮುಂದಾದರು. ಆದಕ್ಕೆ ವಿರೋಧ ವ್ಯಕ್ತಪಡಿಸಿದ ವ್ಯಕ್ತಿ, ಮಡಿವಾಳ ಬಳಿ ಬಸ್ ನಿಲ್ಲಿಸಿದಾಗ ಇಳಿದು ಪರಾರಿಯಾದರು. ನಂತರ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಏಳು ಲ್ಯಾಪ್‌ಟಾಪ್ ಮತ್ತು ಏಳು ಮೊಬೈಲ್ ಫೋನ್‌ಗಳಿರುವುದು ಕಂಡು ಬಂದಿದ್ದು, ಮಂಜುನಾಥ್ ಅವರ ಕರ್ತವ್ಯ ನಿಷ್ಠೆ ಮೆಚ್ಚಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಅಭಿನಂದನಾ ಪತ್ರ ನೀಡಿ ಶ್ಲಾಘಿಸಿದರು.

ಸಾರಿಗೆ ನೌಕರರ ವೇತನ ಹೆಚ್ಚಳ: ಭರವಸೆ

ಶಿರಾ: ಸಾರಿಗೆ ಸಂಸ್ಥೆ ಸಿಬ್ಬಂದಿಗೆ ವೇತನ ಹೆಚ್ಚಳದ ಬಗ್ಗೆ ಹಣಕಾಸು ಇಲಾಖೆ ಜತೆ ಚರ್ಚಿಸಿ ಸಕಾರಾತ್ಮಕ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಭರವಸೆ ನೀಡಿದರು.

ನಗರದಲ್ಲಿ ಬುಧವಾರ ಬಸ್ ನಿಲ್ದಾಣ ಕಾಮಗಾರಿಗೆ ಚಾಲನೆ ನೀಡಿ, 'ಸಾರಿಗೆ ಸಿಬ್ಬಂದಿಗೆ ಪ್ರತಿ ತಿಂಗಳು ಸಂಬಳವಾಗದ ಸಮಸ್ಯೆ ಗಮನದಲ್ಲಿದೆ. ಸಕಾಲಕ್ಕೆ ವೇತನ ವಿತರಣೆಗೆ ಕ್ರಮವಹಿಸಲಾಗುವುದು' ಎಂದರು.

'ಅರವತ್ತು ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪರ್ಸಂಟೇಜ್ ವ್ಯವಹಾರಕ್ಕೆ ಜನ್ಮ ನೀಡಿದೆ. ಸಚಿವ ಆಶ್ವತ್ಥನಾರಾಯಣ ಅವರ ವಿರುದ್ಧ ಡಿ.ಕೆ.ಶಿ ನಿರಾಧಾರ ಆರೋಪ ಹೊರಿಸುತ್ತಿದ್ದಾರೆ. ಭ್ರಷ್ಟಾಚಾರದಲ್ಲಿ ಮುಳುಗಿದ್ದ ಕಾಂಗ್ರೆಸ್‌ನವರು ತಮ್ಮ ತಪ್ಪನ್ನು ಬಿಜೆಪಿ ಮೇಲೆ ಹೊರಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ಪ್ರತ್ಯುತ್ತರ ನೀಡಿದರು.

'ನೇಮಕಾತಿ ಹಗರಣವನ್ನು ಈಗಿನ ಸರ್ಕಾರ ಪತ್ತೆ ಹಚ್ಚಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ' ಎಂದರು.

'ಬಿಎಸ್‌ವೈ ಮಗನಿಗೆ ಟಿಕೆಟ್ ನೀಡುವುದು, ಬಿಡುವುದು ಪಕ್ಷದ ವರಿಷ್ಠರ ನಿರ್ಧಾರ. ಪಕ್ಷದ ಹಿರಿಯರನ್ನು ಎಲ್ಲರೂ ಗೌರವಿಸುತ್ತಾರೆ. ಜನಾರ್ದನ ರೆಡ್ಡಿ ಅವರನ್ನು ರಾಜಕೀಯ ಲಾಭ, ನಷ್ಟ ಆಧರಿಸಿ ಪಕ್ಷ ತೀರ್ಮಾನಿಸಲಿದೆ. ಅವರು ಪುನಃ ಬಂದರೆ ಸಂತೋಷ' ಎಂದರು.

ಕೆಪಿಸಿಸಿ ಅಧ್ಯಕ್ಷ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕೆ

‘ಅಶ್ವತ್ಥನಾರಾಯಣ ಅತ್ಯಂತ ಭ್ರಷ್ಟ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಸಚಿವ ಅಶ್ವತ್ಥನಾರಾಯಣ ಕರ್ನಾಟಕ ಕಂಡಂತಹ ಅತ್ಯಂತ ಭ್ರಷ್ಟ ರಾಜಕಾರಣಿಗಳಲ್ಲಿ ಒಬ್ಬರು. ಆದರೂ ನಾನು ಬ್ರಾಹ್ಮಣನ ಥರ ಇದ್ದೇನೆ, ಶುದ್ಧ ರಾಜಕಾರಣಿ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕಿಸಿದರು.

ದೊಡ್ಡಾಲಹಳ್ಳಿಯಲ್ಲಿ ಬುಧವಾರ ಪತ್ರಕರ್ತರ ಜೊತೆ ಅವರು ಮಾತನಾಡಿದರು. ‘ರಾಜ್ಯಕ್ಕೆ ಅಮಿತ್ ಶಾ ಬರುತ್ತಿದ್ದಾರೆ ಎಂಬ ಕಾರಣಕ್ಕೆ ನಾವು ಅಶ್ವತ್ಥನಾರಾಯಣ ಅವರನ್ನು ಟಾರ್ಗೆಟ್ ಮಾಡಿಲ್ಲ. ಸತ್ಯ ಜನರ ಮುಂದೆ ಇಟ್ಟಿದ್ದೇವೆ. ನಮ್ಮ ವಿರುದ್ಧ ಏನು ಬೇಕಾದರೂ ತನಿಖೆ ಮಾಡಲಿ. ಅದನ್ನೆಲ್ಲ ಎದುರಿಸಲು ಸಿದ್ಧರಿದ್ದೇವೆ’ ಎಂದರು.

ಬಿಜೆಪಿ ಮಂತ್ರಿಗಳಿಂದಲೇ ಅಶ್ವತ್ಥನಾರಾಯಣ ವಿರುದ್ಧ ಷಡ್ಯಂತ್ರ ನಡದಿದೆ ಎಂಬ ಕುಮಾರಸ್ವಾಮಿ ಆರೋಪ ಕುರಿತು ಪ್ರತಿಕ್ರಿಯಿಸಿ ‘ಪಕ್ಕದ ಮನೆಯಲ್ಲಿ ಇದ್ದವರೇ ಕಲ್ಲು ಹೊಡೆಯುವುದು ಸಹಜ. ಬಹುತೇಕ ಸಂದರ್ಭದಲ್ಲಿ ಹತ್ತಿರ ಇದ್ದವರೇ ಮಾಹಿತಿ ನೀಡುತ್ತಾರೆ. ಹೀಗಾಗಿ ಕುಮಾರಸ್ವಾಮಿ ಮಾತು ನಿಜ ಇದ್ದರೂ ಇರಬಹುದು’ ಎಂದರು.

‘ಪಿಎಸ್‌ಐ ಪರೀಕ್ಷೆಯಲ್ಲಿ ನಾಲ್ಕನೇ ರ‍್ಯಾಂಕ್ ಪಡೆದ ವ್ಯಕ್ತಿಯೊಬ್ಬರಿಗೆ ಪೊಲೀಸರು ವಿಚಾರಣೆಗೆ ನೋಟಿಸ್ ನೀಡಿದ್ದರು. ಆದರೆ ಸಚಿವರ ಸಂಬಂಧಿ ಹೇಳಿದ ನಂತರ ವಿಚಾರಣೆ ಮಾಡದೇ ಕಳುಹಿಸಿದ್ದಾರೆ. ಇದರ ಅರ್ಥ ಏನು?’ ಎಂದು ಶಿವಕುಮಾರ್ ಪ್ರಶ್ನಿಸಿದರು.

‘ರಾಮನಗರ ಜಿಲ್ಲೆಯ ಮೂರ್ನಾಲ್ಕು ಮಂದಿಯೂ ಪೊಲೀಸ್ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದು, ನಮಗೆ ಬೇಕಾದ ಹುಡುಗರೂ ಇದ್ದಾರೆ. ಈಗ ವಿಚಾರಣೆ ಎದುರಿಸುತ್ತಿದ್ದಾರೆ. ಅವರಿಗೆ ಅಕ್ರಮದಲ್ಲಿ ಮಂತ್ರಿಗಳು ಸಹಾಯ ಮಾಡಿದ್ದಾರೋ ಇಲ್ಲ ಅವರ ಸಂಬಂಧಿಕರು ಸಹಾಯ ಮಾಡಿದ್ದಾರೋ ಗೊತ್ತಿಲ್ಲ. ಅಂಗಡಿ ತೆರೆದಾಗ ಗ್ರಾಹಕರು ಬರುವುದು ಸಹಜ. ಸರ್ಕಾರ ಭ್ರಷ್ಟಾಚಾರಕ್ಕೆ ಮುಂದಾಗಿದ್ದರಿಂದಲೇ ಕೆಲವರು ನೌಕರಿ ಆಸೆಗೆ ಸಾಲ–ಸೋಲ ಮಾಡಿ ಹಣ ಕೊಟ್ಟು ಈಗ ಸಿಕ್ಕಿಹಾಕಿಕೊಂಡಿದ್ದಾರೆ’ ಎಂದರು.



ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥ ನಾರಾಯಣ ರಾಜೀನಾಮೆಗೆ ಆಗ್ರಹಿಸಿ ಬಿ.ಕೆ.ಹರಿಪ್ರಸಾದ್ ನೇತೃತ್ವದಲ್ಲಿ ಬುಧವಾರ ಮಲ್ಲೇಶ್ವರ ಆಟದ ಮೈದಾನದಲ್ಲಿ ಪ್ರತಿಭಟನೆ ನಡೆಸುವ ವೇಳೆ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಕರೆದೊಯ್ದರು —ಪ್ರಜಾವಾಣಿ ಚಿತ್ರ

ಕೆಪಿಎಸ್‌ಸಿಗೂ ಕಳಂಕ: ಎಸಿಬಿ ತನಿಖೆ ನಡೆಸಿ

‘ಕೆಪಿಎಸ್‌ಸಿ ಅಧ್ಯಕ್ಷ, ಸದಸ್ಯರೂ ಹಣ ಕೊಟ್ಟು ಈ ಹುದ್ದೆ ಪಡೆದುಕೊಂಡಿದ್ದಾರೆ ಎಂದು ಬಿಜೆಪಿ ಶಾಸಕರೊಬ್ಬರು ಹೇಳಿದ್ದಾರೆ. ಆದರೂ ಮುಖ್ಯಮಂತ್ರಿಗಳು ಎಸಿಬಿಯಿಂದ ಇದರ ವಿಚಾರಣೆ ಯಾಕೆ ನಡೆಸಿಲ್ಲ’ ಎಂದು ಡಿಕೆಶಿ ಪ್ರಶ್ನಿಸಿದರು.

‘ಕೆಪಿಎಸ್‌ಸಿ ಒಂದು ಸ್ವಾಯತ್ತ ಸಂಸ್ಥೆ. ಇಂತಹ ಸಂಸ್ಥೆ ವಿರುದ್ಧ ಗಂಭೀರ ಆರೋಪ ಬಂದಿದೆ. ಅಧ್ಯಕ್ಷರು ಪ್ರಾಮಾಣಿಕರಾಗಿದ್ದರೆ ತಾವೇ ಎಸಿಬಿಯಲ್ಲಿ ದೂರು ದಾಖಲಿಸಿ ತನಿಖೆ ಎದುರಿಸಬೇಕು. ಸಿದ್ದರಾಮಯ್ಯನವರ ಕಾಲದಲ್ಲಿ ಆಗಿದ್ದರೂ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

ಅಕ್ರಮ ತಡೆಗೆ ಹೊಸ ಕಾನೂನು ಅಗತ್ಯ: ಆರಗ

ತುಮಕೂರು: ಪಿಎಸ್‌ಐ ನೇಮಕಾತಿ ಹಾಗೂ ಪರೀಕ್ಷೆಯಲ್ಲಿ ಅಕ್ರಮ ತಡೆಗೆ ಹೊಸದೊಂದು ಕಾನೂನು ರೂಪಿಸುವ ಅಗತ್ಯವಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಇಲ್ಲಿ ಬುಧವಾರ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ,‘ಹಿಂದಿನಿಂದಲೂ ನೇಮಕಾತಿಗಳಲ್ಲಿ ಅಕ್ರಮಗಳು ನಡೆಯುತ್ತಲೇ ಬಂದಿವೆ. ಮುಂದಿನ ದಿನಗಳಲ್ಲಿ ಅಕ್ರಮಗಳು ನಡೆಯದಂತೆ ನೋಡಿಕೊಳ್ಳಬೇಕಾದರೆ ಕಾನೂನಿಗೆ ತಿದ್ದುಪಡಿ ತಂದು ನಿಯಂತ್ರಿಸಬೇಕಿದೆ’ ಎಂದರು.

‘ಪಿಎಸ್‌ಐ ನೇಮಕಾತಿಯಲ್ಲಿ ನಡೆದಿರುವ ಅಕ್ರಮಗಳ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗಿದೆ. ಈ ವಿಚಾರದಲ್ಲಿ ಯಾರನ್ನೂ ರಕ್ಷಿಸುತ್ತಿಲ್ಲ. ತನಿಖೆ ನಡೆಸಲು ಪೊಲೀಸರಿಗೆ ಮುಕ್ತ ಅವಕಾಶ ನೀಡಲಾಗಿದೆ’ ಎಂದರು.

ಸಂಪುಟ ಸಭೆ ಮೇ 11ಕ್ಕೆ ಮುಂದೂಡಿಕೆ

ಬೆಂಗಳೂರು: ಗುರುವಾರ (ಮೇ 5) ಬೆಳಿಗ್ಗೆ ನಿಗದಿಯಾಗಿದ್ದ ಸಂಪುಟ ಸಭೆಯನ್ನು ಮೇ 11ಕ್ಕೆ ಮುಂದೂಡಲಾಗಿದೆ.

ವಿಧಾನಸೌಧದ ಸಚಿವ ಸಂಪುಟ ಸಭಾಂಗಣದಲ್ಲಿ ಗುರುವಾರ ಬೆಳಿಗ್ಗೆ 11.30ರಿಂದ ಸಂಪುಟ ಸಭೆ ನಡೆಯಬೇಕಿತ್ತು. ಈ ಸಭೆಯನ್ನು ರದ್ದುಗೊಳಿಸಿದ್ದು, ಮೇ 11ರ ಬೆಳಿಗ್ಗೆ 11 ಗಂಟೆಗೆ ಸಂಪುಟ ಸಭೆ ನಡೆಯಲಿದೆ ಎಂದು ರಾಜ್ಯ ಸರ್ಕಾರದ ಸಚಿವ ಸಂಪುಟ ವಿಭಾಗದ ಜಂಟಿ ಕಾರ್ಯದರ್ಶಿ ಆರ್. ಚಂದ್ರಶೇಖರ್ ಬುಧವಾರ ಪರಿಷ್ಕೃತ ಸೂಚನಾ ಪತ್ರ ಹೊರಡಿಸಿದ್ದಾರೆ. ಸಂಪುಟ ಪುನರ್ ರಚನೆ ಕುರಿತು ಬಿಜೆಪಿಯಲ್ಲಿ ಬಿರುಸಿನ ಚರ್ಚೆ ನಡೆಯುತ್ತಿದೆ. ಸಚಿವರು ಹಾಗೂ ಖಾತೆಗಳ ಬದಲಾವಣೆ ಆಗುವ ಸಾಧ್ಯತೆ ಇರುವ ಕಾರಣದಿಂದಾಗಿಯೇ ಸಂಪುಟ ಸಭೆ ಮುಂದೂಡಿಕೆಯಾಗಿದೆ ಎಂಬ ಮಾತು ಬಿಜೆಪಿಯಲ್ಲಿ ಕೇಳಿ ಬರುತ್ತಿದೆ.

ಕೃಷಿ ಹೊಂಡ ಅಭಿವೃದ್ಧಿ ಸುರಕ್ಷತಾ ಕ್ರಮಕ್ಕೆ ಆಗ್ರಹ

ಬೆಂಗಳೂರು: ಇತ್ತೀಚಿನ ಕೆಲವು ವರ್ಷಗಳಲ್ಲಿ ಗ್ರಾಮೀಣಪ್ರದೇಶದಲ್ಲಿಕೃಷಿಅಭಿವೃದ್ಧಿ ಉದ್ದೇಶದಿಂದ ತೆಗೆದ ಹೊಂಡಗಳಲ್ಲಿ ಮಕ್ಕಳು ಬಿದ್ದು ಸಾಯುವ ಪ್ರಕರಣಗಳು ಹೆಚ್ಚಾಗಿವೆ ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್ ಆತಂಕ ವ್ಯಕ್ತಪಡಿಸಿದೆ.

ಈ ಬಗ್ಗೆ ಗೃಹ ಸಚಿವರಿಗೆ ಪತ್ರ ಬರೆದಿರುವ ಟ್ರಸ್ಟ್‌ನ ನಾಗಸಿಂಹ ಜಿ ರಾವ್, ‘ಕೃಷಿ ಹೊಂಡಗಳನ್ನು ತೆಗೆಯುವಾಗ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ನಿಯಮಗಳನ್ನು ರೂಪಿಸಿ ಸರ್ಕಾರಈಗಾಗಲೇ ಸುತ್ತೋಲೆ ಹೊರಡಿಸಿದೆ. ಆದರೆ, ಈ ನಿಯಮಗಳ ಪಾಲನೆಯಾಗುತ್ತಿವೆಯೇ ಎನ್ನುವ ಮೇಲ್ವಿಚಾರಣೆನಡೆಯದಿರುವುದು ಮಕ್ಕಳ ಸಾವಿಗೆ ಕಾರಣವಾಗಿದೆ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ’ ಎಂದು ಪ್ರತಿಪಾದಿಸಿದ್ದಾರೆ.

ಅಮೆರಿಕ: ಹಣದುಬ್ಬರ ನಿಯಂತ್ರಣಕ್ಕೆ ಬಡ್ಡಿದರ ಹೆಚ್ಚಳ

ವಾಷಿಂಗ್ಟನ್ (ಎಪಿ): ಮಿತಿ ಮೀರಿದ ಹಣದುಬ್ಬರ ನಿಯಂತ್ರಣಕ್ಕೆ ಅಮೆರಿಕದ ದಿ ಫೆಡರಲ್ ರಿಸರ್ವ್ ಬ್ಯಾಂಕ್ ಬುಧವಾರ ಅಲ್ಪಾವಧಿ ಬಡ್ಡಿ ದರವನ್ನು ಶೇಕಡ 0.5ರಷ್ಟು ಹೆಚ್ಚಿಸಿದೆ. ಮುಂದಿನ ದಿನಗಳಲ್ಲಿ ಬಡ್ಡಿದರವನ್ನು ಮತ್ತಷ್ಟು ಹೆಚ್ಚಿಸುವ ಸುಳಿವು ನೀಡಿದೆ.

ಕಳೆದ 40 ವರ್ಷಗಳಲ್ಲಿಯೇ ಅತ್ಯಂತ ಕಠಿಣ ಹಣದುಬ್ಬರ ಸಮಸ್ಯೆ ಎದುರಿಸುತ್ತಿರುವ ಫೆಡರಲ್ ಬ್ಯಾಂಕ್ ಅದನ್ನು ನಿಯಂತ್ರಿಸಲು ಈ ನಿರ್ಧಾರಕ್ಕೆ ಮುಂದಾಗಿದೆ. ಕಳೆದ 20 ವರ್ಷಗಳಲ್ಲಿ ಫೆಡರಲ್ ಬ್ಯಾಂಕ್ ಕೈಗೊಂಡ ದಿಟ್ಟ ನಿರ್ಧಾರಗಳಲ್ಲಿ ಇದು ಒಂದಾಗಿದೆ.

ನಿರ್ಮಲಾನಂದನಾಥ ಸ್ವಾಮೀಜಿ ಕಳವಳ

‘ಕ್ಷೀಣಿಸುತ್ತಿರುವ ಮಾನವೀಯ ಸಂಬಂಧ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ’ಆಧುನಿಕತೆಯ ಪ್ರಭಾವದಿಂದಾಗಿ ಮಾನವೀಯ ಸಂಬಂಧಗಳು ಕ್ಷೀಣಿಸುತ್ತಿವೆ’ ಎಂದು ಆದಿಚುಂಚನಗಿರಿಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ಸಮೀಪದ ಕೆ. ನಾರಾಯಣಪುರದಲ್ಲಿ ವರಸಿದ್ಧಿ ವಿನಾಯಕ ದೇವಾಲಯದ ಪುನರ್ ಪ್ರತಿಷ್ಠಾಪನೆ, ಕುಂಭಾಬಿಷೇಕ, ನವಗ್ರಹ ದೇವತಾ ಹಾಗೂ ನಾಗಾ ದೇವತಾ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು.

‘ಹಳ್ಳಿಗಳನ್ನು ತನ್ನ ಒಡಲಿನಲ್ಲಿ ಕರಗಿಸಿಕೊಂಡು ವಿಸ್ತಾರವಾಗಿ ಬೆಳೆಯುತ್ತಿರುವ ನಗರದಲ್ಲಿ ನಾಗರಿಕತೆ ಸಂಸ್ಕೃತಿ ನಶಿಸಿ ಹೋಗುತ್ತಿದೆ. ನಗರ ಹೆಮ್ಮರವಾಗಿ ಬೆಳೆಯುತ್ತಿದಂತೆ ನಾಗರಿಕತೆಯ ಹೆಸರಿನಲ್ಲಿ ನಮ್ಮ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿದ್ದೇವೆ. ನಮ್ಮ ನೆಲದ ಸಂಸ್ಕೃತಿಯನ್ನು ಪ್ರತಿಯೊಬ್ಬರೂ ಉಳಿಸಿ ಬೆಳೆಸುವ ಕಾರ್ಯ ನಡೆಯಬೇಕು’ ಎಂದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹಾಗೂ ಕೆ.ನಾರಾಯಣಪುರ ಗ್ರಾಮದ ಮುಖಂಡರಾದ ಶ್ರೀನಿವಾಸ್ ಗೌಡ, ಕೃಷ್ಣಮೂರ್ತಿ, ಚಿದಾನಂದ, ಲೋಕೇಶ್, ಪ್ರದೀಪ್ ಗೌಡ ಇದ್ದರು.



ಆದಿ ಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ವರಸಿದ್ಧಿ ವಿನಾಯಕ ದೇವಸ್ಥಾನ ಲೋಕಾರ್ಪಣೆ ಮಾಡಿದರು. ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಸಚಿವರಾದ ಬೈರತಿ ಬಸವರಾಜ, ಆರ್. ಅಶೋಕ, ಸಂಸದ ಡಿ.ವಿ. ಸದಾನಂದ ಗೌಡ ಇದ್ದರು.

ಅತ್ಯಾಚಾರ ಆರೋಪ: ದೇಹದಾರ್ಢ್ಯಪಟು ಬಂಧನ

ಬೆಂಗಳೂರು: ಯುವತಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ದೇಹದಾರ್ಢ್ಯಪಟು ಸಿದ್ದಿಕ್ (34) ಎಂಬಾತನನ್ನು ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮುಂಬೈ ಮೂಲದ ಯುವತಿ ನೀಡಿದ ದೂರಿನ ಆಧಾರದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ’. ‘ಯುವತಿ ಹಾಗೂ ಸಿದ್ದಿಕ್ ‘ಇನ್‌ಸ್ಟಾಗ್ರಾಂ’ ಮೂಲಕ ಪರಿಚಿತರಾಗಿದ್ದರು. ಸ್ಪರ್ಧೆಯೊಂದಕ್ಕೆ ದೇಹ ಹುರಿಗೊಳಿಸಲು ನಿರ್ಧರಿಸಿದ್ದ ಯುವತಿಯು ಆರೋಪಿಯ ಬಳಿ ತರಬೇತಿ ಪಡೆಯಲೆಂದು ನಗರಕ್ಕೆ ಬಂದಿದ್ದರು. ತರಬೇತಿ ವೇಳೆ ಇಬ್ಬರೂ ಸಲುಗೆಯಿಂದ ಇದ್ದರು. ಕ್ರಮೇಣ ದೈಹಿಕ ಸಂಪರ್ಕವನ್ನೂ ಬೆಳೆಸಿದ್ದರು. ಯುವತಿಯನ್ನು ಮದುವೆಯಾಗಲು ಆರೋಪಿ ನಿರಾಕರಿಸಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಎಸ್‌ಎಫ್ : ಶಂಕಿತ ಭೂಗತ ಸುರಂಗ ಪತ್ತೆ

ಪ್ರಜಾವಾಣಿ ವಾರ್ತೆ

ಜಮ್ಮು: ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯಲ್ಲಿ ಪಾಕಿಸ್ತಾನದ ನುಸುಳುಕೋರರು ಭಾರತದ ಗಡಿ ಪ್ರವೇಶಿಸಿದ್ದಾರೆ ಎನ್ನಲಾದ ಶಂಕಿತ ಭೂಗತ ಸುರಂಗವನ್ನು ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಬುಧವಾರ ಪತ್ತೆ ಹಚ್ಚಿದೆ.

‘ಸಾಂಬಾ ಜಿಲ್ಲೆಯ ಚಕ್ ಫಕ್ವಿರಾ ಗಡಿ ಚೌಕಿಯಲ್ಲಿ ಬುಧವಾರ ಸಂಜೆ ಸುರಂಗ ಪತ್ತೆಯಾಗಿದ್ದು, ಬೇಲಿ ಸಮೀಪದ ಸಾಮಾನ್ಯ ಪ್ರದೇಶದಲ್ಲಿ ಕಂಡು ಬಂದಿರುವ ಸಣ್ಣ ದ್ವಾರವನ್ನು ಭೂಗತ ಸುರಂಗವೆಂದು ಶಂಕಿಸಲಾಗಿದೆ. ಕತ್ತಲು ಕವಿದಿದ್ದರಿಂದ ಶೋಧ ಕಾರ್ಯ ಸ್ಥಗಿತಗೊಳಿಸಲಾಗಿದ್ದು, ಗುರುವಾರ ಕಾರ್ಯಾಚರಣೆ ಮುಂದುವರೆಯಲಿದ್ದು, ಹೆಚ್ಚಿನ ಮಾಹಿತಿ ತಿಳಿದುಬರಲಿದೆ’ ಎಂದು ಬಿಎಸ್‌ಎಫ್‌ನ ವಕ್ತಾರರು ತಿಳಿಸಿದರು.

‘ಅಂತರರಾಷ್ಟ್ರೀಯ ಗಡಿಯಿಂದ 150 ಮೀಟರ್ ಹಾಗೂ ಗಡಿ ಬೇಲಿಯಿಂದ 50 ಮೀಟರ್, ಭಾರತದ ಕಡೆಯಿಂದ 900 ಮೀಟರ್ ದೂರದಲ್ಲಿರುವ ಪಾಕಿಸ್ತಾನದ ಚಮನ್ ಖುರ್ದ್ (ಫಿಯಾಜ್) ಚೌಕಿ ಎದುರು ಶಂಕಿತ ಸುರಂಗ ಪತ್ತೆಯಾಗಿದೆ’ ಎಂದು ಮೂಲಗಳು ತಿಳಿಸಿವೆ.

ರಾಣಾ ದಂಪತಿಗೆ ಜಾಮೀನು

ಮುಂಬೈ(ಪಿಟಿಐ): ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ಅವರ ನಿವಾಸ ‘ಮಾತೋಶ್ರೀ’ ಎದುರು ಹನುಮಾನ್ ಚಾಲೀಸಾ ಪಠಣ ಮಾಡುವುದಾಗಿ ಹೇಳಿಕೆ ನೀಡಿ ಬಂಧನಕ್ಕೆ ಒಳಗಾಗಿದ್ದ ಸಂಸದೆ ನವನೀತ್ ರಾಣಾ ಮತ್ತು ಅವರ ಪತಿ, ಶಾಸಕ ರವಿ ರಾಣಾ ಅವರಿಗೆ ಇಲ್ಲಿನ ವಿಶೇಷ ನ್ಯಾಯಾಲಯ ಬುಧವಾರ ಜಾಮೀನು ನೀಡಿದೆ.

ಮಕ್ಕಳಿಗೆ ‘ಏಸರ್ ವಿಷನೋವ’ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಟಿಕಲ್ ವಿಷ್ಯುವಲ್ ಇಂಪೇರ್‌ಮೆಂಟ್ (ಸಿವಿಐ) ಎನ್ನುವ ದೃಷ್ಟಿ ದುರ್ಬಲತೆ ಸಮಸ್ಯೆಯಿಂದ ನರಳುತ್ತಿರುವ ಮಕ್ಕಳಿಗೆ ‘ಏಸರ್ ವಿಷನೋವ’ ತಂತ್ರಾಂಶದ ಮೂಲಕ ಕಂಪ್ಯೂಟರ್ ಮತ್ತು ಟ್ಯಾಬ್ ಆಧಾರಿತ ಚಿಕಿತ್ಸೆ ನೀಡಲು ನಾರಾಯಣ ನೇತ್ರಾಲಯ ಮತ್ತು ಏಸರ್ ಇಂಡಿಯಾ ಸಂಸ್ಥೆಗಳು ಕೈಜೋಡಿಸಿವೆ.

ನಾರಾಯಣ ನೇತ್ರಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಏಸರ್ ವಿಷನೋವ’ ಚಿಕಿತ್ಸೆಗೆ ಚಾಲನೆ ನೀಡಲಾಯಿತು. ರೋಗಿಗಳ ಪೋಷಕರಿಗೆ ವಿಷನೋವ ತಂತ್ರಾಂಶವುಳ್ಳ ಟ್ಯಾಬ್ ವಿತರಿಸಲಾಯಿತು.

ಸಿವಿಐ ಎನ್ನುವುದು ಮಿದುಳಿನಲ್ಲಿ ದೃಶ್ಯಕ್ಕೆ ಸಂಬಂಧಿಸಿದ ಪ್ರದೇಶಗಳಲ್ಲಿ ಉಂಟಾಗುವ ದೃಷ್ಟಿಮಾಂದ್ಯತೆ ಸ್ಥಿತಿ. ಭಾರತದಲ್ಲಿ ಒಂದು ಲಕ್ಷ ಮಕ್ಕಳಲ್ಲಿ 161 ಮಕ್ಕಳು ಈ ಸಮಸ್ಯೆ ಎದುರಿಸುತ್ತಿದ್ದಾರೆ. ಇದಕ್ಕೆ ಸರಳವಾಗಿ ಚಿಕಿತ್ಸೆ ನೀಡುವ ಉದ್ದೇಶದಿಂದ ಏಸರ್ ತನ್ನ ಸಿಎಸ್‌ಆರ್‌ನಡಿ ಕಂಪ್ಯೂಟರ್‌ಗಳು ಮತ್ತು ಟ್ಯಾಬ್‌ಗಳನ್ನು ಒದಗಿಸಿದೆ.

ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ಭುಜಂಗ ಶೆಟ್ಟಿ,‘ ಸಿವಿಐನಿಂದ ಮಕ್ಕಳ ಮಿದುಳಿನ ದೃಶ್ಯ ಸಂಬಂಧಿತ ನರದಲ್ಲಿ ಮಂದತೆ ಉಂಟಾಗಿರುತ್ತದೆ. ಇದರಿಂದ ಮಕ್ಕಳು ದೃಶ್ಯವನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗುವುದಿಲ್ಲ. ಅಂತಹ ಮಕ್ಕಳಿಗೆ ವಿಷನೋವ ಚಿಕಿತ್ಸೆ ಸಹಕಾರಿ’ ಎಂದು ಹೇಳಿದರು.


ಏಸರ್ ಇಂಡಿಯಾದ ಅಧ್ಯಕ್ಷ ಹರೀಶ್ ಕೊಹ್ಲಿ,‘ಪ್ರತಿ ಟ್ಯಾಬ್‌ಗೆ ₹15 ಸಾವಿರ ಠೇವಣಿ ಪಡೆದು, ಚಿಕಿತ್ಸೆಯ ಅವಧಿ ಮುಗಿದ ನಂತರ ಟ್ಯಾಬ್ ಹಿಂದಿರುಗಿಸಿದವರಿಗೆ ಹಣ ವಾಪಸ್ ನೀಡಲಾಗುವುದು. ಏಸರ್ ಇಂಡಿಯಾ 2 ಸಾವಿರ ಟ್ಯಾಬ್ ವಿತರಿಸುವ ಗುರಿ ಹೊಂದಿದೆ’ ಎಂದು ತಿಳಿಸಿದರು.



ನಾರಾಯಣ ನೇತ್ರಾಲಯದ ಅಧ್ಯಕ್ಷ ಕೆ.ಭುಜಂಗ ಶೆಟ್ಟಿ ಹಾಗೂ ಏಸರ್ ಸಂಸ್ಥೆಯ ಹರೀಶ್ ಕೊಹ್ಲಿ ಅವರು ‘ಏಸರ್ ವಿಷನೋವ’ ಸಾಫ್ಟ್‌ವೇರ್ ಹೊಂದಿರುವ ಟ್ಯಾಬ್ ಅನ್ನು ಪೋಷಕರಿಗೆ ವಿತರಿಸಿದರು —ಪ್ರಜಾವಾಣಿ ಚಿತ್ರ

ನಿಧನ ವಾರ್ತೆ

ಕೆ.ಜಯತೀರ್ಥ



ಬೆಂಗಳೂರು: ಜಯನಗರದ ನಿವಾಸಿ ಕೆ.ಜಯತೀರ್ಥ (82) ಅವರು ಮಂಗಳವಾರ ನಿಧನರಾದರು. ಇವರಿಗೆ ಇಬ್ಬರು ಪುತ್ರಿಯರು ಹಾಗೂ ಪುತ್ರ ಇದ್ದಾರೆ.

ಚಾಮರಾಜಪೇಟೆಯ ಚಿತಾಗಾರದಲ್ಲಿಅಂತ್ಯಸಂಸ್ಕಾರನಡೆಸಲಾಯಿತು ಎಂದು ಕುಟುಂಬ ತಿಳಿಸಿದೆ.

3839 ಚ.ಮೀ. ಜಾಗವನ್ನು ಬಾಡಿಗೆಗೆ ಪಡೆಯಲಿದೆ ಬಿಎಂಆರ್‌ಸಿಎಲ್

ಮೆಟ್ರೊ: ನೈಸ್ ಜಾಗಕ್ಕೆ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಕಾಮಗಾರಿ ಸಲುವಾಗಿ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ನೈಸ್) ಸುಪರ್ದಿಯಲ್ಲಿರುವ 3839 ಚ.ಮೀ ಜಾಗವನ್ನು ಬಾಡಿಗೆಗೆ ಪಡೆಯಲು ಬೆಂಗಳೂರು ಮೆಟ್ರೊ ರೈಲು ನಿಮಗವು (ಬಿಎಂಆರ್‌ಸಿಎಲ್) ನಿರ್ಧರಿಸಿದೆ.



ಮೆಟ್ರೊ ಮಾರ್ಗ ವಿಸ್ತರಣಾ ಕಾಮಗಾರಿಗಳಿಗೆ ಜಾಗದ ಕೊರತೆ ಇರುವುದರಿಂದ ನೈಸ್ ಜಾಗವನ್ನು ಬಾಡಿಗೆಗೆ ಪಡೆದು ಅಲ್ಲಿ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಮುಂದಾಗಿದೆ. ಈ ಜಾಗಕ್ಕಾಗಿ ತಿಂಗಳಿಗೆ ₹ 5.75 ಲಕ್ಷ ರೂಪಾಯಿ ಬಾಡಿಗೆಯನ್ನು ನಿಗದಿಪಡಿಸಲಾಗಿದೆ.

'ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದ (ಬಿಐಇಸಿ) ಬಳಿ ಮೆಟ್ರೊ ನಿಲ್ದಾಣ ನಿರ್ಮಾಣಗೊಳ್ಳುತ್ತಿದೆ. ಇಲ್ಲಿಗೆ ಸಮೀಪದಲ್ಲಿರುವ ನೈಸ್ ಜಾಗಕ್ಕೆ ಸಂಪರ್ಕದ ಕೊರತೆ ಇರುವುದರಿಂದ ತುಮಕೂರು ರಸ್ತೆಯಲ್ಲಿ ಮೆಟ್ರೊ ಎತ್ತರಿಸಿದ ಮಾರ್ಗದ ವಿಸ್ತರಣೆ ಕಾಮಗಾರಿ ವಿಳಂಬವಾಗಿದೆ. ಈ ಸಣ್ಣ ಪ್ರಮಾಣದ ಜಾಗವನ್ನು ಮಾರುಕಟ್ಟೆ ದರವನ್ನು ನೀಡಿ ಕಾಯಂ ಆಗಿ ಸ್ವಾಧೀನಪಡಿಸಿಕೊಳ್ಳುವ ಅಗತ್ಯ ಇಲ್ಲ. ಹಾಗಾಗಿ ನೈಸ್ ಸಂಸ್ಥೆಯ ಜಾಗವನ್ನು ಬಾಡಿಗೆಗೆ ಪಡೆಯಲು ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಸುವಂತೆ ಕೋರಿದ್ದೇವೆ' ಎಂದು ನಿಗಮದ ಅಧಿಕಾರಿಯೊಬ್ಬರು ತಿಳಿಸಿದರು.

ನಾಲ್ಕು ಎಕರೆಗೆ ₹ 100 ಕೋಟಿ: ಇದಲ್ಲದೇ ಮೆಟ್ರೊ ಕಾಮಗಾರಿಗಾಗಿ ನೈಸ್‌ನ ಸುಮಾರು 4 ಎಕರೆಗಳಷ್ಟು ಜಾಗವನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಮೂಲಕ ಬಿಎಂಆರ್‌ಸಿಎಲ್ ಸ್ವಾಧೀನಪಡಿಸಿಕೊಳ್ಳಲಿದೆ. ಈ ಸಲುವಾಗಿ ₹ 100 ಕೋಟಿ ಪರಿಹಾರ ಪ್ಯಾಕೇಜ್ ಅನ್ನು ಠೇವಣಿ ಇಟ್ಟಿದೆ. ಕೆಐಎಡಿಬಿಯು ಸರ್ಕಾರದ ಜೊತೆ ಸಮಾಲೋಚನೆ ನಡೆಸಿದ ಬಳಿಕ ಮೊತ್ತವನ್ನು ನೈಸ್‌ಗೆ ಬಿಡುಗಡೆ ಮಾಡಲಿದೆ ಎಂದು ಗೊತ್ತಾಗಿದೆ.

'ಮೆಟ್ರೊ ಕಾಮಗಾರಿಗಾಗಿ ತುಮಕೂರು ರಸ್ತೆ ಹಾಗೂ ಹೊಸೂರು ರಸ್ತೆಗಳ ಬಳಿ ನೈಸ್‌ಗೆ ಸೇರಿದ ಜಾಗದ ಅಗತ್ಯವಿದೆ. ಈ ಜಾಗವನ್ನು ಕಾಯಂ ಆಗಿ ಬಳಸಿಕೊಳ್ಳಬೇಕಾಗಿರುವುದರಿಂದ ಯಾವ ರೀತಿಯ ಪರಿಹಾರ ನೀಡಬೇಕು ಎಂಬ ಬಗ್ಗೆ ಜಿಜ್ಞಾಸೆ ಇದೆ. ನಾವು ಪರಿಹಾರದ ಪ್ಯಾಕೇಜ್ ಅನ್ನು ಠೇವಣಿ ಇಟ್ಟು, ಬಳಿಕ ನೈಸ್‌ನ ಜಾಗದಲ್ಲಿ ನಿರ್ಮಾಣ ಕಾರ್ಯವನ್ನು ಆರಂಭಿಸಿದ್ದೇವೆ. ಈ ಬಗ್ಗೆ ಸರ್ಕಾರದ ಹಂತದಲ್ಲಿ ತೀರ್ಮಾನ ಕೈಗೊಳ್ಳಬೇಕಿದೆ' ಎಂದು ಬಿಎಂಆರ್‌ಸಿಎಲ್‌ನ ಭೂಸ್ವಾಧೀನ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್.ಶಿವಶಂಕರ್ ಅವರು ಲಭ್ಯವಾಗಲಿಲ್ಲ.

ಕೊನೆ ಕ್ಷಣದಲ್ಲಿ ಬಸವ ಎಕ್ಸ್‌ಪ್ರೆಸ್ ರೈಲಿನ ಪ್ಲಾಟ್‌ ಫಾರಂ ಬದಲು

ರೈಲು ಹತ್ತುವ ಧಾವಂತದಲ್ಲಿ ಗಾಯ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕೊನೆ ಕ್ಷಣದಲ್ಲಿ ಬಸವ ಎಕ್ಸ್‌ಪ್ರೆಸ್ ರೈಲಿನ ಪ್ಲಾಟ್‌ಫಾರಂ ಸಂಖ್ಯೆಯನ್ನು ಬುಧವಾರ ರಾತ್ರಿ ಏಕಾಏಕಿ ಬದಲಾಯಿಸಿದ್ದರಿಂದ ರೈಲನ್ನು ಹತ್ತುವ ಧಾವಂತದಲ್ಲಿ ನಾಲ್ಕೈದು ಪ್ರಯಾಣಿಕರು ಕೆಳಗೆ ಬಿದ್ದು ಗಾಯಗೊಂಡಿದ್ದಾರೆ. ರೈಲ್ವೆ ಸಿಬ್ಬಂದಿಯ ಅಚಾತುರ್ಯಕ್ಕೆ ಆಕ್ರೋಶ ವ್ಯಕ್ತವಾಯಿತು. ರೈಲು ನಿಗದಿತ ಸಮಯಕ್ಕಿಂತ ಒಂದು ಗಂಟೆ ತಡವಾಗಿ ಹೊರಟಿತು.

ರಾತ್ರಿ 9.15ಕ್ಕೆ ಬಾಗಲಕೋಟೆಯಿಂದ ಮೈಸೂರಿಗೆ ತೆರಳುವ ರೈಲು ಕಲಬುರಗಿ ಪ್ಲಾಟ್‌ಫಾರಂಗೆ ಬರಬೇಕಿತ್ತು. ಹೀಗಾಗಿ, 9ಕ್ಕೆ ಪ್ಲಾಟ್‌ಫಾರಂ ಸಂಖ್ಯೆ 1ರಲ್ಲಿ ರೈಲು ಬರಲಿದೆ ಎಂದು ಧ್ವನಿವರ್ಧಕದಲ್ಲಿ ಘೋಷಿಸಲಾಯಿತು. ಆದರೆ, 'ಇನ್ನೇನು ರೈಲು ಬರಲಿದೆ ಎನ್ನುವಷ್ಟರಲ್ಲಿ ಪ್ಲಾಟ್‌ಫಾರಂ ಸಂಖ್ಯೆ 1ರ ಬದಲಾಗಿ 2ರಲ್ಲಿ ಬರಲಿದೆ ಎಂದು ಘೋಷಿಸಲಾಯಿತು.



ಕಲಬುರಗಿಯ ರೈಲು ನಿಲ್ದಾಣದಲ್ಲಿ ಬಸವ ಎಕ್ಸ್‌ಪ್ರೆಸ್ ರೈಲು ಹತ್ತುವ ಸಂದರ್ಭದಲ್ಲಿ ಗಾಯವಾಗಿದ್ದನ್ನು ಸ್ಟೇಶನ್ ಮ್ಯಾನೇಜರ್‌ಗೆ ಮಹಿಳೆಯೊಬ್ಬರು ತೋರಿಸಿದರು

'ಕಲಬುರಗಿ ರೈಲು ನಿಲ್ದಾಣದಲ್ಲಿ ಕೆಲ ನಿಮಿಷವಷ್ಟೇ ನಿಲ್ಲುತ್ತದೆ. ಹೀಗಾಗಿ, ತಮ್ಮ ಬೋಗಿಗಳನ್ನು ಹುಡುಕಿಕೊಂಡು ಹೋಗುವ ಧಾವಂತದಲ್ಲಿ ಮೇಲ್ಸೇತುವೆ ಬಳಸಿ ಬರುವ ಬದಲು ಕೆಳಗಡೆಯಿಂದಲೇ ಈಚೆಯ ಪ್ಲಾಟ್‌ಫಾರಂಗೆ ಬರಲಾರಂಭಿಸಿದರು. ಘೋಷಣೆ ಹೊರಡಿಸಿದ ಕೆಲ ನಿಮಿಷಗಳಲ್ಲೇ ರೈಲು ಬಂತು. ಇದರಿಂದ ಗಾಬರಿಯಾದ ಪ್ರಯಾಣಿಕರು ತಮ್ಮ ಬ್ಯಾಗ್‌ಗಳನ್ನು ಅಲ್ಲಿಯೇ ಬಿಟ್ಟು ಓಟ ಕಿತ್ತರು. ಇದರಿಂದಾಗಿ ಕೆಲವರು ಗಾಯಗೊಂಡರು' ಎಂದು ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಡಾ. ಅಖೀಬ್ ಜಾವೇದ್ ತಿಳಿಸಿದರು.

'ರೈಲಿನ ಪ್ಲಾಟ್‌ಫಾರಂ ಬದಲಾಯಿಸಿದ್ದರಿಂದಲೇ ಈ ಅವಾಂತರ ಸೃಷ್ಟಿಯಾಗಿದ್ದರಿಂದ ಆಕ್ರೋಶಗೊಂಡ ಪ್ರಯಾಣಿಕರು ಸ್ಟೇಶನ್ ಮ್ಯಾನೇಜರ್ ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದರು. ಕೆಲ ಹೊತ್ತಿನಲ್ಲಿ ಸ್ಥಳಕ್ಕೆ ಬಂದ ಸ್ಟೇಶನ್ ಮ್ಯಾನೇಜರ್ ಅವರೊಂದಿಗೆ ಪ್ರಯಾಣಿಕರು ವಾಗ್ವಾದ ನಡೆಸಿದರು. ಅಷ್ಟರಲ್ಲಿ ರೈಲು ಹೊರಟಿತು. ಪ್ರಯಾಣಿಕರು ರೈಲಿನ ಚೈನ್ ಎಳೆದು ಪ್ರಯಾಣಿಕರಿಗೆ ಚಿಕಿತ್ಸೆ ಕೊಡಿಸಲು ಪಟ್ಟು ಹಿಡಿದರು. ರೈಲ್ವೆ ವೈದ್ಯರು ಸ್ಥಳಕ್ಕೆ ಬಂದು ಚಿಕಿತ್ಸೆ ನೀಡಿದ ಬಳಿಕ ರೈಲು ಹೊರಟಿತು' ಎಂದು ಡಾ. ಜಾವೇದ್ ತಿಳಿಸಿದರು.

₹ 1,519 ಕೋಟಿ ಮೊತ್ತದ ಕ್ರಿಯಾ ಯೋಜನೆಗಳಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತ ನಗರೋತ್ಥಾನ ಯೋಜನೆಯ ನಾಲ್ಕನೇ ಹಂತದಲ್ಲಿ ರಾಜ್ಯದ 15 ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ₹1,519.43 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕ್ರಿಯಾ ಯೋಜನೆಗಳಿಗೆ ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜು ಅಧ್ಯಕ್ಷತೆಯ ರಾಜ್ಯ ಮಟ್ಟದ ಸಮಿತಿ ಬುಧವಾರ ಅನುಮೋದನೆ ನೀಡಿದೆ.

ರಾಜ್ಯದ 15 ಜಿಲ್ಲೆಗಳಲ್ಲಿನ ಹಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ 2022–23 ಮತ್ತು 2023–24ನೇ ಆರ್ಥಿಕ ವರ್ಷಗಳ ಅವಧಿಯಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಮುಖ್ಯಮಂತ್ರಿಯವರ ನಗರೋತ್ಥಾನ ಯೋಜನೆಯ ಅಡಿಯಲ್ಲಿ ಈ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗುತ್ತದೆ. ಸ್ಥಳೀಯ ಸಂಸ್ಥೆಗಳು ಸಲ್ಲಿಸಿದ್ದ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿದ ಸಮಿತಿ, ಒಪ್ಪಿಗೆ ನೀಡಿತು.

ರಾಜ್ಯದ 302 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ 4ನೇ ಹಂತದ ಯೋಜನೆಯಡಿ ₹ 3,885 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಲು ಜನವರಿಯಲ್ಲಿ ಸಂಪುಟ ಸಭೆ ಒಪ್ಪಿಗೆ ಸೂಚಿಸಿತ್ತು. ಅದಕ್ಕೆ ಪೂರಕವಾಗಿ ಈವರೆಗೆ 25 ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು ₹ 2,367.57 ಕೋಟಿ ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆ ರೂಪಿಸಿ ರಾಜ್ಯ ಮಟ್ಟದ ಸಮಿತಿಯ ಅನುಮೋದನೆ ಪಡೆಯಲಾಗಿದೆ.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ. ಅಜಯ್ ನಾಗಭೂಷಣ್, ಪೌರಾಡಳಿತ ಇಲಾಖೆ ನಿರ್ದೇಶಕಿ ಅರ್ಚನಾ, ಮುಖ್ಯ ಎಂಜಿನಿಯರ್ ಸತ್ಯನಾರಾಯಣ ಸಭೆಯಲ್ಲಿದ್ದರು.

ಅನುಮೋದನೆಯಾದ ಕ್ರಿಯಾ ಯೋಜನೆಗಳ ವಿವರ: ಬೆಂಗಳೂರು ಗ್ರಾಮಾಂತರ ಜಿಲ್ಲೆ– ₹ 80.34 ಕೋಟಿ, ಮಂಡ್ಯ ಜಿಲ್ಲೆ– ₹ 89.25 ಕೋಟಿ, ಕೋಲಾರ ಜಿಲ್ಲೆ– ₹ 123.25 ಕೋಟಿ, ಚಿಕ್ಕಬಳ್ಳಾಪುರ ಜಿಲ್ಲೆ (ಚಿಕ್ಕಬಳ್ಳಾಪುರ ನಗರಸಭೆ ಹೊರತುಪಡಿಸಿ)– ₹ 84.82 ಕೋಟಿ, ದಕ್ಷಿಣ ಕನ್ನಡ ಜಿಲ್ಲೆ (ಉಳ್ಳಾಲ ನಗರಸಭೆ, ಸೋಮೇಶ್ವರ ಮತ್ತು ಕೋಟೆಕಾರು ಪಟ್ಟಣ ಪಂಚಾಯಿತಿ ಹೊರತುಪಡಿಸಿ)– ₹ 72.25 ಕೋಟಿ, ಧಾರವಾಡ ಜಿಲ್ಲೆ– ₹29.75 ಕೋಟಿ.

ಗದಗ ಜಿಲ್ಲೆ(ಗದಗ-ಬೆಟಗೇರಿ ನಗರಸಭೆ ಹೊರತುಪಡಿಸಿ)– ₹ 55.25 ಕೋಟಿ, ₹ 106.25 ಕೋಟಿ, ಹಾವೇರಿ ಜಿಲ್ಲೆ (ಶಿಗ್ಗಾವಿ, ಬಂಕಾಪುರ, ಸವಣೂರು ಪುರಸಭೆ ಹೊರತುಪಡಿಸಿ)– ₹ 97.75 ಕೋಟಿ, ರಾಯಚೂರು ಜಿಲ್ಲೆ (ಮಾನ್ವಿ, ಜಾಲಹಳ್ಳಿ ಪುರಸಭೆ ಮತ್ತು ಕವಿತಾಳ ಪಟ್ಟಣ ಪಂಚಾಯಿತಿ ಹೊರತುಪಡಿಸಿ)– ₹ 110.50 ಕೋಟಿ, ಯಾದಗಿರಿ ಜಿಲ್ಲೆ– ₹ 114.75 ಕೋಟಿ, ಬೀದರ್ ಜಿಲ್ಲೆ– ₹ 97.75 ಕೋಟಿ, ಶಿವಮೊಗ್ಗ ಜಿಲ್ಲೆ– ₹ 106.25 ಕೋಟಿ, ಬಾಗಲಕೋಟೆ ಜಿಲ್ಲೆ– ₹ 208.25 ಕೋಟಿ ಮತ್ತು ಉತ್ತರ ಕನ್ನಡ ಜಿಲ್ಲೆ– ₹ 143.02 ಕೋಟಿ.

ಸೂರ್ಯನ ಸುತ್ತ ಉಂಗುರ: ಆಗಸದಲ್ಲಿ ಕೌತುಕ

ಒಂದನೇ ಪುಟದಿಂದ...

ಕಳೆದ ವರ್ಷ ಮೇ 25ರಂದು ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಕಡೆಗಳಲ್ಲಿ ಇದೇ ಮಾದರಿಯ ಉಂಗುರ ಗೋಚರಿಸಿತ್ತು.

ವೈಜ್ಞಾನಿಕ ಹಿನ್ನೆಲೆ: 'ಹಿಮದ ಕಣಗಳ ಮೂಲಕ ಬೆಳಕು ಹಾದು ಬಂದಾಗ ಈ ರೀತಿ ಉಂಗುರ ಕಾಣುತ್ತದೆ. ಮೋಡಗಳು ತೆಳ್ಳಗೆ ಇದ್ದಾಗ ಈ ರೀತಿಯ ವಿಸ್ಮಯಗಳು ಸಂಭವಿಸುತ್ತವೆ. ತೆಳ್ಳನೆಯ ಮೋಡಗಳು ಇರುವಲ್ಲಿ ಸೂರ್ಯನ ಸುತ್ತ ಈ ರೀತಿಯ ವೃತ್ತ ರಚನೆಯಾಗಿರುವುದು ಕಾಣಿಸುತ್ತದೆ. ಮಳೆ ಸುರಿಯುವ ಮುನ್ನ ತೆಳ್ಳನೆಯ ಮೋಡಗಳು ಆವರಿಸಿಕೊಳ್ಳುತ್ತವೆ. ಕಪ್ಪು ಮೋಡಗಳು ಇದ್ದರೆ ಬೆಳಕನ್ನು ತಡೆಹಿಡಿಯುವುದರಿಂದ ಈ ರೀತಿ ಉಂಗುರ ಕಾಣಿಸುವುದಿಲ್ಲ' ಎಂದು ಖಗೋಳ ವಿಜ್ಞಾನಿ ಡಾ.ಬಿ.ಎಸ್. ಶೈಲಜಾ ಅವರು ವಿಶ್ಲೇಷಿಸಿದ್ದಾರೆ.

ಮೇ 7ಕ್ಕೆ ಬಸವಶ್ರೀ, ವಚನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ

ಬೆಂಗಳೂರು: 'ಬಸವ ವೇದಿಕೆ ವತಿಯಿಂದ ಬಸವ ಜಯಂತಿ ಹಾಗೂ 'ಬಸವಶ್ರೀ', 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ 7ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ವೇದಿಕೆ ಅಧ್ಯಕ್ಷ ಸಿ.ಸೋಮಶೇಖರ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,'2022ನೇ ಸಾಲಿನ 'ಬಸವಶ್ರೀ' ಪ್ರಶಸ್ತಿಗೆ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿಶ್ವವಿದ್ಯಾಲಯದ ಕುಲಾಧಿಪತಿ ಎಚ್.ಆರ್.ನಾಗೇಂದ್ರ ಹಾಗೂ 'ವಚನ ಸಾಹಿತ್ಯಶ್ರೀ' ಪ್ರಶಸ್ತಿಗೆ ಬೀದರ್ ಜಿಲ್ಲೆಯ ಬಸವಗಿರಿಯ ಬಸವಸೇವಾ ಪ್ರತಿಷ್ಠಾನದ ವಚನಗಾರ್ತಿ ಗಂಗಾಂಬಿಕಾ ಅವರನ್ನು ಆಯ್ಕೆ ಮಾಡಲಾಗಿದೆ. ವಚನ ಸಾಹಿತ್ಯಶ್ರೀ ₹10 ಸಾವಿರ ನಗದು ಒಳಗೊಂಡಿದೆ' ಎಂದರು.



ಎಚ್‌.ಆರ್. ನಾಗೇಂದ್ರ



ಗಂಗಾಂಬಿಕಾ

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮೈಸೂರಿನ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ವಸತಿ ಸಚಿವ ವಿ.ಸೋಮಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದರು.

'ಇದೇ ಕಾರ್ಯಕ್ರಮದಲ್ಲಿ ಬಸವ ಜ್ಯೋತಿ ಸಂಚಿಕೆ ಬಿಡುಗಡೆ ಮಾಡಲಾಗುವುದು. ಬೆಳಿಗ್ಗೆ 9.30 ರಿಂದ ಗಾಯಕಿ ಸುಪ್ರಿಯಾ ರಘುನಂದನ್ ಅವರಿಂದ ವಚನ ಗಾಯನ ಇರಲಿದೆ' ಎಂದರು.

ಪರಿಷತ್ ಸದಸ್ಯ ನಮೋಶಿ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ವಿಧಾನಪರಿಷತ್ ಸದಸ್ಯ ಶಶಿಲ್ ಜಿ. ನಮೋಶಿ ವಿರುದ್ಧ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ–2002ರ (ಪಿಎಂಎಲ್ ಕಾಯ್ದೆ) ಅಡಿಯಲ್ಲಿ ದಾಖಲಿಸಲಾಗಿದ್ದ ಖಾಸಗಿ ದೂರನ್ನು ಕಲಬುರಗಿ ಹೈಕೋರ್ಟ್ ಪೀಠ ರದ್ದುಗೊಳಿಸಿದೆ.

ಪ್ರಕರಣ ರದ್ದು ಕೋರಿ ಶಶಿಲ್ ಜಿ.ನಮೋಶಿ ಸೇರಿ ಮೂವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, 'ಪಿಎಂಎಲ್ ಕಾಯ್ದೆ ಅಡಿ ದಾಖಲಿಸುವ ಖಾಸಗಿ ವ್ಯಕ್ತಿಗಳ ದೂರುಗಳನ್ನು ವಿಚಾರಣಾ ನ್ಯಾಯಾಲಯಗಳು ಪುರಸ್ಕರಿಸುವಂತಿಲ್ಲ' ಎಂದು ಆದೇಶಿಸಿದೆ.

ನಮೋಶಿ ಅವರು ಹೈದರಾಬಾದ್ ಕರ್ನಾಟಕ ಎಜುಕೇಶನ್ ಸೊಸೈಟಿ (ಎಚ್‌ಕೆಇಎಸ್) ಅಧ್ಯಕ್ಷರಾದ ಸಮಯದಲ್ಲಿ ಸೊಸೈಟಿ ಹಣದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ, ಒ.ಎಂ.ಮಹೇಶ್ ಮತ್ತು ಲಿಂಗನಗೌಡ ಎಂಬುವರು 2016ರಲ್ಲಿ ಶಶಿಲ್ ನಮೋಶಿ, ಕಲಬುರಗಿಯ ಒ.ಎಚ್. ಅಮರೇಶ್ ಮತ್ತು ಬೆಂಗಳೂರಿನ ಲಿಂಗನಗೌಡ ವಿರುದ್ಧ ಖಾಸಗಿ ದೂರನ್ನು ಸಲ್ಲಿಸಿದ್ದರು. ಈ ದೂರಿನ ಅಂಶಗಳನ್ನು ಸಂಜ್ಞೆಯ ಅಪರಾಧವೆಂದು ಪರಿಗಣಿಸಿದ್ದ ಮಂಗಳೂರಿನ ವಿಶೇಷ ನ್ಯಾಯಾಲಯ (ಪಿಎಂಎಲ್ ಕಾಯ್ದೆ ವ್ಯಾಪ್ತಿಯ ವಿಶೇಷ ಕೋರ್ಟ್) ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿತ್ತು.

ನಗರದಲ್ಲಿ ಇಂದು

'ಪ್ರೊ.ಮಲ್ಲೇಪುರಂ ವಿಮರ್ಶಾ ನೆಲೆಗಳು' ವಿಚಾರ ಸಂಕಿರಣ: ಉದ್ಘಾಟನೆ–ಸಿದ್ಧಣ್ಣ ಉತ್ನಾಳ್, ಅಧ್ಯಕ್ಷತೆ–ಕಮಲಾ ಹಂಪನಾ, ಅತಿಥಿ–ವೂಡೇ ಪಿ.ಕೃಷ್ಣ, ಆಯೋಜನೆ–ಶೇಷಾದ್ರಿಪುರ ಕಾಲೇಜು, ಸ್ಥಳ–ಶೇಷಾದ್ರಿಪುರ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30

ಜರಗನಹಳ್ಳಿ ಶಿವಶಂಕರ್ ಹನಿಗವನ ಸಾಹಿತ್ಯ ಪ್ರಶಸ್ತಿ ಪ್ರದಾನ: ಮನು ಬಳಿಗಾರ್, ಪುರಸ್ಕೃತರು–ಮಕರಂದ ಮನೋಜ್, ಆಯೋಜನೆ–ಕರ್ನಾಟಕ ವಿಕಾಸ ರಂಗ, ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲೊನಿ, ಬೆಳಿಗ್ಗೆ 11

ದಕ್ಷಿಣ ಅರ್ಥಶಾಸ್ತ್ರಜ್ಞರ ವಾರ್ಷಿಕ ಸಂಚಿಕೆ ಬಿಡುಗಡೆ: ಎನ್.ಆರ್. ಭಾನುಮತಿ, ಆಯೋಜನೆ–ಎಂ.ಪಿ.ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಕೆ.ಎನ್.ಸುಬ್ರಮಣ್ಯ ಫೌಂಡೇಷನ್, ಸ್ಥಳ–ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಭಾರತ ಕಲಾ ಉತ್ಸವ: ಆಯೋಜನೆ ಮತ್ತು ಸ್ಥಳ–ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11.30

ಶಂಕರ ಜಯಂತಿ ಮತ್ತು ಸುವರ್ಣ ಮಹೋತ್ಸವ ಸಂಗೀತೋತ್ಸವ: ಗಾಯನ–ಆರ್. ಕೆ.ಪದ್ಮನಾಭ, ಆಯೋಜನೆ–ಶ್ರೀತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ–ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 6.15ರಿಂದ



ವಿದ್ವಾನ್ ಆರ್. ಕೆ.ಪದ್ಮನಾಭ

ಬಿಬಿಎಂಪಿ ಕಾರ್ಮಿಕರ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ: ಆಯೋಜನೆ–ಮೈಕ್ರೊಜೋನ್, ಸಹಯೋಗ–ಐಎಸ್‌ಆರ್‌ಸಿ, ಸ್ಥಳ–ಮೌಂಟ್ ಕಾರ್ಮಲ್ ಕಾಲೇಜು, ಮಧ್ಯಾಹ್ನ 2

ಸಾರ್ವಜನಿಕ ಇವಿ ಚಾರ್ಜಿಂಗ್ ಕೇಂದ್ರಕ್ಕೆ ಚಾಲನೆ: ಸ್ಥಳ–ಫೋರಂ ನೇಬರ್‌ವುಡ್ ಮಾಲ್, ಮಧ್ಯಾಹ್ನ 3

ಸೌಹಾರ್ದ ಸಂಸ್ಕೃತಿ ಸಮಾವೇಶ: ಭಾಗವಹಿಸುವವರು–ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ ಗೌಡ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ಆಶಯ ನುಡಿ–ಸಾಹಿತಿ ಬರಗೂರು ರಾಮಚಂದ್ರಪ್ಪ, ಸ್ಥಳ–ಅಂಬೇಡ್ಕರ್ ಭವನ, ವಸಂತ ನಗರ, ಸಂಜೆ 4.30

ಜಿ.ವೇದಾಂತ ಅಯ್ಯಂಗಾರ್ ಅವರ ಪುಣ್ಯಸ್ಮರಣೆ ಮತ್ತು ವಾರ್ಷಿಕ ವಸಂತ ಸಂಗೀತೋತ್ಸವ: ಗಾಯನ–ರಾಮಕೃಷ್ಣನ್ ಮೂರ್ತಿ, ವಾದ್ಯ ಸಹಕಾರ–ಚಾರುಲತಾ ರಾಮಾನುಜನ್, ಅರ್ಜುನ್ ಕುಮಾರ್, ಚಂದ್ರಶೇಖರ್ ಶರ್ಮಾ, ಆಯೋಜನೆ–ಶ್ರೀರಾಮ ಲಲಿತ ಕಲಾ ಮಂದಿರ, ಸ್ಥಳ–ಬೆಂಗಳೂರು ಗಾಯನ ಸಮಾಜದ ಸಭಾಂಗಣ, ಕೆ.ಆರ್.ರಸ್ತೆ, ಸಂಜೆ 5.30

ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನ: ಉದ್ಘಾಟನೆ–ಎಂ.ನರಸಿಂಹ, ಆಯೋಜನೆ–ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ–ಪರಿಷತ್ತಿನ ಕಚೇರಿ, ಕೃಷ್ಣರಾಜ ಪರಿಷನ್ಮಂದಿರ, ಚಾಮರಾಜಪೇಟೆ, ಸಂಜೆ 5.30

ಅಂಚೆ ಮಕ್ಕಳ ರಂಗ ಬೇಸಿಗೆ ಶಿಬಿರ: ಆಯೋಜನೆ–ರಂಗಚಂದಿರ, ಸ್ಥಳ–ಸಮೃದ್ಧಿ, ಕಾವಲ್‌ಬೈರಸಂದ್ರ, ಆರ್. ಟಿ.ನಗರ, ಸಂಜೆ 6

ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಓದು ಕುರಿತು ಕಾವ್ಯ ವಾಚನ ಮತ್ತು ವ್ಯಾಖ್ಯಾನ: ಕೆ.ಸಿ.ಶಿವಾರೆಡ್ಡಿ, ಅಧ್ಯಕ್ಷತೆ–ಎ.ಜೆ.ಸದಾಶಿವ, ಅತಿಥಿ–ಎಂ.ಸಿ. ನರೇಂದ್ರ, ಆಯೋಜನೆ–ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ, ಸ್ಥಳ–ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6

ಕಳರಿಪಯಟ್ಟು ಪ್ರದರ್ಶನ: ಆಯೋಜನೆ–ಕಳರಿ ಗುರುಕುಲಂ, ಸ್ಥಳ–ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 7

ಪದ್ಮಿನಿ ಪ್ರಿಯ ನೃತ್ಯ ಅಕಾಡೆಮಿಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ: ನಿರ್ದೇಶನ–ಬಿ.ಉಷಾ, ಸ್ಥಳ–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 7.30

ಪಿಎಸ್‌ಐ ಅಕ್ರಮ: ‘ಕಿಂಗ್‌ಪಿನ್’ಗಳ ಮೂಲಕ ಅಭ್ಯರ್ಥಿಗಳನ್ನು ನೇರ ಭೇಟಿ ಆರೋಪ

ಡಿವೈಎಸ್‌ಪಿ ಶಾಂತಕುಮಾರ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ನೇಮಕಾತಿ ವಿಭಾಗದ ಡಿವೈಎಸ್‌ಪಿ ಆಗಿದ್ದ ಶಾಂತಕುಮಾರ್ ಅವರನ್ನು ಸಿಐಡಿ ಅಧಿಕಾರಿಗಳು ಬುಧವಾರ ವಿಚಾರಣೆ ನಡೆಸಿದ್ದಾರೆ. ಇವರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಶಾಂತಕುಮಾರ್ ಅವರು ಹಲವು ವರ್ಷಗಳಿಂದ ನೇಮಕಾತಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಹೀಗಾಗಿ ಅವರಿಗೆ ಮಧ್ಯವರ್ತಿಗಳ ಜೊತೆ ನಿಕಟ ಸಂಪರ್ಕವಿತ್ತು. ‘ಕಿಂಗ್‌ಪಿನ್’ಗಳ ಮೂಲಕ ಅಭ್ಯರ್ಥಿಗಳನ್ನು ನೇರವಾಗಿ ಭೇಟಿಯಾಗುತ್ತಿದ್ದ ಅವರು ಕೆಲಸ ಕೊಡಿಸುವ ಭರವಸೆ ನೀಡುತ್ತಿದ್ದರು. ಅಭ್ಯರ್ಥಿಗಳಿಂದ ಹಂತ ಹಂತವಾಗಿ ಹಣ ಪಡೆದುಕೊಳ್ಳುತ್ತಿದ್ದರು’ ಎಂದು ಸಿಐಡಿ ಮೂಲಗಳು ತಿಳಿಸಿವೆ.

‘ನಿವೃತ್ತ ಐಪಿಎಸ್ ಅಧಿಕಾರಿಯೊಬ್ಬರ ಆಪ್ತರಾಗಿರುವ ಶಾಂತಕುಮಾರ್, ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದ ಅಮೃತ್‌ಪಾಲ್ ಅವರೊಂದಿಗೂ ಒಡನಾಟ ಹೊಂದಿದ್ದರು. ಕೆಲಸದ ಆಮಿಷವೊಡ್ಡಿ ಇವರಿಬ್ಬರು ಅಭ್ಯರ್ಥಿಗಳಿಂದ ಕೋಟ್ಯಂತರ ರೂಪಾಯಿ ಹಣ ಪಡೆದಿರುವ ಅನುಮಾನವಿದೆ. ಈ ಹಿಂದೆ ನಡೆದಿರುವ ಅಕ್ರಮಗಳಲ್ಲೂ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ವಿಚಾರಣೆ ಮುಂದುವರಿಸಿ ಅವರಿಂದ ಮತ್ತಷ್ಟು ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದೂ ಹೇಳಿವೆ.

ರಚನಾ ನಾಪತ್ತೆ?

ಪಿಎಸ್‌ಐ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಮೊದಲ ರ‍್ಯಾಂಕ್ (ಮಹಿಳಾ ವಿಭಾಗ) ಪಡೆದಿದ್ದ ವಿಜಯಪುರದ ರಚನಾ ಹನುಮಂತ ನಾಪತ್ತೆಯಾಗಿದ್ದಾರೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ರಚನಾ, ಅಕ್ರಮ ಎಸಗಿರುವುದು ಸಿಐಡಿ ತನಿಖೆಯಿಂದ ಪತ್ತೆಯಾಗಿತ್ತು. ಅವರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. 545 ಪಿಎಸ್‌ಐ ನೇಮಕಾತಿಗಾಗಿ ಮರು ಲಿಖಿತ ಪರೀಕ್ಷೆ ನಡೆಸಲು ರಾಜ್ಯ ತೀರ್ಮಾನಿಸುತ್ತಿದ್ದಂತೆ, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದ್ದರು. ರಚನಾ ಕೂಡ ಇದರಲ್ಲಿ ಪಾಲ್ಗೊಂಡಿದ್ದರು. ‘ಮೂರು ದಿನಗಳಿಂದ ಆಕೆ ಸಂಪರ್ಕಕ್ಕೆ ಸಿಕ್ಕಿಲ್ಲ. ಆಕೆಯ ಜೊತೆ ಹೋಗಿದ್ದ ಸಹೋದರನ ಮೊಬೈಲ್ ಕೂಡ ಸ್ವಿಚ್ ಆಫ್ ಆಗಿದೆ’ ಎಂದು ಕುಟುಂಬದವರು ಹೇಳಿದ್ದಾರೆ.

‘ಶಾಂತಕುಮಾರ್ ಪ್ರಭಾವಿ ರಾಜಕಾರಣಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಹೀಗಾಗಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ನೇಮಕಾತಿ ವಿಭಾಗದಿಂದ ಅವರು ವರ್ಗಾವಣೆಯಾಗುತ್ತಿರಲಿಲ್ಲ’ ಎನ್ನಲಾಗಿದೆ.

ಮಾತೃ ಇಲಾಖೆಗೆ ವರ್ಗಾವಣೆ: ‘ಅಕ್ರಮದಲ್ಲಿ ಹೆಸರು ಕೇಳಿಬಂದ ಬೆನ್ನಲ್ಲೇ ಶಾಂತಕುಮಾರ್ ಅವರನ್ನು ಆಂತರಿಕ ಭದ್ರತಾ ವಿಭಾಗಕ್ಕೆ (ಐಎಸ್‌ಡಿ) ವರ್ಗಾವಣೆ ಮಾಡಲಾಗಿದೆ. ನೇಮಕಾತಿ ವಿಭಾಗದ ಎಡಿಜಿಪಿಯಾಗಿದ್ದ ಅಮೃತ್ ಪಾಲ್ ಅವರನ್ನು ವಾರದ ಹಿಂದಷ್ಟೇ ಐಎಸ್‌ಡಿ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿತ್ತು.

ಸಶಸ್ತ್ರ ಮೀಸಲು ಪೊಲೀಸ್ ಪಡೆಯಲ್ಲಿ ಕಾನ್‌ಸ್ಟೆಬಲ್ ಆಗಿ ಕರ್ತವ್ಯ ಆರಂಭಿಸಿದ್ದ ಅವರು ಒಒಡಿ ಮೇಲೆ ನೇಮಕಾತಿ ವಿಭಾಗಕ್ಕೆ ನಿಯೋಜನೆಗೊಂಡಿದ್ದರು. ಬಳಿಕ ಆಂತರಿಕ ಭದ್ರತಾ ವಿಭಾಗದ ಇನ್‌ಸ್ಪೆಕ್ಟರ್ ಆಗಿ ಬಡ್ತಿ ಲಭಿಸಿತ್ತು. ಅಲ್ಲಿಂದ ಮತ್ತೆ ನೇಮಕಾತಿ ವಿಭಾಗಕ್ಕೆ ವರ್ಗಾವಣೆ ಮಾಡಿಸಿಕೊಂಡಿದ್ದ ಅವರು ನಂತರ ಡಿವೈಎಸ್‌ಪಿ ಹುದ್ದೆಗೆ ಏರಿದ್ದರು.

ಮಧುಕರ್ ಶೆಟ್ಟಿ ಅವರು ನೇಮಕಾತಿ ಮತ್ತು ತರಬೇತಿ ವಿಭಾಗದ ಡಿಐಜಿ ಆಗಿದ್ದಾಗ ಶಾಂತಕುಮಾರ್ ಸೇರಿದಂತೆ ಹಲವರನ್ನು ವರ್ಗಾವಣೆ ಮಾಡಲಾಗಿತ್ತು. ಮಧುಕರ್ ಶೆಟ್ಟಿ ಅವರು ವರ್ಗಾವಣೆಗೊಂಡ ನಂತರ ಅವರು ಮತ್ತೆ ನೇಮಕಾತಿ ವಿಭಾಗಕ್ಕೇ ವಾಪಾಸಾಗಿದ್ದರು.



ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರ ರಾಜೀನಾಮೆಗೆ ಆಗ್ರಹಿಸಿ ಬಿ.ಕೆ.ಹರಿಪ್ರಸಾದ್ ನೇತೃತ್ವದಲ್ಲಿ ಬುಧವಾರ ಮಲ್ಲೇಶ್ವರ ಆಟದ ಮೈದಾನದಲ್ಲಿ ಪ್ರತಿಭಟನೆ ನಡೆಸುವ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸ್ ವೇಷ ಧರಿಸಿದ್ದ ದೃಶ್ಯ ಗಮನ ಸೆಳೆಯಿತು –ಪ್ರಜಾವಾಣಿ ಚಿತ್ರ

ಯಶವಂತಗೌಡ ವಿಚಾರಣೆ

ನೇಮಕಾತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ಭದ್ರತಾ ಪಡೆಯ (ಕೆಎಸ್‌ಐಎಸ್‌ಎಫ್) ಸಬ್ ಇನ್‌ಸ್ಪೆಕ್ಟರ್ ಯಶವಂತ ಗೌಡ ಅವರನ್ನು ಕಲಬುರಗಿಯಲ್ಲಿ ಬಂಧಿಸಿರುವ ಸಿಐಡಿ ಅಧಿಕಾರಿಗಳು ನಗರಕ್ಕೆ ಕರೆತಂದು ವಿಚಾರಣೆ ನಡೆಸಿದ್ದಾರೆ.‘ಏಪ್ರಿಲ್ 22ರಂದು ಸಿಐಡಿ ಕಚೇರಿಗೆ ವಿಚಾರಣೆಗೆ ಹಾಜರಾಗಿದ್ದ ಇವರು ಒಎಂಆರ್ ಕಾರ್ಬನ್ ಪ್ರತಿ, ಇತರ ದಾಖಲೆಗಳನ್ನು ಕೊಟ್ಟು ಹೋಗಿದ್ದರು. ಒಎಂಆರ್ ಪ್ರತಿ ಪರಿಶೀಲಿಸಿದಾಗ ತಿದ್ದಿರುವುದು ಗೊತ್ತಾಗಿತ್ತು. ಹೀಗಾಗಿ ಬಂಧಿಸಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ. ‘ಕಲಬುರಗಿಯ ನಾಗನಹಳ್ಳಿಯ ಪೊಲೀಸ್ ತರಬೇತಿ ಕೇಂದ್ರದಲ್ಲಿ ತರಬೇತಿಯಲ್ಲಿರುವ ಕೆಲ ಕೆಎಸ್‌ಐಎಸ್‌ಎಫ್ ಸಬ್ ಇನ್‌ಸ್ಪೆಕ್ಟರ್‌ಗಳನ್ನೂ ವಿಚಾರಣೆಗೆ ಕರೆಸುವ ಸಾಧ್ಯತೆ ಇದೆ’ ಎನ್ನಲಾಗಿದೆ.

ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಅಕ್ರಮ

‘₹300 ಕೋಟಿ ಭ್ರಷ್ಟಾಚಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಅಕ್ರಮದಲ್ಲಿ ₹ 300 ಕೋಟಿಗೂ ಹೆಚ್ಚು ಭ್ರಷ್ಟಾಚಾರ ನಡೆದಿದೆ. ಮಂತ್ರಿಗಳು, ಅಧಿಕಾರಿಗಳು ಸೇರಿದಂತೆ ಸರ್ಕಾರವೇ ಈ ಹಗರಣದಲ್ಲಿ ಭಾಗಿಯಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಕ್ರಮದಲ್ಲಿ ಭಾಗಿಯಾಗಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥ ನಾರಾಯಣ ಅವರನ್ನೂ ತಕ್ಷಣ ಸಂಪುಟದಿಂದ ವಜಾಗೊಳಿಸಬೇಕು’ ಎಂದರು.

ಅಕ್ರಮದ ಕುರಿತು ಕಾಟಾಚಾರದ ತನಿಖೆ ನಡೆಯುತ್ತಿದೆ. ನೇಮಕಾತಿ ಪ್ರಕ್ರಿಯೆಯ ನೇತೃತ್ವ ವಹಿಸಿದ್ದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಮೃತ್ ಪಾಲ್ ಮತ್ತು ಅದೇ ವಿಭಾಗದಲ್ಲಿದ್ದ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಅವರ ವಿರುದ್ಧವೂ ಎಫ್‌ಐಆರ್ ದಾಖಲಿಸಿ, ಅಮಾನತು ಮಾಡಬೇಕು ಎಂದರು.

ಸಚಿವ ಅಶ್ವತ್ಥನಾರಾಯಣ ಸಂಬಂಧಿಗಳಾದ ದರ್ಶನ್ ಗೌಡ ಮತ್ತು ನಾಗೇಶ್ ಎಂಬ ಅಭ್ಯರ್ಥಿಗಳು ಅಕ್ರಮವಾಗಿ ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ವಿಚಾರಣೆಗೆ ಕರೆತಂದಿದ್ದ ಅವರನ್ನು ಸಚಿವರು ಪ್ರಭಾವ ಬೀರಿ ಬಿಡಿಸಿರುವ ಆರೋಪ ವಿದೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲೂ ಅಕ್ರಮ ನಡೆದಿದೆ. ಕುಲಸಚಿವರಾಗಿದ್ದ ನಾಗರಾಜ್ ಎಂಬುವವರನ್ನು ಬಂಧಿಸಲಾಗಿದೆ. ಇಲಾಖೆಯ ಜವಾಬ್ದಾರಿ ಹೊತ್ತಿರುವ ಅಶ್ವತ್ಥ ನಾರಾಯಣ ಶಾಮೀಲಾಗದೆ ಅಕ್ರಮ ನಡೆಯಲು ಸಾಧ್ಯವೆ? ಎಂದು ಕೇಳಿದರು.

ಈ ಎರಡೂ ಅಕ್ರಮಗಳ ಕುರಿತು ಹೈಕೋರ್ಟ್‌ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಶಾಸಕ ಪ್ರಿಯಾಂಕ್ ಖರ್ಗೆ, ವಿಧಾನ ಪರಿಷತ್ ಸದಸ್ಯ ನಜೀರ್ ಅಹಮದ್, ಕಾಂಗ್ರೆಸ್ ಮುಖಂಡರಾದ ವಿ.ಎಸ್.ಉಗ್ರಪ್ಪ, ಎಚ್.ಎಂ. ರೇವಣ್ಣ, ಎಂ. ನಾರಾಯಣಸ್ವಾಮಿ ಇದ್ದರು

ಭ್ರಷ್ಟಾಚಾರ ಬೆಂಬಲಿಸಿ ಬೆನ್ನು ತಟ್ಟದರೆ?

‘ರಾಜ್ಯಕ್ಕೆ ಬಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವನ್ನು ಹೊಗಳಿದ್ದಾರೆ. ಶೇಕಡ 40ರಷ್ಟು ಕಮಿಷನ್ ಆರೋಪವೂ ಸೇರಿದಂತೆ ಭ್ರಷ್ಟಾಚಾರದಲ್ಲಿ ಮುಳುಗಿರುವುದನ್ನು ಬೆಂಬಲಿಸಿ ಮುಖ್ಯಮಂತ್ರಿ ಮತ್ತು ಸಚಿವರ ಬೆನ್ನು ತಟ್ಟುವ ಕೆಲಸವನ್ನು ಶಾ ಮಾಡಿದ್ದಾರೆಯೆ’ ಎಂದು ಸಿದ್ದರಾಮಯ್ಯ ಕುಟುಕಿದರು.

ಕೈಗಾರಿಕಾ ಭದ್ರತಾ ಪಡೆ ಎಸ್‌ಐ ವಶಕ್ಕೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ಭದ್ರತಾ ಪಡೆಯ (ಕೆಎಸ್‌ಐಎಸ್‌ಎಫ್) ಸಬ್ ಇನ್‌ಸ್ಪೆಕ್ಟರ್ ಯಶವಂತ ಗೌಡ ಅವರನ್ನು ನಗರದಲ್ಲಿ ಸಿಐಡಿ ಪೊಲೀಸರು ವಶಕ್ಕೆ ಪಡೆದು, ಬೆಂಗಳೂರಿಗೆ ಕರೆದೊಯ್ದಿದ್ದಾರೆ.

ಯಶವಂತಗೌಡ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆಯ ಎಸ್‌ಐ ಆಗಿ ಆಯ್ಕೆಯಾಗಿ ಪ್ರಸ್ತುತ ಕಲಬುರಗಿಯ ನಾಗನಹಳ್ಳಿಯ ಪೊಲೀಸ್ ತರಬೇತಿ ಕೇಂದ್ರದಲ್ಲಿ ತರಬೇತಿಯಲ್ಲಿದ್ದರು. ಬೆಂಗಳೂರಿನ ಕೇಂದ್ರದಲ್ಲಿ ಪರೀಕ್ಷೆ ಬರೆದು ಪಿಎಸ್‌ಐ ಸಿವಿಲ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಇದರಿಂದ ಅನುಮಾನಗೊಂಡಿದ್ದ ಸಿಐಡಿ ಅಧಿಕಾರಿಗಳಿಗೆ ಯಶವಂತ ಗೌಡ ಏಪ್ರಿಲ್ 22ರಂದು ದಾಖಲೆಗಳನ್ನು ಸಲ್ಲಿಸಿ ತರಬೇತಿ ಕೇಂದ್ರಕ್ಕೆ ವಾಪಸಾಗಿದ್ದರು.

ಡಿವೈಎಸ್ಪಿ ವಿಚಾರಣೆ ನಡೆಸಿದ ಸಿಐಡಿ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಬುಧವಾರ ಸಂಜೆ ರಾಯಚೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಿವೈಎಸ್ಪಿ ಅವರನ್ನು ವಿಚಾರಣೆ ನಡೆಸಿದರು. ಕೆಲ ತಿಂಗಳ ಹಿಂದೆ ಕಲಬುರಗಿ ಜಿಲ್ಲೆಯಲ್ಲಿಯೂ ಕೆಲಸ ನಿರ್ವಹಿಸಿದ್ದರು. ಇಲ್ಲಿನ ಐವಾನ್ ಇ ಶಾಹಿ ಅತಿಥಿಗೃಹಕ್ಕೆ ಬಂದ ಆ ಅಧಿಕಾರಿಗೆ ಸಿಐಡಿ ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆದರು. ಇತ್ತೀಚೆಗೆ ಸೇವೆಯಿಂದ ನಿವೃತ್ತರಾದ ಡಿವೈಎಸ್ಪಿ ಅವರನ್ನೂ ಕರೆಸಿ ಮಾಹಿತಿ ಪಡೆಯಲಾಗಿದೆ.

ಡೀಲ್ ಕುದುರಿಸಲು ಮುಂಗಡ ₹ 10 ಲಕ್ಷ ಪಡೆಯುತ್ತಿದ್ದ ಆರೋಪಿಗಳು

ಹಣ ಬರುವವರೆಗೆ ಸಿಗದು ಅಂಕಪಟ್ಟಿ!

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಹಗರಣವು ದಿನಕ್ಕೊಂದು ತಿರುವು ಪಡೆಯುತ್ತಿದೆ. ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸಲು ಅಭ್ಯರ್ಥಿಗಳ ಜೊತೆ ಮಧ್ಯವರ್ತಿಗಳು ಹಣದ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಆದರೆ, ಪೂರ್ಣ ಮೊತ್ತ ಕೈ ಸಿಗುವವರೆಗೆ ಅಭ್ಯರ್ಥಿಗಳ ಮೂಲ ಅಂಕಪಟ್ಟಿ, ಒಎಂಆರ್ ಶೀಟ್‌ನ ಕಾರ್ಬನ್ ಪ್ರತಿಗಳನ್ನು ತಮ್ಮ ಬಳಿಯೇ ಇರಿಸಿಕೊಳ್ಳುತ್ತಿದ್ದರೆ ಹೊರತು ಅವರಿಗೆ ಹಿಂದಿರುಗಿಸುತ್ತಿರಲಿಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ.

‘ಅಫಜಲಪುರದ ರುದ್ರಗೌಡ ಡಿ. ಪಾಟೀಲ ಮತ್ತು ಅಮರ್ಜಾ ನೀರಾವರಿ ಯೋಜನೆಯ ಎಇ ಮಂಜುನಾಥ ಮೇಳಕುಂದಿ ಅಭ್ಯರ್ಥಿಗಳನ್ನು ಭೇಟಿಯಾದಾಗ, ಅಂಕಪಟ್ಟಿ ಮತ್ತು ಒಎಂಆರ್ ಶೀಟ್‌ಗಳನ್ನು ತಮಗೇ ಕೊಡಬೇಕು ಎಂದು ತಾಕೀತು ಮಾಡಿ, ಪಡೆಯುತ್ತಿದ್ದರು. ನಿಗದಿತ ಹಣ ಬಂದ ಬಳಿಕವಷ್ಟೇ ಅವರಿಗೆ ಮೂಲ ಅಂಕಪಟ್ಟಿ ಕೊಡುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಪಿಎಸ್‌ಐ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯು ಪರಿಶೀಲನೆ ವೇಳೆ ಮೂಲ ದಾಖಲೆಗಳನ್ನು ಹಾಜರುಪಡಿಸಲು ಸೂಚಿಸುತ್ತಿತ್ತು. ಆಗ ಅಂಕಪಟ್ಟಿಗಳು ಬೇಕಾಗುತ್ತವೆ ಎಂಬುದನ್ನು ಅರಿತಿದ್ದ ಆರೋಪಿಗಳು ಪೂರ್ತಿ ಹಣ ಪಾವತಿ ಆಗುವವರೆಗೂ ದಾಖಲೆಗಳನ್ನು ತಮ್ಮ ಬಳಿಯೇ ಇಟ್ಟುಕೊಳ್ಳುತ್ತಿದ್ದರು’ ಎಂದು ಗೊತ್ತಾಗಿದೆ.

‘ಪಿಎಸ್‌ಐ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದ ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕು ಕೋನಾಪುರ ಎಸ್.ಎನ್. ತಾಂಡಾದ ನಿವಾಸಿ ಶಾಂತಿಬಾಯಿಗೆ ಸೇರಿದ ಒಎಂಆರ್ ಶೀಟ್ ಮಂಜುನಾಥ ಮನೆಯಲ್ಲಿ ಪತ್ತೆಯಾಗಿದೆ. ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸಲು ಶಾಂತಿಬಾಯಿ ಮಂಜುನಾಥಗೆ ₹ 10 ಲಕ್ಷ ನೀಡಿದ್ದಾರೆ. ಉಳಿದ ಹಣವನ್ನು ತರಲು ಅವರ ಪತಿ ಬಸ್ಯನಾಯ್ಕಗೆ ಮಂಜುನಾಥ ಹೇಳಿದ್ದರು. ಮಂಗಳವಾರ ಬಂಧಿತರಾದ ಅಭ್ಯರ್ಥಿ ಪ್ರಭು ಹಾಗೂ ಶರಣಪ್ಪ ಅವರೂ ರುದ್ರಗೌಡ ಪಾಟೀಲ ಜೊತೆ ಒಪ್ಪಂದ ಮಾಡಿಕೊಂಡು ಪರೀಕ್ಷೆಗೆ ಮುಂಚೆ ₹ 20 ಲಕ್ಷ ಹಾಗೂ ಫಲಿತಾಂಶ ಪ್ರಕಟವಾದ ಬಳಿಕ ₹ 30 ಲಕ್ಷ ಹಣವನ್ನು ರುದ್ರಗೌಡಗೆ ತಲುಪಿಸಲಾಗಿತ್ತು’ ಎಂದು ಆರೋಪಿಗಳು ತಿಳಿಸಿದ್ದಾರೆ. ಇದಕ್ಕಾಗಿ ಅಭ್ಯರ್ಥಿಯ ತಂದೆ ಶರಣಪ್ಪ ಕಲಬುರಗಿಯಲ್ಲಿದ್ದ ತಮ್ಮ ನಿವೇಶನ ಮಾರಿದ್ದರು.

ಆರೋಪಿಗಳು 10 ದಿನ ಸಿಐಡಿ ವಶಕ್ಕೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಬಂಧಿಸಲಾದ ಅಭ್ಯರ್ಥಿ ಪ್ರಭು, ಅವರ ತಂದೆ ಶರಣಪ್ಪ ಹಾಗೂ ಅಕ್ರಮಕ್ಕೆ ಸಾಥ್ ನೀಡಿದ ಚಂದ್ರಕಾಂತ ಕುಲಕರ್ಣಿಗೆ ಇಲ್ಲಿನ ಮೂರನೇ ಜೆಎಂಎಫ್ ನ್ಯಾಯಾಲಯವು 10 ದಿನಗಳವರೆಗೆ ಸಿಐಡಿ ವಶಕ್ಕೆ ನೀಡಿ ಆದೇಶ ಹೊರಡಿಸಿದೆ.

ಆರೋಪಿಗಳಾದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ಚಿಲ್, ಅಮರ್ಜಾ ನೀರಾವರಿ ಯೋಜನೆ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ ಹಾಗೂ ಅಭ್ಯರ್ಥಿ ಶ್ರೀಧರ ಪವಾರ ಅವರನ್ನು ಎಂಟು ದಿನಗಳವರೆಗೆ ಸಿಐಡಿ ವಶಕ್ಕೆ ಒಪ್ಪಿಸಿ ನ್ಯಾಯಾಧೀಶ ಸಂತೋಷ ಶ್ರೀವಾಸ್ತವ ಆದೇಶಿಸಿದರು.

ಹಯ್ಯಾಳಿ, ರುದ್ರಗೌಡ ಅಮಾನತು

ಪಿಎಸ್‌ಐ ಅಕ್ರಮ ನೇಮಕಕ್ಕೆ ಸಂಬಂಧಿಸಿದಂತೆ ಬಂಧಿತರಾದ ಶಾಸಕರ ಗನ್ ಮ್ಯಾನ್ ಆಗಿದ್ದ ಹಯ್ಯಾಳಿ ದೇಸಾಯಿ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ಅಮಾನತುಗೊಳಿಸಿದ್ದಾರೆ.

ಮತ್ತೊಬ್ಬ ಬಂಧಿತ ಅಭ್ಯರ್ಥಿ, ಸಿಎನ್‌ಆರ್ ಕಾನ್‌ಸ್ಟೆಬಲ್ ರುದ್ರಗೌಡ ಅವರನ್ನು ಕಲಬುರಗಿ ಪೊಲೀಸ್ ಕಮಿಷನರ್ ಡಾ.ವೈ.ಎಸ್. ರವಿಕುಮಾರ್ ಅಮಾನತುಗೊಳಿಸಿದ್ದಾರೆ.

‘ಸದ್ಯ ಸಿಐಡಿ ಕಸ್ಟಡಿಯಲ್ಲಿರುವ ಅಮರ್ಜಾ ನೀರಾವರಿ ಯೋಜನೆಯ ಸಹಾಯಕ ಎಂಜಿನಿಯರ್ ಮಂಜುನಾಥ ಮೇಳಕುಂದಿ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಕುರಿತು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ’ ಎಂದು ಕರ್ನಾಟಕ ನೀರಾವರಿ ನಿಗಮದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಾಂಡಾದಲ್ಲಿ ಮೌನ

ಪಿಎಸ್‌ಐ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರ ಬಂಧನದಿಂದ ತಪ್ಪಿಸಿಕೊಳ್ಳಲು ಪರಾರಿಯಾಗಿರುವ, ಸೇಡಂ ತಾಲ್ಲೂಕಿನ ಶಾಂತಿಬಾಯಿ ಅವರ ಮನೆ ಇರುವ ಕೋನಾಪುರ ತಾಂಡಾದಲ್ಲಿ ಮೌನ ಆವರಿಸಿದೆ.

ಪ್ರಕರಣ ಬೆಳಕಿಗೆ ಬಂದಾಗಿನಿಂದ ಶಾಂತಿಬಾಯಿ, ಪತಿ ಬಸ್ಯನಾಯ್ಕ ಪರಾರಿಯಾಗಿದ್ದಾರೆ. ತಾಂಡಾದಲ್ಲಿ ತಗಡಿನ ಶೆಡ್‌ನ ಚಿಕ್ಕ ಮನೆಯಲ್ಲಿ ಬಸ್ಯನಾಯ್ಕ, ಶಾಂತಿಬಾಯಿ, ಅವರ ಇಬ್ಬರು ಮಕ್ಕಳು, ಬಸ್ಯನಾಯ್ಕ ತಾಯಿ, ಸಹೋದರ, ಅವರ ಪತ್ನಿ ವಾಸವಿದ್ದಾರೆ.

5 ವರ್ಷಗಳ ಹಿಂದೆ ಸೇಡಂ ತಾಲ್ಲೂಕಿನ ಕೋಲಕುಂದಾ ತಾಂಡಾದ ಶಾಂತಿಬಾಯಿ ಬಸ್ಯನಾಯ್ಕ ಅವರನ್ನು ಮದುವೆಯಾಗಿದ್ದರು. ಅಂದಿನಿಂದ ಸರ್ಕಾರಿ ನೌಕರಿಗಾಗಿ ಪ್ರಯತ್ನ ನಡೆಸಿದ್ದರು’ ಎಂದು ತಾಂಡಾ ನಿವಾಸಿಯೊಬ್ಬರು ತಿಳಿಸಿದ್ದಾರೆ.

ಅತ್ಯಾಚಾರ ಆರೋಪ

ಒಂದನೇ ಪುಟದಿಂದ...

ಆರೋಪಿ ಅಧಿಕಾರಿಯು ಬಾಲಕಿಯ ಚಿಕ್ಕಮ್ಮನ ಸಮ್ಮುಖದಲ್ಲಿಯೇ ಠಾಣೆಯ ಕೊಠಡಿಯೊಳಗೆ ಬಾಲಕಿಯನ್ನು ಕರೆದೊಯ್ದು ಅತ್ಯಾಚಾರವೆಸಗಿದ್ದಾನೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ. ಎಫ್‌ಐಆರ್‌ನಲ್ಲಿ ಬಾಲಕಿಯ ಚಿಕ್ಕಮ್ಮನ ಹೆಸರನ್ನೂ ಸೇರಿಸಲಾಗಿದೆ.

ಬಾಲಕಿ ಎನ್‌ಜಿಒ ಬಳಿ ತನ್ನ ಮೇಲೆ ನಡೆದ ದೌರ್ಜನ್ಯಗಳನ್ನು ವಿವರಿಸಿದ್ದು, ನಂತರದಲ್ಲಿ ಪೊಲೀಸ್ ಅಧೀಕ್ಷಕರಿಗೆ ದೂರು ನೀಡಲಾಗಿದೆ. ಆ ಬಳಿಕವಷ್ಟೇ ಪ್ರಕರಣ ದಾಖಲಾಗಿದೆ. 4 ವಾರಗಳಲ್ಲಿ ವರದಿ ನೀಡುವಂತೆ ಎನ್‌ಎಚ್‌ಆರ್‌ಸಿ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ಪಿಎಸ್‌ಐ ಮರುಪರೀಕ್ಷೆ: ಸರ್ಕಾರಕ್ಕೆ ಕೆಎಟಿ ನೋಟಿಸ್

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ (ಪಿಎಸ್‌ಐ) 545 ನೇಮಕಾತಿಗೆ ಮರು ಪರೀಕ್ಷೆಗೆ ನಡೆಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ನಾಲ್ವರು ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಗೆ (ಕೆಎಟಿ) ಆದೇಶಿಸಿದೆ.

ಈ ಕುರಿತಂತೆ ಬೆಂಗಳೂರಿನ ಎಲ್. ಎನ್.ಪವಿತ್ರ ಸೇರಿದಂತೆ ಒಟ್ಟು 28 ಜನರು ಸಲ್ಲಿಸಿರುವ ಅರ್ಜಿಯನ್ನು ಕೆಎಟಿ ನ್ಯಾಯಾಂಗ ಸದಸ್ಯ ಟಿ. ನಾರಾಯಣಸ್ವಾಮಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿತು.

ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲ ಡಿ.ಆರ್.ರವಿಶಂಕರ್ ವಾದ ಮಂಡಿಸಿ, ‘ಸರ್ಕಾರದ ಆದೇಶ ರದ್ದುಪಡಿಸಿ, ಕಳಂಕರಹಿತ ಮತ್ತು ಕಳಂಕಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸಿ ಹಿಂದಿನ ಅಧಿಸೂಚನೆ ಅನುಸಾರವೇ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಹಾಗೂ ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು.


ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ಕೂಡುಮಂಗಳೂರಿನಲ್ಲಿ ಬಿದ್ದ ಆಲಿಕಲ್ಲನ್ನು ತೋರಿಸಿದರು


ಹುಬ್ಬಳ್ಳಿಯಲ್ಲಿ ಸುರಿದ ಧಾರಾಕಾರ ಗಾಳಿ, ಮಳೆಗೆ ದೇಶಪಾಂಡೆನಗರದ ಬಳಿ ಆಟೊ ಮೇಲೆ ತೆಂಗಿನ ಮರ ಬಿದ್ದು ವಾಹನ ಜಖಂಗೊಂಡಿದೆ –ಪ್ರಜಾವಾಣಿ ಚಿತ್ರ

ರಾಜ್ಯದ ವಿವಿಧೆಡೆ ಮಳೆ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬುಧವಾರ ರಭಸದ ಮಳೆ ಸುರಿದಿದ್ದು, ಸಿಡಿಲು ಬಡಿದು ಇಬ್ಬರು ಸೇರಿದಂತೆ ಮೂವರು ಮೃತಪಟ್ಟಿದ್ದಾರೆ.

ಮೊಳಕಾಲ್ಮುರು ತಾಲೂಕಿನ ಹಾನಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇಗಳಹಟ್ಟಿಯಲ್ಲಿ ಬುಧವಾರ ಕುರಿ ಮೇಯಿಸಲು ತೆರಳಿದ್ದ ತಾಯಿ, ಮಗ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಮೇಗಳಹಟ್ಟಿಯ ಮಾರಕ್ಕ (40), ಮಗ ವೆಂಕಟೇಶ (17) ಮೃತರು. ಬುಧವಾರ ಸಂಜೆ ಕುರಿ ಮೇಯಿಸಿಕೊಂಡು ಮನೆಗೆ ಮರಳುವಾಗ ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹುಬ್ಬಳ್ಳಿಯಲ್ಲಿ ಮರವೊಂದು ಆಟೊ ಮೇಲೆ ಬಿದ್ದಿದ್ದರಿಂದ ಚಾಲಕ, ಸೋನಿಯಾಗಾಂಧಿ ನಗರದ ರಾಬಿನ್ ಮರೋಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸುಮಾರು ಅರ್ಧ ತಾಸು ಸುರಿದ ಮಳೆಯ ಅಬ್ಬರಕ್ಕೆ ಹುಬ್ಬಳ್ಳಿ ನಗರದಲ್ಲಿ ವಿವಿಧೆಡೆ ಮರಗಳು, ಕೊಂಬೆಗಳು ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿದವು. ಮೂರ್ನಾಲ್ಕು ಮನೆಗಳ ಗೋಡೆಗಳು ಕುಸಿದಿವೆ. ಮರಗಳು ರಸ್ತೆಗೆ ಅಡ್ಡವಾಗಿ ಬಿದ್ದಿದ್ದರಿಂದಾಗಿ ಹಲವು ರಸ್ತೆಗಳಲ್ಲಿ ಗಂಟೆಗಟ್ಟಲೆ ವಾಹನಗಳ ಸಂಚಾರ ಬಂದ್ ಆಯಿತು. ಕೆಲವು ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಮಡಿಕೇರಿ, ಹಾಸನ ಜಿಲ್ಲೆಯಲ್ಲಿ ಬುಧವಾರ ಮಧ್ಯಾಹ್ನ ಆಲಿಕಲ್ಲು ಸಹಿತ ಧಾರಾಕಾರ ಮಳೆ ಸುರಿಯಿತು.

ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಲವು ಭಾಗಗಳಲ್ಲಿ ಬುಧವಾರ ಸಂಜೆ ಮಳೆ ಸುರಿದಿದೆ.

ಕೆಲವೆಡೆ ಮಂಗಳವಾರ ರಾತ್ರಿಯಿಂದಲೇ ಮಳೆ ಆರಂಭವಾಗಿದೆ. ಬುಧವಾರ ಸಂಜೆ ಬಿರುಗಾಳಿ ಸಹಿತ ಆಲಿಕಲ್ಲು ಮಳೆಗೆ ಮರಗಳು ನೆಲಕ್ಕುರುಳಿದ್ದು, ಮೇಲ್ಛಾವಣಿಯ ಸಿಮೆಂಟ್ ಶೀಟ್ ಹಾರಿಹೋಗಿವೆ. ತಾಸುಗಟ್ಟಲೇ ರಭಸದಿಂದ ಸುರಿದ ಆಲಿಕಲ್ಲು ಮಳೆಗೆ ಮಾವಿನ ಕಾಯಿಗಳು ಉದುರಿದ್ದು, ಬಾಳೆತೋಟಗಳು ನಾಶವಾಗಿವೆ.

ರಾಮನಗರ ಜಿಲ್ಲೆಯಲ್ಲಿ ಬಿರುಗಾಳಿ–ಆಲಿಕಲ್ಲಿನ ಹೊಡೆತಕ್ಕೆ ನೂರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದ ಬೆಳೆ ಹಾನಿಯಾಗಿದೆ. ಜಿಲ್ಲೆಯಲ್ಲಿ ಮಾವಿನ ಕೊಯ್ಲು ನಡೆದಿದ್ದು, ತೋಟಗಳಲ್ಲಿ ಫಸಲು ತುಂಬಿದೆ. ಎರಡು ದಿನದ ಹಿಂದೆ ಬೀಸಿದ ಬಿರುಗಾಳಿಯಿಂದಾಗಿ ನೂರಾರು ಮರಗಳು ನೆಲಕ್ಕೆ ಉರುಳಿವೆ. ಟನ್‌ಗಟ್ಟಲೆ ಕಾಯಿ ನೆಲಕ್ಕೆ ಬಿದ್ದಿವೆ.

ಮಡಿಕೇರಿಯಲ್ಲಿ ಒಂದು ತಾಸು ಮಳೆ ಅಬ್ಬರಿಸಿತು. ಗುಡುಗು, ಸಿಡಿಲಿನ ಆರ್ಭಟ ಜೋರಾಗಿತ್ತು. ಕುಶಾಲನಗರ ತಾಲ್ಲೂಕಿನ ಕೂಡುಮಂಗಳೂರು ವ್ಯಾಪ್ತಿಯಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ. ದೊಡ್ಡ ಗಾತ್ರದ ಆಲಿಕಲ್ಲು ಬಿದ್ದ ಪರಿಣಾಮ ಕೆಲವು ಮನೆಗಳ ಹೆಂಚುಗಳಿಗೆ ಹಾನಿಯಾಗಿದೆ. ತಲಕಾವೇರಿ, ಭಾಗಮಂಡಲ ಭಾಗದಲ್ಲಿ ಮಂಗಳವಾರ ರಾತ್ರಿಯೂ ಧಾರಾಕಾರ ಮಳೆಯಾಗಿದೆ.

ಹಾಸನ ನಗರ ಸೇರಿದಂತೆ ವಿವಿಧೆಡೆ ಗುಡುಗು, ಸಿಡಿಲಿನ ಆರ್ಭಟದೊಂದಿಗೆ ಜೋರು ಮಳೆಯಾಗಿದೆ. ನಗರದಲ್ಲಿ ಒಂದು ತಾಸು ಮಳೆಯಾದರೆ, ಸಕಲೇಶಪುರ, ಹೆತ್ತೂರು, ಆಲೂರು, ಹಳೇಬೀಡು, ಬೇಲೂರು, ಚನ್ನರಾಯಪಟ್ಟಣ, ಅರಸೀಕೆರೆಯಲ್ಲಿ ಅರ್ಧ ತಾಸು ಧಾರಾಕಾರ ಮಳೆಯಾಗಿದೆ. ಬಾಣಾವರದಲ್ಲಿ ಆಲಿಕಲ್ಲು ಮಳೆಯಾಗಿದೆ.

ಕಲಬುರಗಿ ನಗರ ಮತ್ತು ಬೀದರ್ ಜಿಲ್ಲೆಯ ಹುಲಸೂರಿನಲ್ಲಿ ಬುಧವಾರ ಮಳೆಯಾಯಿತು. ಕೆಲ ದಿನಗಳಿಂದ ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ 43 ಡಿಗ್ರಿ ಸೆಲ್ಸಿಯಸ್ ಇತ್ತು.

ಸಿಡಿಲು ಬಡಿದು ಹೋರಿ ಸಾವು

ನಾಯಕನಹಟ್ಟಿ (ಚಿತ್ರದುರ್ಗ) ತೆಂಗಿನ ಮರದಡಿ ಹುಲ್ಲು ಮೇಯುತ್ತಿದ್ದ ಹೋರಿಯೊಂದಕ್ಕೆ ಬುಧವಾರ ಮಧ್ಯಾಹ್ನ ಸಿಡಿಲು ಬಡಿದು ಮೃತಪಟ್ಟಿದೆ. ಮೊಳಕಾಲ್ಮುರು, ಹೊಳಲ್ಕೆರೆ, ಹಿರಿಯೂರು ತಾಲ್ಲೂಕುಗಳಲ್ಲಿ ಮಳೆ– ಗಾಳಿಗೆ ಬೆಳೆ ಹಾನಿಯಾಗಿದೆ.

ಶಿವಮೊಗ್ಗ ವರದಿ: ಬುಧವಾರ ಸಂಜೆ ಹೊತ್ತಿಗೆ ಜಿಲ್ಲೆಯಾದ್ಯಂತ ಗುಡುಗು, ಮಿಂಚು ಸಹಿತ ಮಳೆಯಾಗಿದೆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ಪಟ್ಟಣ ಸೇರಿ ಚನ್ನಗಿರಿ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಮಂಗಳವಾರ ತಡ ರಾತ್ರಿ ಮಿಂಚು, ಗುಡುಗಿನ ಆರ್ಭಟದೊಂದಿಗೆ ಉತ್ತಮವಾಗಿ ಮಳೆಯಾಗಿದೆ.

ಪ್ರಭಾವಿಗಳ ಕೈವಾಡ: ದೂರು

ಒಂದನೇ ಪುಟದಿಂದ...

‘ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದ ಅಮೃತ್ ಪಾಲ್ ಪ್ರಕರಣದ ಸೂತ್ರಧಾರಿ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸಬೇಕು. ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಅಕ್ರಮವೇ ಆಗಿಲ್ಲ ಎಂದು ಬಹಿರಂಗ ಹೇಳಿಕೆ ನೀಡಿದ್ದಾರೆ. ತನಿಖೆ ಪ್ರಗತಿಯಲ್ಲಿರುವಾಗಲೇ ಅವರು ಮಾಧ್ಯಮಗಳ ಎದುರು ಆ ರೀತಿ ಹೇಳಿರುವುದು ತಪ್ಪು. ಯಾವ ಆಧಾರದಲ್ಲಿ ಹಾಗೆ ಹೇಳಿದ್ದಾರೆ. ಪ್ರಕರಣದ ದಿಕ್ಕು ತಪ್ಪಿಸಲು ಯತ್ನಿಸಿದ್ದೇಕೆ ಎಂಬುದರ ಕುರಿತು ವಿಚಾರಣೆ ನಡೆಸಬೇಕು’ ಎಂದು ಆಗ್ರಹಿಸಲಾಗಿದೆ.

‘ಸಿಐಡಿ ಎಸ್.ಪಿ.ರವಿ ಡಿ. ಚನ್ನಣ್ಣನವರ ಅವರು ಮುಖ್ಯ ಆರೋಪಿ ದಿವ್ಯಾ ಹಾಗರಗಿ ಜೊತೆಗಿರುವ ಭಾವಚಿತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇವರ ಭೇಟಿಯ ಹಿಂದಿನ ಉದ್ದೇಶ ಏನು?. ರವಿ ಚನ್ನಣ್ಣನವರ ಅವರ ಕುಟುಂಬದವರು ರಾಜ್ಯದ ವಿವಿಧೆಡೆ ಐಎಎಸ್–ಐಪಿಎಸ್ ತರಬೇತಿ ಕೇಂದ್ರಗಳನ್ನು ನಡೆಸುತ್ತಿದ್ದಾರೆ. ನೇಮಕಾತಿ ಹಗರಣಕ್ಕೂ ಅವರ ಕುಟುಂಬದ ಒಡೆತನದ ಕೇಂದ್ರಗಳಿಗೂ ಸಂಬಂಧವಿದೆ ಎಂದು ಹೇಳಲಾಗುತ್ತಿದೆ. ಈ ಕುರಿತೂ ತನಿಖೆಯಾಗಬೇಕು’ ಎನ್ನಲಾಗಿದೆ.

‘ಪೊಲೀಸರಿಂದಲೇ ಅಕ್ರಮ ಬಯಲು’

ರಾಮನಗರ: ಬೆಂಗಳೂರು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ವಿರುದ್ಧ ಬಿಜೆಪಿಯವರು ಮಾತನಾಡಿದ್ದರಿಂದ ಪೊಲೀಸ್ ಇಲಾಖೆಯವರೇ ಪಿಎಸ್‌ಐ ನೇಮಕಾತಿ ಹಗರಣವನ್ನು ಬಯಲಿಗೆ ಎಳೆದಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಚನ್ನಪಟ್ಟಣದಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನಡೆದ ಚಂದ್ರು ಹತ್ಯೆ ಪ್ರಕರಣಕ್ಕೂ ಮತ್ತು ಪಿಎಸ್‌ಐ ಅಕ್ರಮ ನೇಮಕಾತಿ ಹಗರಣ ಬಯಲಿಗೆ ಬರುವುದಕ್ಕೂ ನೇರವಾದ ನಂಟಿದೆ. ಪೊಲೀಸ್ ಇಲಾಖೆ ಇದನ್ನು ಅಪಘಾತ ಎಂದು ಹೇಳಿತ್ತು. ಆದರೆ ಬಿಜೆಪಿ ನಾಯಕರು ಉರ್ದು ವಿಚಾರವಾಗಿ ಆದ ಗಲಾಟೆ ಎಂದು ಕತೆ ಕಟ್ಟಿದ್ದರು ಎಂದರು.

ಬಿಜೆಪಿ ವಕ್ತಾರರೊಬ್ಬರು ಕಮಲ್ ಪಂತ್ ವಿರುದ್ಧ ಆರೋಪ ಮಾಡಿದ್ದರು. ಅದೇ ವಕ್ತಾರರಿಗೆ ಕಲಬುರಗಿಯಲ್ಲಿ ಬಂಧನ ಆದ ಪಿಎಸ್‌ಐ ನೇಮಕಾತಿ ಹಗರಣದ ಆರೋಪಿಗಳ ಜೊತೆ ನಂಟು ಇತ್ತು. ಹೀಗಾಗಿ ನಿಷ್ಠಾವಂತ ಅಧಿಕಾರಿಗೆ ಆದ ಅವಮಾನಕ್ಕೆ ಸೇಡು ತೀರಿಸಿಕೊಳ್ಳಲು ಮತ್ತು ಸರ್ಕಾರಕ್ಕೆ ಬುದ್ಧಿ ಕಲಿಸಲು ಪಂತ್ ಅಭಿಮಾನಿಗಳೇ ಇದನ್ನು ಬಯಲಿಗೆ ಎಳೆದರು ಎಂದು ವಿಶ್ಲೇಷಿಸಿದರು.

ಡಿವೈಎಸ್‌ಪಿ, ಪಿಐ ಅಮಾನತು

ಒಂದನೇ ಪುಟದಿಂದ...

ಜ್ಞಾನ ಜ್ಯೋತಿ ಪರೀಕ್ಷಾ ಕೇಂದ್ರದ ಉಸ್ತುವಾರಿಯಾಗಿ ಡಿವೈಎಸ್‌ಪಿ ಹುಲ್ಲೂರು ಅವರನ್ನು ನೇಮಿಸಲಾಗಿತ್ತು. ಸಂಬಂಧಿಕರೊಬ್ಬರು ನಿಧನರಾಗಿದ್ದಾರೆ ಎಂಬ ಕಾರಣ ನೀಡಿ ಪರೀಕ್ಷೆ ಆರಂಭವಾದ ಅರ್ಧ ಗಂಟೆಯಲ್ಲೇ ಹುಲ್ಲೂರು ಕರ್ತವ್ಯದಿಂದ ಬಿಡುಗಡೆಯಾಗಿದ್ದರು. ಬಳಿಕ ಹೊಸಮನಿ ಅವರನ್ನು ಉಸ್ತುವಾರಿಯನ್ನಾಗಿ ನೇಮಿಸಲಾಗಿತ್ತು. ಇಬ್ಬರೂ ಪೂರ್ವಯೋಜಿತವಾಗಿ ಅಕ್ರಮದಲ್ಲಿ ಭಾಗಿಯಾಗಿದ್ದರು. ಹುಲ್ಲೂರು ಇತ್ತೀಚೆಗಷ್ಟೇ ನಿವೃತ್ತರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರೊ.ನಾಗರಾಜ್ ಅಮಾನತು

ಮೈಸೂರು: ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿ ಪರೀಕ್ಷೆ ಅಕ್ರಮ ಆರೋಪದಲ್ಲಿ ಬಂಧಿತರಾಗಿರುವ ಇಲ್ಲಿನ ಭೂಗೋಳ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಎಚ್.ನಾಗರಾಜ್ ಅವರನ್ನು ಮೈಸೂರು ವಿಶ್ವವಿದ್ಯಾಲಯವು ಸೇವೆಯಿಂದ ಅಮಾನತುಗೊಳಿಸಿದೆ.

ಧಾರವಾಡದ ಕರ್ನಾಟಕ ವಿ.ವಿ. ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನಿಯೋಜನೆಗೊಂಡಿದ್ದ ಅವರನ್ನು ಈಚೆಗೆ ಬೆಂಗಳೂರಿನ ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದರು. ನಂತರ, ಉನ್ನತ ಶಿಕ್ಷಣ ಇಲಾಖೆಯು ಅವರನ್ನು ಕುಲಸಚಿವ ಹುದ್ದೆಯಿಂದ ಬಿಡುಗಡೆಗೊಳಿಸಿ ಮಾತೃ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯಕ್ಕೆ ಕಳುಹಿಸಿತ್ತು.

ಈಗ ಅವರನ್ನು ಮೈಸೂರು ವಿಶ್ವವಿದ್ಯಾಲಯವು ಏ.27ರಿಂದ ಪೂರ್ವಾನ್ವಯವಾಗುವಂತೆ ಅಮಾನತುಗೊಳಿಸಿ, ಇಲಾಖಾ ವಿಚಾರಣೆಗೆ ಕಾಯ್ದಿರಿಸಿ ಆದೇಶ ಹೊರಡಿಸಿದೆ.

‘ಇಲಾಖಾ ವಿಚಾರಣೆಗೆ ಸಿದ್ಧತೆ ನಡೆದಿದೆ. ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗುತ್ತಿದೆ’ ಎಂದು ವಿಶ್ವವಿದ್ಯಾಲಯ ಕುಲಸಚಿವ ಪ್ರೊ.ಆರ್.ಶಿವಪ್ಪ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಉಳಿತಾಯ ಮಾಡುವವರಿಗೆ ಸಿಹಿ

ಒಂದನೇ ಪುಟದಿಂದ...


‘ನಗದು ಮೀಸಲು ಅನುಪಾತವನ್ನು ಶೇ 0.5ರಷ್ಟು ಹೆಚ್ಚಳ ಮಾಡಿರುವುದರಿಂದಾಗಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ಸರಿಸುಮಾರು ₹ 87 ಸಾವಿರ ಕೋಟಿಯಷ್ಟು ಹಣ ಆರ್‌ಬಿಐ ಕಡೆ ಹೋಗಲಿದೆ. ಹೀಗಾಗಿ, ಬ್ಯಾಂಕ್‌ಗಳು ಹೆಚ್ಚಿನ ಬಂಡವಾಳದ ಅಗತ್ಯಕ್ಕಾಗಿ ಠೇವಣಿಗಳ ಮೇಲೆ ಹೆಚ್ಚು ಬಡ್ಡಿ ಕೊಡುವ ಸಾಧ್ಯತೆ ಇದೆ’ ಎಂದು ಅವರು ತಿಳಿಸಿದರು.

ಹಣದುಬ್ಬರ ಜಾಸ್ತಿ ಆಗಿದೆ. ಇದರಿಂದಾಗಿ ಕಂಪನಿಗಳ ಲಾಭದ ಪ್ರಮಾಣ ಕಡಿಮೆಯಾಗಬಹುದು, ಷೇರುಗಳ ಮೌಲ್ಯದಲ್ಲಿ ದೊಡ್ಡ ಮಟ್ಟದ ಏರಿಕೆ ತಕ್ಷಣಕ್ಕೆ ಸಿಗಲಿಕ್ಕಿಲ್ಲ. ಹೀಗಾಗಿ, ಹೂಡಿಕೆದಾರರು ಈಗಿನ ಸಂದರ್ಭದಲ್ಲಿ ಬಹಳ ಜಾಗರೂಕವಾಗಿ ಷೇರುಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಟ್ರೇಡಿಂಗ್ ಮಾಡುವವರು ತೀರಾ ಎಚ್ಚರಿಕೆಯಿಂದ ತೀರ್ಮಾನ ತೆಗೆದುಕೊಳ್ಳುವುದು ಒಳಿತು ಎಂದು ಅವರು ಸಲಹೆ ನೀಡಿದರು.

ಹಣದುಬ್ಬರವು ನಿಯಂತ್ರಣಕ್ಕೆ ಬಂದ ನಂತರದಲ್ಲಿ ಷೇರು ಮಾರುಕಟ್ಟೆಯಲ್ಲಿನ ಗಳಿಕೆಯು ಉತ್ತಮವಾಗಬಹುದು. ಹೀಗಾಗಿ, ಮ್ಯೂಚುವಲ್ ಫಂಡ್‌ಗಳ ಮೂಲಕ ಮತ್ತು ನೇರವಾಗಿ ಷೇರುಗಳಲ್ಲಿ ದೀರ್ಘಾವಧಿಗೆ ಹೂಡಿಕೆ ಮಾಡುವವರು ಹೆಚ್ಚು ಚಿಂತಿಸಬೇಕಾದ ಅಗತ್ಯವಿಲ್ಲ ಎಂದರು.

ರಂಗಕಲಾವಿದೆ ಲಕ್ಷ್ಮೀಬಾಯಿ ಏಣಗಿ ನಿಧನ

ಧಾರವಾಡ: ರಂಗ ಕಲಾವಿದೆ ಲಕ್ಷ್ಮೀಬಾಯಿ ಬಾಳಪ್ಪ ಏಣಗಿ (96) ಬುಧವಾರ ನಿಧನರಾದರು.



ದಿ.ಏಣಗಿ ಬಾಳಪ್ಪ ಅವರ ಪತ್ನಿ ಹಾಗೂ ದಿ. ನಟರಾಜ ಏಣಗಿ ಅವರ ತಾಯಿಯಾದ ಲಕ್ಷ್ಮೀಬಾಯಿ ಅವರಿಗೆ ಪುತ್ರಿ ಇದ್ದಾರೆ.

ಏಣಗಿ ಬಾಳಪ್ಪ ಅವರು ಅಭಿನಯದ ನಾಟಕಗಳಲ್ಲಿ ಪ್ರಮುಖ ನಟಿಯಾಗಿ ಲಕ್ಷ್ಮೀಬಾಯಿ ಅವರು ಅಭಿನಯಿಸುತ್ತಿದ್ದರು. ಲಕ್ಷ್ಮೀಬಾಯಿ ಅವರು ಅಭಿನಯಿಸಲು ಆರಂಭಿಸಿದ ನಂತರ ಬಾಳಪ್ಪನವರು ಸ್ತ್ರೀಪಾತ್ರಗಳಿಗೆ ಬಣ್ಣ ಹಚ್ಚುವುದನ್ನು ನಿಲ್ಲಿಸಿದ್ದರು.

ಕಂಪನಿಯ ಮಾಲಕಿಯಾಗಿಯೂ ರಂಗಭೂಮಿಯನ್ನು ಮುನ್ನಡೆಸಿದ್ದರು. ಕಿತ್ತೂರು ಚನ್ನಮ್ಮ, ದ್ರೌಪದಿ, ಸೀತೆ, ತಾರಾಮತಿ, ಸಕ್ಕೂಬಾಯಿ, ನೀಲಾಂಬಿಕೆ ಸೇರಿದಂತೆ ಅನೇಕ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿ ಪ್ರಸಿದ್ಧಿ ಪಡೆದಿದ್ದರು. ಹಲವು ಸಿನಿಮಾಗಳಲ್ಲಿ ಪೋಷಕ ಪಾತ್ರಗಳಲ್ಲೂ ನಟಿಸಿದ್ದರು.

ಡಾ.ಗುಬ್ಬಿ ವೀರಣ್ಣ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ. ಅಂತ್ಯಕ್ರಿಯೆ ನಗರದ ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ನೆರವೇರಿತು.

ರಾಜ್ಯದ ಪ್ರಥಮ ತೃತೀಯ ಲಿಂಗಿ ಸಂಶೋಧನಾ ವಿದ್ಯಾರ್ಥಿ ದೀಪಾ ಬುದ್ದೆ ಮನವಿ

‘ತಂಗುವುದಕ್ಕೊಂದು ಸೂರು ಕೊಡಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ತಂಗಲು ನನಗೊಂದು ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಿಕೊಡಿ’ ಎಂದು ಮೈಸೂರು ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಮಾಡುತ್ತಿರುವ ತೃತೀಯ ಲಿಂಗಿ ದೀಪಾ ಬುದ್ದೆ ಬುಧವಾರ ಮನವಿ ಮಾಡಿದರು.

‘ರಾಜ್ಯದಲ್ಲಿ ಪಿಎಚ್.ಡಿ ಮಾಡುತ್ತಿರುವ ಮೊದಲ ತೃತೀಯ ಲಿಂಗಿ ನಾನು. ಇಲ್ಲಿ ನಮಗೆಂದು ಪ್ರತ್ಯೇಕ ವಿದ್ಯಾರ್ಥಿ ನಿಲಯ ಇಲ್ಲ. ನಿತ್ಯ ಬೆಳಿಗ್ಗೆ 8 ಗಂಟೆಗೆ ಚಾಮರಾಜನಗರದಿಂದ ಬಸ್‌ನಲ್ಲಿ ಬರಬೇಕಿದೆ. ವಾಪಸ್ ತೆರಳುವುದು ರಾತ್ರಿಯಾಗುತ್ತದೆ. ನನ್ನಂಥವರಿಗೆ ಪ್ರತ್ಯೇಕ ಸೂರು ಕೊಟ್ಟರೆ ತಂಗಲು ಅನುಕೂಲವಾಗುತ್ತದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಚಾಮರಾಜನಗರ ತಾಲ್ಲೂಕಿನ ಹೆಗ್ಗವಾಡಿಪುರ ಗ್ರಾಮದಲ್ಲಿ ಕೂಲಿ ಮಾಡುವ ದಂಪತಿಯ ಐವರು ಮಕ್ಕಳಲ್ಲಿ ದೀಪಾ ಒಬ್ಬರು. ಪಿಯು ಮುಗಿಸುವ ಹೊತ್ತಿಗೆ ಮನೆ ಬಿಟ್ಟ ಅವರು, 2015ರಲ್ಲಿ ಪದವಿ ಪಡೆದು ಕೆಲಕಾಲ ವಿದ್ಯಾಭ್ಯಾಸ ನಿಲ್ಲಿಸಿದರು. 2016ರಲ್ಲಿ ಅರ್ಜಿ ತುಂಬಲು ತೃತೀಯ ಲಿಂಗಿ ಕಾಲಂ ಬೇಕೆಂದು ಹಟ ಹಿಡಿದು, ಮೈಸೂರು ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದಲ್ಲಿ ಅಂಬೇಡ್ಕರ್ ಅಧ್ಯಯನ ವಿಷಯದಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆದರು. ಶೇ 84ರಷ್ಟು ಅಂಕಗಳೊಂದಿಗೆ ಎಂ.ಎ ಪೂರೈಸಿದರು.

ವರ್ಷದಿಂದ ಪ್ರೊ. ಜೆ.ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ‘ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಲಿಂಗತ್ವ ಅಲ್ಪಸಂಖ್ಯಾತರ ಜೀವನ ಮತ್ತು ಹೋರಾಟ’ ವಿಷಯದಲ್ಲಿ ಪಿಎಚ್.ಡಿ ಮಾಡುತ್ತಿದ್ದಾರೆ. ‘ಹಾಸ್ಟೆಲ್ ಸೌಕರ್ಯ ಇಲ್ಲ ಎನ್ನುವುದನ್ನು ಬಿಟ್ಟರೆ ಬೇರೆ ಯಾವುದೇ ತೊಂದರೆ ಇಲ್ಲ. ಎಲ್ಲರೂ ಪ್ರೋತ್ಸಾಹ ನೀಡುತ್ತಿದ್ದಾರೆ’ ಎಂದು ಹೇಳಿದರು.

ಐಟಿಸಿ ಕಂಪನಿಯು ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಬುಧವಾರ ಇಲ್ಲಿ ನೀಡಿದ ಲ್ಯಾಪ್‌ಟಾಪ್‌ಅನ್ನು ದೀಪಾ, ಸಂಸದ ಪ್ರತಾಪಸಿಂಹ ಅವರಿಂದ ಸ್ವೀಕರಿಸಿದರು.

ಈ ವೇಳೆ ಮಾತನಾಡಿದ ಸಿಂಡಿಕೇಟ್ ಸದಸ್ಯೆ ಚೈತ್ರಾ ನಾರಾಯಣ್, ‘ತೃತೀಯ ಲಿಂಗಿಗಳಿಗೆಂದೇ ಪ್ರತಿ ವಿಭಾಗದಲ್ಲಿ ಉಚಿತವಾಗಿ ಶಿಕ್ಷಣ ಪಡೆಯಲು ಒಂದು ಸೀಟು ಮೀಸಲಿರಿಸುವ ತೀರ್ಮಾನವನ್ನು ಸಿಂಡಿಕೇಟ್ ತೆಗೆದುಕೊಂಡಿದೆ’ ಎಂದರು.

ಮುಖ್ಯಾಂಶಗಳು

- ತೃತೀಯ ಲಿಂಗಿಗಳಿಗೆ ಇಲ್ಲದ ಪ್ರತ್ಯೇಕ ವಿದ್ಯಾರ್ಥಿ ನಿಲಯ
- ಶೇ 84ರಷ್ಟು ಅಂಕಗಳೊಂದಿಗೆ ಎಂ.ಎ ಪೂರೈಸಿದ ದೀಪಾ


ದೀಪಾ ಬುದ್ದೆ

ವಿಶ್ಲೇಷಣಾತ್ಮಕ ಉತ್ತರ ಬಯಸುವ ಮುಖ್ಯ ಪರೀಕ್ಷೆ!

ಸಿವಿಲ್ ಸರ್ವೀಸಸ್‌ನ ಮುಖ್ಯ ಪರೀಕ್ಷೆಯ ಪ್ರಶ್ನೆಗಳು ನಿಖರ, ವಿಶ್ಲೇಷಣಾತ್ಮಕ ಮತ್ತು ಮೌಲಿಕವಾದ ಉತ್ತರಗಳನ್ನು ನಿರೀಕ್ಷಿಸುತ್ತವೆ. ಹಾಗಾಗಿ ಈ ಪರೀಕ್ಷೆಗೆ ಕಠಿಣ ಸಿದ್ಧತೆ ಅಗತ್ಯ.

ಗುರುರಾಜ್ ಎಸ್. ದಾವಣಗೆರೆ

ಮೊದಲೇ ತಿಳಿಸಿದಂತೆ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಒಂಬತ್ತು ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸಬೇಕು. ಪರೀಕ್ಷೆ ಎರಡು ಭಾಗಗಳಲ್ಲಿ ವಾರಾಂತ್ಯದಲ್ಲಿ ಒಟ್ಟು 5 ದಿನ ನಡೆಯುತ್ತದೆ. ಮೊದಲ ವಾರದ ಶುಕ್ರವಾರದಂದು ಮೂರು ಗಂಟೆ ಅವಧಿಯ ಪ್ರಬಂಧ ಪತ್ರಿಕೆ ಇರುತ್ತದೆ. ಶನಿವಾರ ಮತ್ತು ಭಾನುವಾರ ದಿನಕ್ಕೆ ಎರಡರಂತೆ ಮೂರು ತಾಸಿನ 'ಸಾಮಾನ್ಯ ಅಧ್ಯಯನ'ದ ನಾಲ್ಕು ಪತ್ರಿಕೆಗಳಿರುತ್ತವೆ. ಮುಂದಿನ ಶನಿವಾರ ಮತ್ತು ಭಾನುವಾರ ಕಡ್ಡಾಯ ಭಾಷೆ (ಪೇಪರ್ ಎ), ಇಂಗ್ಲಿಷ್ (ಪೇಪರ್ ಬಿ) ಮತ್ತು ಎರಡು ಐಚ್ಛಿಕ ಪತ್ರಿಕೆಗಳಿರುತ್ತವೆ. ದಿನಕ್ಕೆ ಆರು ತಾಸು ಪರೀಕ್ಷೆ ಬರೆಯುವ ಅಭ್ಯರ್ಥಿಗಳು ಪೂರ್ಣ ತಯಾರಿ, ತಾಳ್ಮೆ ಮತ್ತು ಆತ್ಮವಿಶ್ವಾಸದ ಜೊತೆ ಕೆಳಗಿನ ಅಂಶಗಳ ಕಡೆ ಗಮನ ಹರಿಸಬೇಕು.

ಪ್ರಶ್ನೆ ಅರ್ಥ ಮಾಡಿಕೊಳ್ಳಿ

ಪ್ರಶ್ನೆ ಪತ್ರಿಕೆಯಲ್ಲಿ ಎಷ್ಟು ಪ್ರಶ್ನೆ, ಭಾಗಗಳಿವೆ ? ಕಡ್ಡಾಯವಾಗಿ ಉತ್ತರಿಸಬೇಕಾದ ಪ್ರಶ್ನಗಳಿವೆಯೇ ? ಎಂಬುದನ್ನು ಖಚಿತ ಪಡಿಸಿಕೊಳ್ಳಿ. ಉದಾಹರಣೆಗೆ, ಸಾಮಾನ್ಯ ಅಧ್ಯಯನದ ಪ್ರತ್ರಿಕೆ 1 ರಲ್ಲಿ 20 ಪ್ರಶ್ನೆಗಳಿದ್ದು ಎಲ್ಲವೂ ಕಡ್ಡಾಯವಾಗಿರುತ್ತವೆ. ಐಚ್ಛಿಕ ವಿಷಯಗಳ ಪತ್ರಿಕೆಗಳ ಎರಡು ವಿಭಾಗಗಳಲಿ ಎಂಟು ಪ್ರಶ್ನೆಗಳಿರುತ್ತವೆ. ಅದರಲ್ಲಿ 5 ಪ್ರಶ್ನೆಗಳಿಗೆ ಉತ್ತರ ಬರೆಯಬೇಕು ಮತ್ತು 1 ಮತ್ತು 5ನೆಯ ಪ್ರಶ್ನೆಗಳಿಗೆ ಕಡ್ಡಾಯ ಉತ್ತರಿಸಬೇಕು. ಪ್ರಶ್ನೆಗಳ ಯಾವ ಅಂಶದ ಕುರಿತು ಉತ್ತರಿಸಬೇಕು ಎಂಬುದಕ್ಕೆ ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕೆಲವು ಪ್ರಶ್ನೆಗಳಲ್ಲಿ ಉತ್ತರವೇನಿರಬೇಕು ಎಂಬ ಸುಳುಹು ಇರುತ್ತದೆ. ಅದರ ಲಾಭ ಪಡೆದುಕೊಳ್ಳಿ.

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ–7

ಪದಮಿತಿಯ ಪಾಲನೆ ಮುಖ್ಯ

ಪ್ರತಿ ಪ್ರಶ್ನೆಗೂ ಇಂತಿಷ್ಟು ಪದಗಳ ಉತ್ತರವಿರಬೇಕು ಎಂಬ ನಿಯಮವಿದೆ. ಅದನ್ನು ಪಾಲಿಸಬೇಕು. ಉದಾಹರಣೆಗೆ, ಸಾಮಾನ್ಯ ಅಧ್ಯಯನ ಪತ್ರಿಕೆ 1 ರಲ್ಲಿ ಮೊದಲ ಹತ್ತು ಪ್ರಶ್ನೆಗಳನ್ನು 150 ಪದಗಳಲ್ಲಿ ಮತ್ತು 11 ರಿಂದ 20ನೆಯ ಪ್ರಶ್ನೆಗಳನ್ನು 250 ಪದಗಳಲ್ಲಿ ಉತ್ತರಿಸಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ಉತ್ತರಕ್ಕೆ ಸತ್ವ ತುಂಬುವ ಪ್ರಮುಖ ಮಾಹಿತಿ, ಅಂಶಗಳನ್ನು ತಪ್ಪದೇ ಪದಮಿತಿಯ ಒಳಗೇ ಬರೆಯಬೇಕು.

ವಿಷಯ ಚನ್ನಾಗಿದೆ ಮತ್ತು ಸುಲಭ ಎಂಬ ಕಾರಣಕ್ಕೆ ಅಗತ್ಯಕ್ಕೂ ಮೀರಿದ ಉತ್ತರಗಳನ್ನು ಬರೆಯವುದು ಬೇಡ. ಪದಮಿತಿಯನ್ನು ಪಾಲಿಸುವ ಅಭ್ಯರ್ಥಿಗಳು ಹೆಚ್ಚಿನ ಅಂಕಗಳಿಸಿರುವುದು ಈವರೆಗಿನ ಪರೀಕ್ಷೆಗಳಲ್ಲಿ ಋಜುವಾತಾಗಿದೆ. 10–20 ಪದಗಳು ಆಚೀಚೆಯಾದರೆ ಅಡ್ಡಿಯಿಲ್ಲ. ಅದು 50-100 ಪದಗಳನ್ನು ದಾಟಬಾರದು.



ವ್ಯಾಕರಣ ಶುದ್ಧತೆ ಮುಖ್ಯ

ನಿಮ್ಮ ಉತ್ತರಗಳ ವ್ಯಾಪ್ತಿ ಏನೇ ಇರಲಿ, ಬರೆದಿರುವ ಪ್ರತಿ ವಾಕ್ಯವೂ ವ್ಯಾಕರಣ ಬದ್ಧವಾಗಿರಬೇಕು. ಅದಕ್ಕಾಗಿ ನೀವು ವ್ಯಾಕರಣ ಪಂಡಿತರಾಗಬೇಕಿಲ್ಲ! ಯಾವ ಭಾಷೆಯಲ್ಲಿ ಉತ್ತರಿಸುತ್ತೀರೋ ಆಯಾ ಭಾಷೆಯ ವ್ಯಾಕರಣ ಗೊತ್ತಿರಬೇಕು, ಇಲ್ಲವೆ ಬರವಣಿಗೆಯಲ್ಲಿ ವ್ಯಾಕರಣ ಶುದ್ಧತೆ ಇರುವಂತೆ ನೋಡಿಕೊಳ್ಳಬೇಕು. ಅಲ್ಪ ಪ್ರಾಣ, ಮಹಾ ಪ್ರಾಣ, ಒತ್ತಕ್ಷರ, ದೀರ್ಘ, ಹ್ರಸ್ವ ಸ್ವರಗಳ ಕುರಿತು ಕಾಳಜಿ ವಹಿಸಬೇಕು. ಸ್ಪೆಲ್ಲಿಂಗ್ ಮಿಸ್ಟೇಕ್ ಇರಲೇ ಕೂಡದು. ಇಂಗ್ಲಿಷ್‌ನಲ್ಲಿ ಉತ್ತರಿಸುವಾಗ 'ಪ್ರಿಪೊಸಿಷನ್' ಮತ್ತು 'ಟೆನ್ಸ್' ಗಳನ್ನೂ ಅತ್ಯಂತ ಎಚ್ಚರಿಕೆಯಿಂದ ಬಳಸಬೇಕು.

ಬಗೆ ಬಗೆಯ ಉತ್ತರಗಳು ಬೇಕು

ಸಾಮಾನ್ಯ ಅಧ್ಯಯನ ಮತ್ತು ಐಚ್ಛಿಕ(Optional) ವಿಷಯಗಳಿಗೆ ಬರೆಯುವ ಉತ್ತರಗಳು ಭಿನ್ನವಾಗಿರುತ್ತವೆ. ವಿಶೇಷವಾಗಿ ಜನರಲ್ ಸ್ಟಡೀಸ್ (ಸಾಮಾನ್ಯ ಅಧ್ಯಯನ) ಪತ್ರಿಕೆಗಳ ಪ್ರಶ್ನೆಗಳಿಗೆ ಸಾಮಾನ್ಯ ರೀತಿಯ ಉತ್ತರಕ್ಕಿಂತ ವಿಭಿನ್ನ ರೀತಿಯ ಉತ್ತರಗಳಿರಬೇಕು. ಉತ್ತರಗಳು ಹಲವು ಆಯಾಮಗಳನ್ನು ಒಳಗೊಂಡಿರಬೇಕು. ಉದಾಹರಣೆಗೆ ಅಂತರರಾಷ್ಟ್ರೀಯ ಸಂಬಂಧಗಳ ಕುರಿತ ಪ್ರಶ್ನೆಗೆ ವಸ್ತುಸ್ಥಿತಿ ಆಧರಿಸಿದ ಸಿದ್ಧ ಉತ್ತರದ ಜೊತೆಗೆ ದೇಶದ ಆಡಳಿತ, ಬದಲಾಗುತ್ತಿರುವ ಅಂತರರಾಷ್ಟ್ರೀಯ ಪರಿಸರ, ಇಲ್ಲಿನ ರಾಜಕೀಯ ವಿದ್ಯಮಾನ ಮತ್ತು ಆಂತರಿಕ ಹಾಗೂ ಬಾಹ್ಯ ಭದ್ರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಉತ್ತರಿಸಬೇಕು. ನೆನಪಿರಲಿ, ಉತ್ತರದಲ್ಲಿ ಎಲ್ಲಿಯೂ ನೀವು ಪೂರ್ವಾಗ್ರಹ ಪೀಡಿತರು ಅಥವಾ ವಿಷಯದ ಕುರಿತು ಪಕ್ಷಪಾತ ಧೋರಣೆ ಉಳ್ಳವರು ಎಂದು ತೋರಿಸಿಕೊಳ್ಳಬೇಡಿ. ಈಗ ನಡೆಯುತ್ತಿರುವ ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಭಾರತದ ನಿಲುವು ಏನಾಗಿರ ಬೇಕು? ಎಂಬ ಪ್ರಶ್ನೆಗೆ ಈಗ ವಾಸ್ತವದಲ್ಲಿರುವುದನ್ನೇ ಬರೆಯಬೇಕು. ನಿಮ್ಮ ವೈಯಕ್ತಿಕ ನಿಲುವನ್ನು ಇಲ್ಲಿ ಬರೆಯಬಾರದು.

ಕ್ಲೀಷೆ ವಾಕ್ಯಗಳ ಬಳಕೆ ಬೇಡ

'ಲಾಸ್ಟ್ ಬಟ್ ನಾಟ್ ದ ಲೀಸ್ಟ್', 'ಅಟ್ ದ ಔಟ್‌ಸೆಟ್', 'ಪ್ರಾಕ್ಟೀಸ್ ಮೇಕ್ಸ್ ಒನ್ ಪರ್ಫೆಕ್ಟ್', 'ಆಲ್ ಸೆಡ್ ಅಂಡ್ ಡನ್'...ಇಂಥ ಕ್ಲೀಷೆ ವಾಕ್ಯಗಳನ್ನು ಉತ್ತರದಲ್ಲಿ ಬರೆಯದಿರುವುದು ಒಳ್ಳೆಯದು. ಪ್ರತಿ ಪ್ರಶ್ನೆಯೂ ನಿಖರ ಮತ್ತು ವಿಶ್ಲೇಕ್ಷಣಾತ್ಮಕ ಉತ್ತರ ಬಯಸುತ್ತದೆ. ಆದ್ದರಿಂದ ವಿಷಯವನ್ನು ಸಾರ್ವತ್ರೀಕರಣಗೊಳಿಸ ಕೂಡದು. ಉತ್ತರದಲ್ಲಿ ಸರಿಯಾದ ಮಾಹಿತಿ, ಅದಕ್ಕೆ ಪೂರಕ ಸಾಕ್ಷ್ಯ ಮತ್ತು ಸರಿಯಾದ ಆರಂಭ ಹಾಗೂ ಅಂತ್ಯಗಳಿರಲೇಬೇಕು. ಸಾಮಾನ್ಯ ಅಧ್ಯಯನದ ಪತ್ರಿಕೆಗಳಿಗೆ ಅಭಿಪ್ರಾಯ ಆಧಾರಿತ ಮತ್ತು ಸತ್ಯಾಸತ್ಯತೆ ಆಧರಿತ ಉತ್ತರಗಳು ಬೇಕಿರುತ್ತವೆ. ಯಾವುದಕ್ಕೆ ಏನು? ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಉತ್ತರಿಸಿರಿ. ಯಾವುದಾದರೊಂದು ವಿಷಯದ ಕುರಿತು ನಿಮ್ಮ ಮುಕ್ತ ಅಭಿಪ್ರಾಯವೇನು? ಎಂಬ ಪ್ರಶ್ನೆಗೆ ನಿಮ್ಮ ಅಭಿಪ್ರಾಯದ ಜೊತೆಗೆ ಅದನ್ನು ಸಮರ್ಥಿಸುವ ಕೆಲ ಅಂಕಿ – ಅಂಶ, ವರದಿ, ಸರ್ಕಾರಿ ಹೇಳಿಕೆಗಳನ್ನಾದರೂ ಉಲ್ಲೇಖಿಸಬೇಕು.

ಪೂರ್ಣ ಉತ್ತರ, ಸರಳ ಭಾಷೆ

ಉತ್ತರಿಸುವ ಭಾಷೆ ಅತ್ಯಂತ ಸರಳವಾಗಿರಲಿ. ಹಾಗೆಯೇ ಪ್ರಶ್ನೆಗೆ ಬೇಕಾದ ಸಂಪೂರ್ಣ ಉತ್ತರ ಬರೆಯಿರಿ. ಮುಖ್ಯ ವಾಕ್ಯ, ಪದ, ಇಸವಿ, ಸಂಖ್ಯೆಗಳಿಗೆ ಅಡಿ ಗೆರೆ(ಅಂಡರ್‌ಲೈನ್) ಹಾಕಿರಿ. ಉತ್ತರಗಳು ಪಾಯಿಂಟ್ ರೂಪದಲ್ಲಿರ ಬೇಕೇ ಅಥವಾ ಪ್ಯಾರಾಗ್ರಾಫ್‌ಗಳಲ್ಲಿರಬೇಕೇ ಎಂಬ ಅನುಮಾನ ಹಲವು ಅಭ್ಯರ್ಥಿಗಳದ್ದು. ಹೀಗೇ ಉತ್ತರಿಸಬೇಕೆಂಬ ನಿಯಮವಿಲ್ಲ. ಆದರೆ ಕೆಲವು ಉತ್ತರಗಳನ್ನು ಬುಲೆಟ್ ಪಾಯಿಂಟ್ ರೂಪದಲ್ಲಿ, ಇನ್ನು ಕೆಲವನ್ನು ಪ್ಯಾರಾ ರೂಪದಲ್ಲಿ ಬರೆದರೆ ಮೌಲ್ಯಮಾಪಕರಿಗೂ ಏಕತಾನತೆ ಕಾಡುವುದಿಲ್ಲ. ಆಗ ಉತ್ತಮ ಅಂಕಗಳು ದೊರೆಯುವ ಸಾಧ್ಯತೆಗಳಿರುತ್ತವೆ. ಉತ್ತರ ರೂಪದಲ್ಲಿ ಏನನ್ನೇ ಬರೆದರೂ ಅದು ಸುಂದರವಾಗಿರಲೇ ಬೇಕೆಂದಿಲ್ಲ, ಆದರೆ ಸ್ಫುಟವಾಗಿರಬೇಕು. ಉತ್ತರ ಪತ್ರಿಕೆಯ ಮೊದಲಿನಿಂದ ಕೊನೆಯವರೆಗೂ ಒಂದೇ ರೀತಿಯ ಬರವಣಿಗೆ ಇರಬೇಕು. ಬರೆಯುವ ಚಿತ್ರಗಳು, ನಮೂದಿಸುವ ಭಾಗ, ಸಂಖ್ಯೆ, ಜಾಗಗಳು ಸ್ಪಷ್ಟವಾಗಿರಬೇಕು. ಇದಕ್ಕಾಗಿ ಈ ಮೊದಲೇ ಅಭ್ಯಾಸ ಮಾಡಿರಬೇಕು. ಹಳೆಯ ಪ್ರಶ್ನೆಪತ್ರಿಕೆಗಳಿಗೆ ಉತ್ತರ ಬರೆದು ಅಭ್ಯಸಿಸಿರಬೇಕು.

(ಮುಂದಿನ ವಾರ: ಪಾಠ 8– ಮೌಲಿಕ ಪ್ರಬಂಧದ ನಿಬಂಧನೆಗಳು)

ಚಿತ್ರ, ಗ್ರಾಫ್, ಪಟ್ಟಿಗಳ ಬಳಕೆ



ಸಾಮಾನ್ಯ ಅಧ್ಯಯನದ 3 ನೆಯ ಪತ್ರಿಕೆಯ ಆರ್ಥಿಕ ಅಭಿವೃದ್ಧಿಯ ಪತ್ರಿಕೆಯ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರದ ಏಜೆನ್ಸಿಗಳು, ಸಂಸ್ಥೆಗಳು ಬಿಡುಗಡೆ ಮಾಡುವ, ಮಾಡಿರುವ ತೀರಾ ಇತ್ತೀಚಿನ ಅಂಕಿ – ಅಂಶ ಮತ್ತು ಸಮೀಕ್ಷಾ ವರದಿಗಳ ಸಾರಾಂಶ ಬರೆಯಬೇಕಾಗುತ್ತದೆ. ಆಗ ಕೆಲವು ಭಾಗಗಳನ್ನು ಗ್ರಾಫ್, ಹಿಸ್ಟೋಗ್ರಾಂ, ಪೈ ಚಾರ್ಟ್‌ಗಳ ಮೂಲಕ ಪ್ರಸ್ತುತ ಪಡಿಸಬೇಕು. ಯೋಜನೆ, ನೀತಿ, ಅನುಷ್ಠಾನದ ಕ್ರಮ, ವಿಶ್ವ ರ್‍ಯಾಂಕಿಂಗ್‌ನಲ್ಲಿ ಸ್ಥಾನ, ಅಂತರರಾಷ್ಟ್ರೀಯ ಸಾಲ, ಒಡಂಬಡಿಕೆ, ವಿದೇಶಿ ಮಾರುಕಟ್ಟೆಯಲ್ಲಿ ನಮ್ಮ ಹಣಕ್ಕಿರುವ ವಿನಿಮಯ (ಮುಖ) ಬೆಲೆಯ ಕುರಿತು ನಿಖರ ಉತ್ತರಗಳು ಇರಬೇಕು. ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ವಿಜೇತರ ಹೇಳಿಕೆ, ನಮ್ಮ ಆರ್ಥಿಕ ಸಚಿವಾಲಯದ ಘೋಷಣೆಗಳನ್ನು ಉಲ್ಲೇಖಿಸಿದ್ದಷ್ಟೂ ಉತ್ತರ ಮತ್ತಷ್ಟು ಗಟ್ಟಿಯಾಗುತ್ತದೆ. ಬರೆಯುವ ಪ್ರತಿಯೊಂದು ವಾಕ್ಯಕ್ಕೂ ನಿಶ್ಚಿತತೆ ಇರಬೇಕು. ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಚಿತ್ರ ಫ್ಲೊಚಾರ್ಟ್ ಬರೆಯಬೇಕು. ಜೀವಿವೈವಿಧ್ಯ, ಪರಿಸರ ಕುರಿತಾದ ಪ್ರಶ್ನೆಗಳಿಗೆ ಹೋರಾಟ, ವರದಿ, ಕಾನೂನು, ತೀರ್ಪುಗಳ ಬಗ್ಗೆ ಉಲ್ಲೇಖವಿರಬೇಕು.

ಐಚ್ಛಿಕ ವಿಷಯಗಳ ಪ್ರಶ್ನೆಗಳಿಗೆ ಕರಾರುವಾಕ್ಕಾದ ಉತ್ತರಗಳನ್ನೇ ಬರೆಯಬೇಕಾಗುತ್ತದೆ. ಪ್ರಶ್ನೆಗಳಿಗೆ ಅಗತ್ಯವಿದ್ದಷ್ಟು ಉತ್ತರ ಬರೆಯುವ ಮಿತಿ ಮತ್ತು ಸ್ವಾತಂತ್ರ್ಯ ಎರಡೂ ಅಲ್ಲಿರುತ್ತವೆ. ಉದಾಹರಣೆಗೆ, ಭೌತವಿಜ್ಞಾನದ 'ಹುಕ್ಸ್‌ನ ನಿಯಮ' ವನ್ನು ಗಣಿತರೂಪದಲ್ಲಿ ನಿರೂಪಿಸಿ ಎಂದು ಕೇಳಿದರೆ ಎಂಟೊಂಬತ್ತು ಸಾಲುಗಳಲ್ಲಿ ಅದನ್ನು ಬರೆದು ಮುಗಿಸಬಹುದು. ಅಗತ್ಯ ದತ್ತಾಂಶ, ಚಿತ್ರ, ಸಮೀಕರಣಗಳೊಂದಿಗೆ ನಿರೂಪಿಸಿದ ಮೇಲೆ ಬರೆಯಲು ಮತ್ತೇನೂ ಇರುವುದಿಲ್ಲ. ಇಲ್ಲಿ ಪದಗಳ ಮಿತಿಗಿಂತ ವಿಷಯದ ಪೂರ್ಣ ಪಾಠದ ಕಡೆ ಗಮನವಿರಬೇಕು.

'ಸಾಮಾನ್ಯ ಜ್ಞಾನ'ಕ್ಕೆ ಬೇಕು ಸಮಗ್ರ ಓದು

ಆರ್.ಬಿ. ಗುರುಬಸವರಾಜ

ಪ್ರಾಥಮಿಕ ಶಾಲಾ ಸಹಶಿಕ್ಷಕರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆ

ಪ್ರಾಥಮಿಕ ಶಾಲಾ ಶಿಕ್ಷಕರ (6 ರಿಂದ 8ನೇ ತರಗತಿ) ನೇಮಕಾತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ-1ರಲ್ಲಿ 'ಸಾಮಾನ್ಯ ಜ್ಞಾನ'ಕ್ಕೆ 25 ಅಂಕಗಳ 25 ಪ್ರಶ್ನೆಗಳಿರುತ್ತವೆ. ಪ್ರಚಲಿತ ವಿದ್ಯಮಾನ ಹಾಗೂ ಮಾನಸಿಕ ಸಾಮರ್ಥ್ಯವೂ ಸಾಮಾನ್ಯ ಜ್ಞಾನದ ಭಾಗವಾಗಿರುತ್ತವೆ. ಇದು ವಿಶಾಲವಾದ ವ್ಯಾಪ್ತಿಯ, ಸಮಗ್ರ ವಿಷಯಗಳನ್ನು ಹೊಂದಿದೆ.ಹೆಚ್ಚು ತಿಳಿಯುವ ಆಸಕ್ತಿ ಇದ್ದರೆ ಮಾತ್ರ ಇದರಲ್ಲಿ ಯಶಸ್ವಿಯಾಗಬಹುದು.

ಸಿದ್ಧತೆಗೂ ಮುನ್ನ: ಪ್ರಸ್ತುತ ಸಾಮಾನ್ಯ ಜ್ಞಾನ ಪರೀಕ್ಷೆಗೆ ಮೀಸಲಿಸಿದ ಪಠ್ಯಕ್ರಮವನ್ನು ಅಧ್ಯಯನ ಮಾಡಿ, ಅದನ್ನು ವಿಶ್ಲೇಷಣೆಗೆ ಒಳಪಡಿಸಿಕೊಂಡರೆ ಮುಂದಿನ ತಯಾರಿಗೆ ಒಂದು ಸ್ಪಷ್ಟ ಚಿತ್ರಣ ದೊರೆಯುತ್ತದೆ. ಇದರ ಜೊತೆಗೆ, ಹಳೆಯ ಪ್ರಶ್ನೆ ಪತ್ರಿಕೆ ಗಳನ್ನು ಗಮನಿಸಿ, ಈಗಿನ ಪಠ್ಯಕ್ರಮವನ್ನು ಅಧ್ಯಯನ ಮಾಡಿದರೆ, ಸಿದ್ಧತೆಗೊಂದು ದಾರಿ ಸಿಗುತ್ತದೆ. ಅಂದ ಹಾಗೆ, 2019ರ ಪತ್ರಿಕೆಯ ಸಾಮಾನ್ಯ ಜ್ಞಾನ ಪ್ರಶ್ನೆಪತ್ರಿಕೆಯಲ್ಲಿ ವಿಜ್ಞಾನಕ್ಕೆ 2 ಪ್ರಶ್ನೆಗಳು, ಸಮಾಜ ವಿಜ್ಞಾನ ಮತ್ತು ಗಣಿತಕ್ಕೆ ತಲಾ 4, ಸಾಹಿತ್ಯ ಮತ್ತು ಸಂಸ್ಕೃತಿಗೆ 5, ಪ್ರಚಲಿತ ವಿದ್ಯಮಾನ ಮತ್ತು ಕ್ರೀಡೆಗೆ ತಲಾ 3 ಪ್ರಶ್ನೆಗಳು ಹಾಗೂ ಮಾನಸಿಕ ಸಾಮರ್ಥ್ಯಕ್ಕೆ 4 ಪ್ರಶ್ನೆಗಳು ಮೀಸಲಾಗಿದ್ದವು.

ಏನೇನು ಓದಬೇಕು?: 'ಸಾಮಾನ್ಯ ಜ್ಞಾನ'ವು ವಿವಿಧ ವಿಷಯಗಳಲ್ಲಿ ಅಡಕವಾಗಿದೆ. ಆದ್ದರಿಂದ ಐಚ್ಛಿಕ ಪತ್ರಿಕೆಗೆ ಅಗತ್ಯವಾದ ಎಲ್ಲಾ ವಿಷಯ ಗಳನ್ನು ಓದುವ ಮೂಲಕ ಪೂರಕ ಮಾಹಿತಿ ಸಂಗ್ರಹಿಸಿ. ಪ್ರತಿ ವಿಷಯದ ಮೂಲಾಂಶಗಳು, ತತ್ವ ಸಿದ್ಧಾಂತ, ಸೂತ್ರಗಳನ್ನು ತಿಳಿದುಕೊಳ್ಳಿ. ಇತಿಹಾಸದಲ್ಲಿ ಪ್ರಮುಖ ಘಟನಾವಳಿಗಳ ಇಸವಿಗಳನ್ನು ನೆನಪಿಟ್ಟುಕೊಳ್ಳಿ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಪ್ರಸಿದ್ಧ ಪುಸ್ತಕಗಳು ಹಾಗೂ ಲೇಖಕರು, ವಿವಿಧ ಕ್ಷೇತ್ರಗಳಿಗೆ ನೀಡುವ ಪ್ರಶಸ್ತಿ ಪುರಸ್ಕಾರಗಳ ಪಟ್ಟಿ, ವಿವಿಧ ಸಂಶೋಧಕರು ಹಾಗೂ ಸಂಶೋಧನಾ ಪಟ್ಟಿ ತಯಾರಿಸಿಕೊಂಡರೆ ಪರೀಕ್ಷೆ ಎದುರಿಸುವುದು ಸುಲಭವಾಗುತ್ತದೆ.

ವಿಶ್ವದಾದ್ಯಂತ ನಡೆಯುತ್ತಿರುವ ಪ್ರಚಲಿತ ವಿದ್ಯಮಾನಗಳನ್ನು ಅರಿಯಲು ನಿಯತಕಾಲಿಕೆಗಳು ಹಾಗೂ ದಿನಪತ್ರಿಕೆಗಳು ಹೆಚ್ಚು ಪರಿಣಾಮಕಾರಿ ಓದಿನ ಸಂಪನ್ಮೂಲಗಳು. ಅವುಗಳಲ್ಲಿನ ಮಹತ್ವದ ಲೇಖನಗಳು, ಟಾಪರ್ಸ್ ಯಶಸ್ಸಿನ ವಿಮರ್ಶೆ, ಸಂದರ್ಶನದ ಬಗ್ಗೆ ಚರ್ಚೆಗಳು ಅಧ್ಯಯನಕ್ಕೊಂದು ಮಾರ್ಗ ತೋರಿಸುತ್ತವೆ.

ದಿನಪತ್ರಿಕೆಗಳು ರಾಜಕೀಯ, ರಾಷ್ಟ್ರೀಯ, ವ್ಯಾಪಾರ, ಕ್ರೀಡೆ, ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ವಿದ್ಯಮಾನಗಳ ಆಳವಾದ ಜ್ಞಾನವನ್ನು ನೀಡುತ್ತವೆ. ಸಂಪಾದಕೀಯ ಪುಟ ಹಾಗೂ ವಿಶೇಷ ಪುರವಣಿಗಳು ಮಾಹಿತಿಯ ಮೂಲಗಳಾಗಿವೆ.

ಅಭ್ಯರ್ಥಿಗಳು ಕನಿಷ್ಠ ಎರಡು ಪತ್ರಿಕೆಗಳನ್ನು ಓದುವ ಅಭ್ಯಾಸ ರೂಢಿಸಿಕೊಂಡಿರಬೇಕು. ಅದರಲ್ಲಿ ಒಂದು ಆಂಗ್ಲಭಾಷಾ ಪತ್ರಿಕೆ ಇರಲಿ. ಸ್ಥಳೀಯ ಭಾಷೆಯ ಪತ್ರಿಕೆಗಳನ್ನು ಕಡ್ಡಾಯವಾಗಿ ಓದಿ. ಸಾಮಾನ್ಯ ಜ್ಞಾನದ ಅಭ್ಯಾಸಕ್ಕಾಗಿ ಹಲವಾರು ಆನ್‌ಲೈನ್ ರಸಪ್ರಶ್ನೆ ಜಾಲ ತಾಣಗಳಿವೆ. ಅವುಗಳಿಗೆ ಲಾಗಿನ್ ಆಗುವ ಮೂಲಕ ನಿಮ್ಮ ಜ್ಞಾನ ಪರೀಕ್ಷಿಸಿಕೊಳ್ಳಬಹುದು ಮತ್ತು ಸಾಮಾನ್ಯ ಜ್ಞಾನ ಹೆಚ್ಚಿಸಿಕೊಳ್ಳಲೂಬಹುದು.

ಭೌಗೋಳಿಕ, ವಿಶ್ವದ ಮಾಹಿತಿ: ಭಾರತವೂ ಸೇರಿದಂತೆ ವಿವಿಧ ದೇಶಗಳ ಭೌಗೋಳಿಕ ಲಕ್ಷಣಗಳು, ಸಾಗರಗಳು, ಸಮುದ್ರಗಳು, ನದಿಗಳು, ಕರಾವಳಿ ತೀರ ಗಳು, ಮರುಭೂಮಿಗಳು, ಜ್ವಾಲಾಮುಖಿಗಳು, ದ್ವೀಪಗಳ ಬಗ್ಗೆ ಮಾಹಿತಿ ಸಂಗ್ರಹ ಮಾಡಿಕೊಳ್ಳಿ. IMF, WTO, WB, IMO ನಂತಹ ವಿಶ್ವದ ಪ್ರಮುಖ ಸಂಸ್ಥೆಗಳು ಪರೀಕ್ಷೆಯ ದೃಷ್ಟಿಕೋನದಿಂದ ಪ್ರಮುಖವಾಗಿವೆ, ಅವುಗಳ ರಚನೆ, ಕಾರ್ಯ ನಿರ್ವಹಣೆ, ತಿಳಿದಿರಬೇಕು. ಅಂತೆಯೇ ASEAN, SAARC ನಂತಹ ಪ್ರಮುಖ ಜಾಗತಿಕ ಗುಂಪುಗಳು. ಅವುಗಳ ಪ್ರಧಾನ ಕಚೇರಿ, ಅಧ್ಯಕ್ಷರು ಅಥವಾ ಅವುಗಳ ಪ್ರಮುಖ ಘಟನೆಗಳ ಬಗ್ಗೆ ತಿಳಿದಿರಬೇಕು.

ದೈನಂದಿನ ವಿಜ್ಞಾನ ಕುರಿತು ಹಲವು ಪ್ರಶ್ನೆಗಳಿರುತ್ತವೆ. ಭೌತಶಾಸ್ತ್ರ, ಜೀವಶಾಸ್ತ್ರ ಮತ್ತು ರಸಾಯನಶಾಸ್ತ್ರದ ಸೈದ್ಧಾಂತಿಕ ಅಂಶಗಳಿಗಿಂತ ಹೆಚ್ಚಾಗಿ ವಿಜ್ಞಾನದ ಅನ್ವಯದ ಪ್ರಶ್ನೆಗಳ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸುತ್ತದೆ. ಇದಲ್ಲದೆ, ಸಮೂಹ ಸಂವಹನ, ಮಾಹಿತಿ ತಂತ್ರಜ್ಞಾನ, ಬಾಹ್ಯಾಕಾಶ, ಜೈವಿಕ ತಂತ್ರಜ್ಞಾನ ಸೇರಿದಂತೆ ವಿವಿಧ ವಿಷಯಗಳಲ್ಲಿ ಒಳಗೊಂಡಿರುವ ತಂತ್ರಜ್ಞಾನಗಳ ಕುರಿತು ಮಾಹಿತಿ ಸಂಗ್ರಹಿಸಬೇಕು. ಬಹುತೇಕ ಇಲ್ಲಿನ ಪ್ರಶ್ನೆಗಳು ಪ್ರೌಢಶಾಲಾ ಮಟ್ಟದ ಪ್ರಶ್ನೆಗಳಾಗಿರುತ್ತವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ.

ಸಂವಿಧಾನ ಮತ್ತು ನೀತಿ: ಭಾರತದ ರಾಜಕೀಯ ವ್ಯವಸ್ಥೆಯ ಕಾರ್ಯನಿರ್ವಹಣೆಯ ಕುರಿತು ತಿಳಿಯಲು ಸಂವಿಧಾನ ವಿಷಯವನ್ನು ಓದಬೇಕು. ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿದ ಪ್ರಮುಖ ಸಾಮಾಜಿಕ ಯೋಜನೆಗಳ ವೈಶಿಷ್ಟ್ಯಗಳ ಬಗ್ಗೆಯೂ ತಿಳಿದಿರಬೇಕು. ಏಕೆಂದರೆ ಈ ಪತ್ರಿಕೆಯಲ್ಲಿ ಸಾಂವಿಧಾನಿಕ ತಿದ್ದುಪಡಿಗಳ ಮೇಲೆ ಪ್ರಶ್ನೆಗಳನ್ನು ನಿರೀಕ್ಷಿಸಬಹುದು.

ಮಾನಸಿಕ ಸಾಮರ್ಥ್ಯ: ಅಕ್ಷರ ಹಾಗೂ ಸಂಖ್ಯೆ ಸರಣಿ ಕ್ರಮ, ಕೋಡಿಂಗ್, ಮಾನವ ಸಂಬಂಧಗಳು, ಮಾರ್ಗ ಜ್ಞಾನ, ಗಣಿತಿಯ ಲೆಕ್ಕಾಚಾರಗಳು, ವಿವಿಧ ಆಕೃತಿಗಳು ಹಾಗೂ ಅವುಗಳಿಗೆ ಸಂಬಂಧಿಸಿದ ಕ್ಷೇತ್ರಗಣಿತಿಯ ಮಾಹಿತಿ, ಚಿತ್ರ ನಕ್ಷೆ ಕುರಿತ ವಿಮರ್ಶಾತ್ಮಕ ಚಿಂತನೆಯಂತಹ ಮಾಹಿತಿಗಳನ್ನು ಅಧ್ಯಯನ ಮಾಡಿ.

ಟಿಪ್ಪಣಿ ಮಾಡಿಟ್ಟುಕೊಳ್ಳಿ

ಓದಿದ ಪ್ರತಿ ಅಂಶವನ್ನು ಟಿಪ್ಪಣಿ ಮಾಡಿಕೊಳ್ಳಬೇಕು. ಈ ಮಾಹಿತಿಯು ಜ್ಞಾನವಾಗಿ ರೂಪುಗೊಳ್ಳುತ್ತದೆ.

ರಾಜಕೀಯ ಮತ್ತು ಅಂತರರಾಷ್ಟ್ರೀಯ ವಿದ್ಯಮಾನಗಳ ಕುರಿತು ವಿಶ್ಲೇಷಣೆ ನೀಡುವ ಹಲವು ಯೂಟ್ಯೂಬ್ ಚಾನಲ್ ಗಳಿವೆ. ಅವುಗಳ ಮೂಲಕವೂ ಮಾಹಿತಿ ಪಡೆದು ಸಾಮಾನ್ಯ ಜ್ಞಾನ ವಿಸ್ತರಿಸಿಕೊಳ್ಳಬಹುದು.



ಕೆಪಿಎಸ್‌ಸಿ 'ಗ್ರೂಪ್-ಸಿ'ಯ ವಿವಿಧ ಹುದ್ದೆಗಳು, ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿ ಹಾಗೂ ಕೆಎಸ್‌ಐಎಸ್‌ಎಫ್‌ನ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ 'ಮಾದರಿ ಪ್ರಶ್ನೋತ್ತರ'ಕ್ಕಾಗಿ www.prajavani.net/education ನೋಡಿ

ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿ ಮಾರ್ಗದರ್ಶಿ

'ವಿದ್ಯಾರ್ಥಿಗಳ ಸೇವಾ ಕೇಂದ್ರ ಸ್ಥಾಪಿಸಿ'

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯ ಹೆಚ್ಚಿಸುವ ಸಂಬಂಧ ವಿದ್ಯಾರ್ಥಿಗಳ ಸೇವಾ ಕೇಂದ್ರ (ಎಸ್‌ಎಸ್‌ಸಿ) ಸ್ಥಾಪಿಸಬೇಕು ಎಂಬುದು ಸೇರಿದಂತೆ ಹಲವು ನೂತನ ಮಾರ್ಗಸೂಚಿಗಳನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸಿದ್ಧಪಡಿಸಿದೆ.

'ದೇಶದ ಉನ್ನತ ಶಿಕ್ಷಣ ಸಂಸ್ಥೆಗಳು ಉತ್ಸಾಹಭರಿತ, ಕ್ರಿಯಾಶೀಲ ಕ್ಯಾಂಪಸ್‌ಗಳನ್ನು ಹೊಂದಬೇಕು ಎಂಬುದೇ ಈ ನೂತನ ಮಾರ್ಗಸೂಚಿಗಳ ರಚನೆಯ ಉದ್ದೇಶ' ಎಂದು ಯುಜಿಸಿ ಚೇರಮನ್ ಜಗದೀಶಕುಮಾರ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯ, ಕ್ರೀಡೆ, ಮಾನಸಿಕ ಮತ್ತು ಭಾವನಾತ್ಮಕ ದೃಢತೆ ಉತ್ತಮಗೊಳಿಸುವ ನಿಟ್ಟಿನಲ್ಲಿ ಮಾರ್ಗಸೂಚಿಯಲ್ಲಿ ಕೆಲ ಅಂಶಗಳನ್ನು ಸೇರಿಸಲಾಗಿದೆ. ಏಮ್ಸ್ ಮತ್ತು ನಿಮ್ಹಾನ್ಸ್‌ನಂಥ ಪ್ರಮುಖ ವೈದ್ಯಕೀಯ ಸಂಸ್ಥೆಗಳ ಜೊತೆ ಸಹಭಾಗಿತ್ವ ಮಾಡಿಕೊಳ್ಳುವುದು, ವಿದ್ಯಾರ್ಥಿಗಳಿಗೆ ರಾಷ್ಟ್ರವ್ಯಾಪಿ ಉಚಿತವಾಗಿ ಮಾನಸಿಕ ಆರೋಗ್ಯ ಸಹಾಯವಾಣಿ ತೆರೆಯುವುದು ಜೊತೆಗೆ, ಲೈಂಗಿಕ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಕಡೆಗೆ ವಿಶೇಷ ಗಮನ ಹರಿಸುವುದು– ಈ ಅಂಶಗಳು ಮಾರ್ಗಸೂಚಿಯಲ್ಲಿವೆ.

'ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು. ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು, ಇತರರಿಗೆ ನೆರವು ನೀಡಲು ತಮ್ಮದೇ ಆದ ಗುಂಪು ಕಟ್ಟಿಕೊಳ್ಳುವ ಮೂಲಕ ಅವರ ವ್ಯಕ್ತಿತ್ವದಲ್ಲಿ ಸರ್ವತೋಮುಖ ಅಭಿವೃದ್ಧಿ ಸಾಧಿಸುವುದೇ ಈ ನಡೆಯ ಉದ್ದೇಶ' ಎಂದು ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಉತ್ತಮವಾಗಿರಬೇಕು. ಆ ಮೂಲಕ ಒತ್ತಡ ಹಾಗೂ ನಡತೆಗೆ ಸಂಬಂಧಿಸಿ ಎದುರಾಗುವ ಸಮಸ್ಯೆಗಳನ್ನು ಅವರು ಸಮರ್ಥವಾಗಿ ಎದುರಿಸುವಂತಾಗಬೇಕು ಎಂಬುದು ಸಹ ಈ ನೂತನ ಮಾರ್ಗಸೂಚಿಗಳ ಉದ್ದೇಶವಾಗಿದೆ' ಎಂದೂ ಅವರು ಹೇಳಿದ್ದಾರೆ.

'ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕ್ರೀಡೆ, ದೈಹಿಕ ಸಾಮರ್ಥ್ಯ ಹೆಚ್ಚಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳಿವೆ, ಮಾನವ ಸಂಪನ್ಮೂಲ ಇದೆ. ಆದರೆ, ದೈಹಿಕ ಚಟುವಟಿಕೆಗಳು ಕಡ್ಡಾಯ ಇಲ್ಲ. ಈ ನ್ಯೂನತೆಯನ್ನು ಸರಿಪಡಿಸಬೇಕು' ಎಂದು ಯುಜಿಸಿ ರೂಪಿಸಿರುವ ಈ ಮಾರ್ಗಸೂಚಿಗಳಲ್ಲಿ ಹೇಳಲಾಗಿದೆ.

ವಿವಿಧ ಭಾಷೆ, ಧರ್ಮ, ಸಂಪ್ರದಾಯ ಮತ್ತು ಸಾಮಾಜಿಕ ಭಿನ್ನತೆ ಹೊಂದಿರುವ ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆಗಳು ಒಳಗೊಂಡಿರಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ನೂತನ ಮಾರ್ಗಸೂಚಿಯ ಮುಖ್ಯಾಂಶಗಳು

- ಉತ್ತಮ ಬೋಧನಾ–ಕಲಿಕಾ ಪರಿಸರ ನಿರ್ಮಾಣವಾಗಬೇಕು
- ಎಲ್ಲರಿಗೂ ಸಮಾನ ಅವಕಾಶಗಳು ಸಿಗುವಂತಾಗಬೇಕು
- ಸಹಪಠ್ಯ ಚಟುವಟಿಕೆ, ಸಮಾಜಮುಖಿ ಕಾರ್ಯಗಳಿಗೆ ಒತ್ತು
- ತರಬೇತಿ, ಉದ್ಯೋಗ ಪಡೆಯಲು ಮಾರ್ಗದರ್ಶನ ನೀಡುವುದು
- ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ, ಮಹಿಳೆ ಉತ್ತೇಜನ

ಪತ್ರಿಕಾ ಸ್ವಾತಂತ್ರ್ಯ: ಭಾರತಕ್ಕೆ 150ನೇ ಸ್ಥಾನ

ನವದೆಹಲಿ (ಪಿಟಿಐ): 'ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್' ಸಂಸ್ಥೆ ಸಿದ್ಧಪಡಿಸಿರುವ 2022ನೇ ಸಾಲಿನ 180 ರಾಷ್ಟ್ರಗಳ 'ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕ'ದಲ್ಲಿ ಭಾರತ 150ನೇ ಸ್ಥಾನದಲ್ಲಿದೆ. ಕಳೆದ ಬಾರಿ 142ನೇ ಸ್ಥಾನದಲ್ಲಿದ್ದ ಭಾರತ, ಈ ಬಾರಿ ಎಂಟು ಸ್ಥಾನಗಳ ಕುಸಿತ ಕಂಡಿದೆ.

ನೇಪಾಳ ಹೊರತುಪಡಿಸಿ ಭಾರತದ ನೆರೆಯ ರಾಷ್ಟ್ರಗಳ ಶ್ರೇಯಾಂಕದಲ್ಲೂ ಕುಸಿತ ದಾಖಲಾಗಿದೆ. ಶ್ರೀಲಂಕಾ 146, ಪಾಕಿಸ್ತಾನ 157, ಬಾಂಗ್ಲಾದೇಶ 162 ಹಾಗೂ ಮ್ಯಾನ್ಮಾರ್ 176ನೇ ಸ್ಥಾನದಲ್ಲಿವೆ ಎಂದು ಸಂಸ್ಥೆಯ ಮಂಗಳವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಲಾಗಿದೆ.

ಕಳೆದ ಬಾರಿ 106ನೇ ಸ್ಥಾನದಲ್ಲಿದ್ದ ನೇಪಾಳ ಈ ಬಾರಿ 76ನೇ ಸ್ಥಾನಕ್ಕೆ ಏರಿದೆ. ಕಳೆದ ಬಾರಿ ಶ್ರೀಲಂಕಾ 127, ಮ್ಯಾನ್ಮಾರ್ 140, ಪಾಕಿಸ್ತಾನ 145, ಬಾಂಗ್ಲಾದೇಶ 152ನೇ ಸ್ಥಾನದಲ್ಲಿದ್ದವು.

ಈ ವರ್ಷ, ನಾರ್ವೆ (1) ಡೆನ್ಮಾರ್ಕ್ (2), ಸ್ವೀಡನ್ (3) ಎಸ್ಟೋನಿಯಾ (4) ಮತ್ತು ಫಿನ್ಲೆಂಡ್ (5) ಉನ್ನತ ಸ್ಥಾನಗಳನ್ನು ಪಡೆದುಕೊಂಡಿದ್ದು, ಉತ್ತರ ಕೊರಿಯಾ ಕೊನೆಯ ಸ್ಥಾನದಲ್ಲಿದೆ.

2024ಕ್ಕೆ 'ಶುಕ್ರಯಾನ': ಇಸ್ರೊದಿಂದ ಸಿದ್ಧತೆ

ನವದೆಹಲಿ: ಚಂದ್ರ ಹಾಗೂ ಮಂಗಳ ಗ್ರಹಕ್ಕೆ ಗಗನನೌಕೆಗಳನ್ನು ಉಡ್ಡಯನ ಮಾಡಿರುವ ಇಸ್ರೊ, ಈಗ ಶುಕ್ರ ಗ್ರಹದ ಕಕ್ಷೆಗೆ ಬಾಹ್ಯಾಕಾಶ ನೌಕೆ ಕಳುಹಿಸಲು ಸಿದ್ಧತೆ ನಡೆಸಿದೆ.

2024ರ ಡಿಸೆಂಬರ್‌ನಲ್ಲಿ ಗಗನನೌಕೆಯನ್ನು ಶುಕ್ರನತ್ತ ಉಡ್ಡಯನ ಮಾಡುವ ಗುರಿಯನ್ನು ಇಸ್ರೊ ಹೊಂದಿದೆ.

'ಶುಕ್ರಯಾನ' ಕಾರ್ಯಕ್ರಮಕ್ಕೆ ಸಂಬಂಧಿಸಿದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, 'ಶುಕ್ರ ಗ್ರಹಕ್ಕೆ ಗಗನನೌಕೆ ಕಳುಹಿಸುವ ಕಾರ್ಯಕ್ರಮದ ಯೋಜನಾ ವರದಿ ಸಿದ್ಧವಾಗಿದೆ. ಅಗತ್ಯವಿರುವ ಅನುದಾನ ಲಭ್ಯವಿದ್ದು, ಈ ಯೋಜನೆಯನ್ನು ಕಾರ್ಯಗತಗೊಳಿಸಲು ವಿಜ್ಞಾನಿಗಳು ಗಮನ ನೀಡಬೇಕು' ಎಂದರು. ಶುಕ್ರಗ್ರಹದ ಮೇಲ್ಮೈ ಹಾಗೂ ಅದರ ಸುತ್ತ ಏನಿದೆ ಎಂಬುದರ ಅಧ್ಯಯನ ಹಾಗೂ ಗ್ರಹವನ್ನು ಆವರಿಸಿರುವ 'ಗಂಧಕಾಮ್ಲದ ಮೋಡ'ಗಳಿಗೆ ಸಂಬಂಧಿಸಿದ ರಹಸ್ಯಗಳನ್ನು ಭೇದಿಸುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ಇಸ್ರೊ ಹೇಳಿದೆ.

ಎಸಿಜೆ: ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ


ಶ್ಯಾಮಲಾಲ್ ಯಾದವ್


ಸಂದೀಪ್ ಸಿಂಗ್


ಪ್ರೇಮಾ ಶ್ರೀದೇವಿ


ಹಿಮಾಂಶು ಕಾಲಾ

ಚೆನ್ನೈ: ಏಷಿಯನ್ ಕಾಲೇಜ್ ಆಫ್ ಜರ್ನಲಿಸಂ (ಎಸಿಜೆ) ನೀಡುವ 'ತನಿಖಾ ಪತ್ರಿಕೋದ್ಯಮ' ಪ್ರಶಸ್ತಿಗೆ 'ದಿ ಇಂಡಿಯನ್ ಎಕ್ಸ್‌ಪ್ರೆಸ್'ನ ಶ್ಯಾಮಲಾಲ್ ಯಾದವ್ ಮತ್ತು ಸಂದೀಪ್ ಸಿಂಗ್ ಅವರು ಆಯ್ಕೆಯಾಗಿದ್ದಾರೆ. ಅಯೋಧ್ಯೆ ರಾಮಮಂದಿರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರ, ಚುನಾಯಿತ ಜನಪ್ರತಿನಿಧಿಗಳು ಮತ್ತು ಸರ್ಕಾರಿ ಅಧಿಕಾರಿಗಳ ಸಂಬಂಧಿಗಳು ಅಯೋಧ್ಯೆಯಲ್ಲಿ ಜಮೀನು ಖರೀದಿಗೆ ತರಾತುರಿ ತೋರಿದ್ದರ ಕುರಿತು ಸಿದ್ಧಪಡಿಸಿದ್ದ ವರದಿಗೆ ಈ ಪ್ರಶಸ್ತಿ ಬಂದಿದೆ.

ಪ್ರೇಮಾ ಶ್ರೀದೇವಿ ಮತ್ತು ಹಿಮಾಂಶು ಕಾಲಾ ಅವರಿಗೆ ಕೆ.ಪಿ.ನಾರಾಯಣ ಕುಮಾರ್ ಸ್ಮರಣಾರ್ಥ ನೀಡಲಾಗುವ 'ಸಾಮಾಜಿಕ ಪರಿಣಾಮ ಪತ್ರಿಕೋದ್ಯಮ' ಪ್ರಶಸ್ತಿ ದೊರೆತಿದೆ. ದೆಹಲಿಯಲ್ಲಿ ಮಲಗುಂಡಿ ಸ್ವಚ್ಛಗೊಳಿಸುವ ಕಾರ್ಮಿಕರು, ಅವರ ಸ್ಥಿತಿಗತಿ, ಮಲಗುಂಡಿ ಸ್ವಚ್ಛಗೊಳಿಸುವ ವೇಳೆ ಸಂಭವಿಸಿದ ಸಾವುಗಳ ಬಗ್ಗೆ ಪ್ರೇಮಾ ಶ್ರೀದೇವಿ ಮತ್ತು ಹಿಮಾಂಶು ಕಾಲಾ ಅವರು ಸಿದ್ಧಪಡಿಸಿದ್ದ ಸಾಕ್ಷ್ಯಚಿತ್ರಕ್ಕಾಗಿ ಈ ಪ್ರಶಸ್ತಿ ದೊರೆತಿದೆ. ಈ ಸಾಕ್ಷ್ಯಚಿತ್ರವನ್ನು 'ದಿ ಪ್ರೋಬ್' ಸಂಸ್ಥೆ ನಿರ್ಮಿಸಿತ್ತು.

ಎರಡೂ ಪ್ರಶಸ್ತಿಗಳು ನಗದು ಬಹುಮಾನ, ಟ್ರೋಫಿ ಮತ್ತು ಪ್ರಶಸ್ತಿ ಫಲಕವನ್ನು ಹೊಂದಿವೆ. 'ತನಿಖಾ ಪತ್ರಿಕೋದ್ಯಮ' ಪ್ರಶಸ್ತಿಯು ₹2 ಲಕ್ಷ ನಗದು ಮತ್ತು'ಸಾಮಾಜಿಕ ಪರಿಣಾಮ ಪತ್ರಿಕೋದ್ಯಮ' ಪ್ರಶಸ್ತಿಯು ₹1 ಲಕ್ಷ ನಗದು ಬಹುಮಾನ ಒಳಗೊಂಡಿದೆ.

ಚೆನ್ನೈನಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಹನುಮಾನ್ ಚಾಲೀಸಾ ಪಠಣ ಮುಂದುವರಿಕೆ'

ಮುಂಬೈ (ಪಿಟಿಐ): 'ಮಸೀದಿ ಗಳಲ್ಲಿ ಧ್ವನಿವರ್ಧಕಗಳನ್ನು ಸ್ಥಗಿತಗೊಳಿಸುವವರೆಗೆ ತಮ್ಮ ಪಕ್ಷದ ಕಾರ್ಯಕರ್ತರು ಹೆಚ್ಚಿನ ಪ್ರಮಾಣದಲ್ಲಿ ಹನುಮಾನ್ ಚಾಲೀಸಾ ಪಠಿಸುವುದನ್ನು ಮುಂದುವರಿಸುತ್ತಾರೆ' ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನಾದ (ಎಂಎನ್‌ಎಸ್) ಮುಖ್ಯಸ್ಥ ರಾಜ್ ಠಾಕ್ರೆ ಬುಧವಾರ ತಿಳಿಸಿದರು.

'ತಮ್ಮ ಪಕ್ಷದ ಕಾರ್ಯಕರ್ತರನ್ನು ಬಂಧಿಸಿರುವ ಮಹಾರಾಷ್ಟ್ರ ಪೊಲೀಸರು, ಕಾನೂನು ಪಾಲಿಸದವರನ್ನು ಹಾಗೆಯೇ ಬಿಟ್ಟಿದ್ದಾರೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ವಾಗ್ದಾಳಿ ನಡೆಸಿದರು.

'ಮಸೀದಿಗಳ ಹೊರಗೆ ಹನುಮಾನ್ ಚಾಲೀಸಾವನ್ನು ಪಠಿಸಲು ನಾನು ಕರೆ ನೀಡಿದ ಬಳಿಕ, ಶೇ 90– 92ರಷ್ಟು ಮಸೀದಿಗಳು ಬೆಳಗಿನ ಆಜಾನ್ ಸಂದರ್ಭದಲ್ಲಿ ಧ್ವನಿವರ್ಧಕಗಳನ್ನು ಬಳಸುತ್ತಿಲ್ಲ' ಎಂದು ಠಾಕ್ರೆ ತಿಳಿಸಿದರು.

'ಮುಂಬೈನಲ್ಲಿ ಇರುವ 1,104 ಮಸೀದಿಗಳ ಪೈಕಿ ಬುಧವಾರ 135 ಮಸೀದಿಗಳು ಬೆಳಗಿನ ನಮಾಜ್ ವೇಳೆ ಧ್ವನಿವರ್ಧಕಗಳನ್ನು ಬಳಸಿವೆ. ಕಾನೂನು ಉಲ್ಲಂಘಿಸಿದ ಈ ಮಸೀದಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತೀರಿ' ಎಂದು ಅವರು ಸರ್ಕಾರ ಮತ್ತು ಪೊಲೀಸರನ್ನು ಪ್ರಶ್ನಿಸಿದರು.

ಮಹಾರಾಷ್ಟ್ರ ನವನಿರ್ಮಾಣ ಸೇನೆಯ ಕಾರ್ಯಕರ್ತರು ಬುಧವಾರ ಬೆಳಿಗ್ಗೆ ಮುಂಬೈನ ಚಾರ್ಕೋಪ್ ಪ್ರದೇಶದ ಮಸೀದಿಯ ಬಳಿ ಹನುಮಾನ್ ಚಾಲೀಸಾವನ್ನು ಧ್ವನಿವರ್ಧಕದ ಮೂಲಕ ಪಠಿಸಿದರು. ಮಹಾರಾಷ್ಟ್ರದಾದ್ಯಂತ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದಾರೆ. ಮುಂಬೈ, ಪುಣೆ ಸೇರಿದಂತೆ ರಾಜ್ಯದಾದ್ಯಂತ ಪೊಲೀಸರು ಹಲವು ಕಾರ್ಯಕರ್ತರನ್ನು ಬಂಧಿಸಿದ್ದಾರೆ.

ಮಹಾರಾಷ್ಟ್ರದಲ್ಲಿಯಾವುದೇ ರೀತಿ ಧ್ವನಿವರ್ಧಕಗಳ ಮಾರ್ಗಸೂಚಿ ಉಲ್ಲಂಘನೆಯಾಗಿಲ್ಲ. 'ತಮ್ಮ ಪಕ್ಷಕ್ಕೆ ಯಾರೂ ಹಿಂದುತ್ವದ ಪಾಠವನ್ನು ಕಲಿಸಬೇಕಿಲ್ಲ' ಎಂದು ಶಿವಸೇನಾ ಸಂಸದ ಸಂಜಯ್ ರಾವುತ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಬಸ್–ಟ್ರಕ್ ಡಿಕ್ಕಿ: ಬೆಳಗಾವಿಯ ದಂಪತಿ ಸಾವು

ಇಟಾವಾ, ಉತ್ತರ ಪ್ರದೇಶ: ಲಖನೌ–ಆಗ್ರಾ ಹೆದ್ದಾರಿಯಲ್ಲಿ ಟ್ರಕ್ ಬಸ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕರ್ನಾಟಕದ ಇಬ್ಬರು ಸಾವನ್ನಪ್ಪಿದ್ದು, 11 ಮಂದಿ ಗಾಯಗೊಂಡಿದ್ದಾರೆ.

'ಮೃತಪಟ್ಟವರನ್ನು ಬೆಳಗಾವಿಯ ವಿಠಲ್ ಮಾರುತಿ ಮತ್ತು ಅವರ ಪತ್ನಿ ಸುಲೋಚನಾ ಎಂದು ಗುರುತಿಸಲಾಗಿದೆ. ವಿಠಲ್ ದಂಪತಿ ಹಾಗೂ ಉಳಿದ 11 ಮಂದಿ ಆಗ್ರಾಕ್ಕೆ ಪ್ರವಾಸಕ್ಕೆಂದು ಬಸ್‌ನಲ್ಲಿ ತೆರಳಿದ್ದರು. ಅಲ್ಲಿಂದ ವಾರಾಣಸಿಗೆ ಪ್ರಯಾಣಿಸುತ್ತಿದ್ದರು. ಮಾರ್ಗಮಧ್ಯೆ ಟ್ರಕ್‌ವೊಂದು ಬಸ್‌ನ್ನು ಹಿಂದಿಕ್ಕಲು ಪ್ರಯತ್ನಿಸಿದ ವೇಳೆ ಈ ಅಪಘಾತ ಸಂಭವಿಸಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಗಾಯಗೊಂಡವರನ್ನು ಇಟಾವಾದ ಸೈಫೈ ವೈದ್ಯಕೀಯ ಕಾಲೇಜಿಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ.

'ಪ್ರದೀಪ್ ಶರ್ಮಾ ಪ್ರಮುಖ ಸಂಚುಕೋರ'

ಮುಂಬೈ: 'ಎನ್‌ಕೌಂಟರ್ ಸ್ಪೆಷಲಿಸ್ಟ್' ಪ್ರದೀಪ್ ಶರ್ಮಾ ಅವರು ಠಾಣೆ ಮೂಲದ ಉದ್ಯಮಿ ಮನ್‌ಸುಖ್ ಹಿರೇನ್ ಅವರ ಹತ್ಯೆಯ ಹಿಂದಿನ ಪ್ರಮುಖ ಸಂಚುಕೋರ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತಿಳಿಸಿದೆ.

ವಜಾಗೊಂಡಿರುವ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಸಚಿನ್ ವಾಜೆ ಅವರು ಈ ಕೊಲೆಗೆ ಸುಮಾರು ₹ 45 ಲಕ್ಷ ಒದಗಿಸಿದ್ದರು ಎಂದು ಎನ್‌ಐಎ ಬಾಂಬೆ ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದೆ.

ನೀಟ್ ಮಸೂದೆ ರಾಷ್ಟ್ರಪತಿ ಅಂಕಿತಕ್ಕೆ ರವಾನೆ

ಚೆನ್ನೈ(ಪಿಟಿಐ): ರಾಜ್ಯದ ವಿದ್ಯಾರ್ಥಿಗಳಿಗೆ ನೀಟ್ (ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ)ನಿಂದ ವಿನಾಯ್ತಿ ನೀಡುವ ಮಸೂದೆಗೆ ತಮಿಳುನಾಡು ವಿಧಾನಸಭೆ ಮತ್ತೆ ಅಂಗೀಕಾರ ನೀಡಿದ ಸುಮಾರು 3 ತಿಂಗಳ ಬಳಿಕ, ರಾಷ್ಟ್ರಪತಿಯವರ ಅಂಕಿತಕ್ಕಾಗಿ ಈ ಮಸೂದೆಯನ್ನು ರಾಜ್ಯಪಾಲ ಆರ್.ಎನ್. ರವಿ ಅವರು ಕೇಂದ್ರ ಗೃಹ ಸಚಿವಾಲಯಕ್ಕೆ ರವಾನಿಸಿದ್ದಾರೆ.



ಸುಭಾಷಿತ

ಜ್ಞಾನದ ಮೌಲ್ಯವು ಜ್ಞಾನವನ್ನು ಬಳಸುವವರ ಕೈಯಲ್ಲಿದೆ.

-ಡಾ.ಬಿ.ಆರ್. ಅಂಬೇಡ್ಕರ್

ಪಿಡಿಒಗಳಿಂದಲೇ ವಿವಾಹ ನೋಂದಣಿ ಸಕಾರಾತ್ಮಕ ಪರಿಣಾಮ ಬೀರುವ ಕ್ರಮ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ವಿವಾಹ ನೋಂದಣಿಯ ಅಧಿಕಾರವನ್ನೂ ನೀಡಲು ರಾಜ್ಯ ಸರ್ಕಾರ ಕೈಗೊಂಡ ತೀರ್ಮಾನ ಸ್ವಾಗತಾರ್ಹ ಹೆಜ್ಜೆ. ಗ್ರಾಮಾಂತರ ಪ್ರದೇಶದಲ್ಲಿ ಈಗಲೂ ಒಂದು ಪಿಡುಗಾಗಿ ಕಾಡುತ್ತಿರುವ ಬಾಲ್ಯ ವಿವಾಹವನ್ನು ತಡೆಗಟ್ಟಲು ಈ ಕ್ರಮದಿಂದ ಅನುಕೂಲವಾಗಲಿದೆ. ಈವರೆಗೆ, ವಿವಾಹವಾದ ನವಜೋಡಿ ನೋಂದಣಿಗಾಗಿ ಉಪ ನೋಂದಣಾಧಿಕಾರಿಗಳ ಕಚೇರಿ ಹುಡುಕಿಕೊಂಡು ತಾಲ್ಲೂಕು ಕೇಂದ್ರದವರೆಗೆ ಹೋಗುವುದು ಅನಿವಾರ್ಯವಾಗಿತ್ತು. ಹೀಗಾಗಿ ಎಷ್ಟೋ ನವಜೋಡಿಗಳು ವಿವಾಹ ನೋಂದಣಿ ಮಾಡಿಸುವ ಗೋಜಿಗೇ ಹೋಗುತ್ತಿರಲಿಲ್ಲ. ಒಂದುವೇಳೆ ವಿವಾಹ ನೋಂದಣಿ ಮಾಡಿಸಿದರೂ ವಿವಿಧ ಕಾರಣಗಳಿಗಾಗಿ ಎಷ್ಟೋ ಬಾಲ್ಯ ವಿವಾಹಗಳು ಕೂಡ ಪತ್ತೆಯಾಗದೆ ಹೋಗುತ್ತಿದ್ದವು. ಪಿಡಿಒಗಳು, ಸ್ಥಳದಲ್ಲೇ ಇರುವ ಸರ್ಕಾರದ ಪ್ರತಿನಿಧಿಗಳು. ಸ್ಥಳೀಯ ಆಗು-ಹೋಗುಗಳ ಕುರಿತು ಸಮರ್ಪಕ ಮಾಹಿತಿಯೂ ಅವರಲ್ಲಿ ಇರುವುದರಿಂದ ಬಾಲ್ಯ ವಿವಾಹಗಳ ಮಾಹಿತಿ ಸುಲಭವಾಗಿ ಅವರಿಗೆ ಸಿಗುತ್ತದೆ. ಅಂತಹ ವಿವಾಹಗಳನ್ನು ತಡೆಗಟ್ಟುವಲ್ಲಿ ಅವರು ಮಹತ್ವದ ಪಾತ್ರ ವಹಿಸಬಲ್ಲರು. ಕೋವಿಡ್ ಸಾಂಕ್ರಾಮಿಕದ ಕಾಲಘಟ್ಟದಲ್ಲಿ ಬಾಲ್ಯ ವಿವಾಹಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಏರಿಕೆ ಆಗಿದ್ದನ್ನು ಹಲವು ಸಮೀಕ್ಷೆಗಳು ಗುರುತಿಸಿದ್ದವು. ಹಾಗೆಯೇ 2021ರಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಎರಡು ಸಾವಿರಕ್ಕೂ ಅಧಿಕ ಬಾಲ್ಯ ವಿವಾಹಗಳನ್ನು ತಡೆಗಟ್ಟಲಾಗಿತ್ತು. ಪಿಡಿಒಗಳಿಗೆ ವಿವಾಹ, ಜನನ ಮತ್ತು ಮರಣ ನೋಂದಣಿ ಅಧಿಕಾರ ನೀಡುವುದರಿಂದ ಪಂಚಾಯಿತಿ ಮಟ್ಟದಲ್ಲೇ ಸಮಗ್ರ ದತ್ತಾಂಶ ಬ್ಯಾಂಕ್‌ವೊಂದು ನಿರ್ಮಾಣ ಆಗಲಿದೆ. ಇದರಿಂದ ಬಾಲ್ಯ ವಿವಾಹ ತಡೆಗಟ್ಟುವ ಕೆಲಸ ಮತ್ತಷ್ಟು ಸಲೀಸಾಗಲಿದೆ ಎನ್ನುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಲೆಕ್ಕಾಚಾರದಲ್ಲಿ ತಥ್ಯವಿದೆ. ಬಾಲ್ಯ ವಿವಾಹ ತಡೆಗಟ್ಟುವುದು ಸಾಧ್ಯವಾದರೆ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವತ್ತ ಮತ್ತೊಂದು ಹೆಜ್ಜೆ ಮುಂದಿಟ್ಟಂತೆ ಎಂಬುದನ್ನು ಮರೆಯುವಂತಿಲ್ಲ.



ಈ ಉಪಕ್ರಮದಿಂದಾಗಿ ಬಾಲ್ಯ ವಿವಾಹ ತಡೆಗಟ್ಟುವ ಕೆಲಸ ಮತ್ತಷ್ಟು ಪರಿಣಾಮಕಾರಿ ಆಗಲಿದೆ

ರಾಜ್ಯದಲ್ಲಿ ವಿವಾಹ ನೋಂದಣಿ ಕಡ್ಡಾಯವೇನಲ್ಲ. ಜನನ ಮತ್ತು ಮರಣ ನೋಂದಣಿ ಹೇಗೆ ಕಡ್ಡಾಯವೋ ಹಾಗೆಯೇ ವಿವಾಹ ನೋಂದಣಿಯನ್ನೂ ಕಡ್ಡಾಯ ಮಾಡಬೇಕು ಎಂಬ ಬೇಡಿಕೆಯನ್ನು ಸಾಮಾಜಿಕ ಹೋರಾಟಗಾರರು ಬಹಳ ಹಿಂದೆಯೇ ಸರ್ಕಾರದ ಮುಂದೆ ಇಟ್ಟಿದ್ದರು. ನಿಯಮವನ್ನು ಎಷ್ಟೇ ಸರಳ ಮಾಡಿದರೂ ಅದರ ಲಾಭ ಜನಸಾಮಾನ್ಯರಿಗೆ ಸಿಗಬೇಕಾದರೆ ಅವರು ವಿವಾಹ ನೋಂದಣಿ ಮಾಡಿಸಿಕೊಳ್ಳಲು ಮುಂದಾಗಲೇಬೇಕು. ಹೀಗಾಗಿ ವಿವಾಹ ನೋಂದಣಿಯನ್ನು ಉತ್ತೇಜಿಸುವಂತಹ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕಿರುವುದು ಅಪೇಕ್ಷಣೀಯ. ಇದರ ದೂರಗಾಮಿ ಪ್ರಯೋಜನಗಳು ಹಲವು. ಮದುವೆಯ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಸರ್ಕಾರವೇನಾದರೂ ಮುಂದಾದರೆ ಬಹುಪತ್ನಿತ್ವವನ್ನು ಪತ್ತೆ ಹಚ್ಚುವುದು ಕೂಡ ಮುಂದಿನ ದಿನಗಳಲ್ಲಿ ಸುಲಭವಾಗಲಿದೆ. 'ಹಿಂದೂ ವಿವಾಹ ಕಾಯ್ದೆ-1955'ರ ಪ್ರಕಾರ, ನೋಂದಣಿ ಮಾಡಿಸದಿದ್ದರೂ ವಿಧ್ಯುಕ್ತವಾಗಿ ನಡೆದ ಹಿಂದೂ, ಜೈನ ಮತ್ತು ಸಿಖ್ ಮದುವೆಗಳು ಕಾನೂನುಬದ್ಧ. ಆದರೆ, ವಿಚ್ಛೇದನದ ಸಂದರ್ಭದಲ್ಲಿ ವಿವಾಹ ಪ್ರಮಾಣಪತ್ರವು ಕಾನೂನು ಪ್ರಕ್ರಿಯೆಗಳನ್ನು ಸುಲಭವಾಗಿ ಹಾಗೂ ತ್ವರಿತವಾಗಿ ನಡೆಸಲು ನೆರವಿಗೆ ಬರುತ್ತದೆ. ಕೋರ್ಟ್ ಮೆಟ್ಟಿಲೇರುವ ದಂಪತಿ, ತಮ್ಮ ವಿವಾಹಕ್ಕೆ ಈಗಲೂ ಪುರಾವೆಯಾಗಿ ಮದುವೆ ಆಮಂತ್ರಣ ಪತ್ರಿಕೆ ಹಾಗೂ ಛಾಯಾಚಿತ್ರಗಳನ್ನೇ ತೋರಿಸುವುದು ರೂಢಿ. ವಿವಾಹಕ್ಕೆ ಸಂಬಂಧಿಸಿದ ಸಮರ್ಪಕ ದಾಖಲೆಗಳಿಲ್ಲದೆ ಎಷ್ಟೋ ಸಂದರ್ಭಗಳಲ್ಲಿ ಮಹಿಳೆಯರು ತೊಂದರೆ ಅನುಭವಿಸಿದ್ದೂ ಇದೆ.

ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಎಷ್ಟೆಲ್ಲ ಪ್ರಯತ್ನಗಳು ನಡೆದರೂ ಅಂತಹ ಹಲವು ಮದುವೆಗಳು ಈಗಲೂ ಪತ್ತೆಯಾಗುತ್ತಿಲ್ಲ. ರಂಗೋಲಿ ಕೆಳಗೆ ನುಸುಳುವ ಈ ಪರಿಪಾಟವನ್ನು ತಪ್ಪಿಸಲು ಇರುವ ರಾಮಬಾಣವೆಂದರೆ ವಿವಾಹ ನೋಂದಣಿ ಕಡ್ಡಾಯಗೊಳಿಸುವುದು ಎಂಬ ಹೋರಾಟಗಾರರ ಸಲಹೆ ಕೂಡ ಗಮನಿಸುವಂಥದ್ದು. 'ಹೆಣ್ಣು ಮಕ್ಕಳು ಬೇರೆ ಜಾತಿಯ ಯುವಕರನ್ನು ಇಷ್ಟಪಟ್ಟರೆ ಮನೆ ಮರ್ಯಾದೆ ಹಾಳಾಗುತ್ತದೆ ಎಂಬ ಭಯದಿಂದ ಪೋಷಕರು ಬೇಗ ಮದುವೆ ಮಾಡಿಬಿಡುತ್ತಾರೆ' ಎನ್ನುವುದು ಬಾಲ್ಯ ವಿವಾಹ ಪಿಡುಗಿನ ಕುರಿತ ಸಮೀಕ್ಷೆಯಲ್ಲಿ ಎದ್ದು ಕಂಡಿರುವ ಅಂಶ. ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಅಡ್ಡಿಯಾಗಿರುವ ಈ ಮನಃಸ್ಥಿತಿಯನ್ನು ಹೋಗಲಾಡಿಸಲು ಪಂಚಾಯಿತಿ ಮಟ್ಟದಲ್ಲೇ ಜಾಗೃತಿ ಅಭಿಯಾನ ನಡೆಸಬೇಕು. ಪಿಡಿಒಗಳಿಗೆ ವಿವಾಹ ನೋಂದಣಿ ಅಧಿಕಾರವನ್ನು ವಹಿಸಿರುವುದರಿಂದ ಇನ್ನುಮುಂದೆ ಮದುವೆಗಳ ನೋಂದಣಿ ಸಂಖ್ಯೆಯಲ್ಲಿ ಹೆಚ್ಚಳ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ, ಗ್ರಾಮ ಪಂಚಾಯಿತಿ ಕಚೇರಿಯನ್ನು ತಲುಪುವುದು ಜನಸಾಮಾನ್ಯರಿಗೆ ಕಷ್ಟವೇನೂ ಅಲ್ಲ. ಆದರೆ, ಎಲ್ಲರೂ ವಿವಾಹ ನೋಂದಣಿ ಮಾಡಿಸುವಂತಾಗಲು ಸರ್ಕಾರ ಜನರಲ್ಲಿ ಆ ಮಟ್ಟಿಗಿನ ಜಾಗೃತಿಯನ್ನು ಮೂಡಿಸುವುದು ಅಗತ್ಯವಾಗಿದೆ. ಅನಿವಾರ್ಯ ಎಂದೆನಿಸಿದರೆ ನೋಂದಣಿ ಕಡ್ಡಾಯಗೊಳಿಸುವ 'ಅಸ್ತ್ರ'ವನ್ನು ಬಳಸಲೂ ಹಿಂಜರಿಯಬಾರದು.

ರಾಜ್ಯದಲ್ಲಿ ಬಿಜೆಪಿಯಿಂದ ಈ ಹಿಂದೆ ಸಿ.ಎಂ. ಆದವರು ಕೋಮುವಾದದ ಜೊತೆ ಸರಸವಾಡಲಿಲ್ಲ

ಬೊಮ್ಮಾಯಿ: ನೆನಪಾಗಬೇಕಿರುವುದು ಹೇಗೆ?



ವಿಶ್ಲೇಷಣೆ

ಎಂ. ಗೌತಮ್ ಮಾಚಯ್ಯ

ಕವಿ ಕುವೆಂಪು ಅವರು ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಬಣ್ಣಿಸಿದ್ದರು. ಆದರೆ ರಾಜ್ಯವು ಅವರು ಬಣ್ಣಿಸಿದಂತೆ ಉಳಿದಿಲ್ಲ. ಕೋಮು ಸೌಹಾರ್ದವು ಕದಡಿದೆ. ಪ್ರಗತಿಪರ ರಾಜ್ಯ ಎಂಬ ಹೆಗ್ಗಳಿಕೆಯು ರಾಷ್ಟ್ರ ಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾಳಾಗಿದೆ.

2008ರ ನಂತರ ಬಿಜೆಪಿಯು ರಾಜ್ಯದಲ್ಲಿ ಆಗಾಗ ಆಡಳಿತ ನಡೆಸಿದೆ. ಆದರೆ, ಇನ್ನೊಂದು ಕೋಮು ಪ್ರಯೋಗಶಾಲೆಯಾಗಿ ಕರ್ನಾಟಕವು ಬದಲಾಗುವ ಪ್ರಕ್ರಿಯೆ ಶುರುವಾಗಿದ್ದು ಮಾತ್ರ ಕೆಲವು ತಿಂಗಳುಗಳ ಹಿಂದೆ, ಬಸವರಾಜ ಬೊಮ್ಮಾಯಿ ಅವರು ಹಿಂದಿನ ವರ್ಷದ ಜುಲೈನಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ. ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದ ಗೌಡ ಮತ್ತು ಜಗದೀಶ ಶೆಟ್ಟರ್ ಅವರೂ ಬಿಜೆಪಿ ಆಡಳಿತ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದರು. ಆದರೆ ಇವರು ಕೋಮುವಾದದ ಬೆಂಕಿಯೊಡನೆ ಸರಸವಾಡಲಿಲ್ಲ.

ಈಗ ರಾಜ್ಯದ ಎಲ್ಲೆಡೆ ದ್ವೇಷದ ವಾತಾವರಣ ನಿರ್ಮಿಸುತ್ತಿರುವುದು ಏಕೆ? ರಾಜಕೀಯ ಲಾಭಕ್ಕಾಗಿ – ತಮ್ಮ ಉಳಿವಿಗಾಗಿ ಹಾಗೂ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಲಾಭಕ್ಕಾಗಿ– ಬೊಮ್ಮಾಯಿ ಅವರು ಉದ್ದೇಶಪೂರ್ವಕವಾಗಿ ಸಮಾಜವನ್ನು ಒಡೆಯುತ್ತಿದ್ದಾರೆಯೇ? ಅಥವಾ ಪಕ್ಷ ಮತ್ತು ಪರಿವಾರದಲ್ಲಿನ ಕಟ್ಟರ್‌ವಾದಿಗಳ ಕೈಗೊಂಬೆ ಅವರಾಗಿದ್ದಾರೆಯೇ? ಸತ್ಯ ಏನೇ ಇದ್ದರೂ, ಹಿಂದುತ್ವವಾದಿ ಸಂಘಟನೆಗಳನ್ನು ನಿಯಂತ್ರಣದಲ್ಲಿ ಇರಿಸುವಲ್ಲಿನ, ಕೋಮುಸೌಹಾರ್ದ ಮರುಸ್ಥಾಪಿಸುವಲ್ಲಿನ ವೈಫಲ್ಯದ ಕಾರಣದಿಂದಾಗಿ ಬೊಮ್ಮಾಯಿ ಅವರು ರಾಜ್ಯ ಕಂಡ ಅತ್ಯಂತ ದುರ್ಬಲ ಮುಖ್ಯಮಂತ್ರಿಗಳ ಪೈಕಿ ಒಬ್ಬರಾಗಿದ್ದಾರೆ.


ಎಂಜಿನಿಯರಿಂಗ್ ಪದವೀಧರ ಆಗಿರುವ ಬೊಮ್ಮಾಯಿ, ಸಮಾಜವಾದಿ ಹಿನ್ನೆಲೆಯವರು. ತಮ್ಮ ತಂದೆ, ಖ್ಯಾತ ರಾಜಕಾರಣಿ ಎಸ್.ಆರ್. ಬೊಮ್ಮಾಯಿ ಅವರ ನೆರಳಿನಲ್ಲೇ ಬೆಳೆದ ಬಸವರಾಜ ಬೊಮ್ಮಾಯಿ ಯಾವಾಗಲೂ ಪ್ರಬುದ್ಧ ಹಾಗೂ ಅಂತಃಕರಣದ ರಾಜಕಾರಣಿಯಾಗಿ ಕಂಡವರು. ಹಿಂದಿನ ವರ್ಷದ ನವೆಂಬರ್‌ನಲ್ಲಿ, ಸಂವಿಧಾನ ದಿನಾಚರಣೆ ವೇಳೆ ಅವರು, 'ಎಲ್ಲರನ್ನೂ ಒಂದಾಗಿಸಿರುವ ಮಾನವೀಯತೆಯನ್ನು ಆಧಾರವಾಗಿಸಿಕೊಂಡು ನಮ್ಮ ಸಂವಿಧಾನ ನಿಂತಿದೆ. ಯಾವುದೇ ದೇಶದ ಅಭಿವೃದ್ಧಿಗೆ ಮಾನವೀಯ ಮೌಲ್ಯಗಳು ಮುಖ್ಯ' ಎಂದಿದ್ದರು. ಆದರೆ, ಮಾತು ಹಾಗೂ ಕೃತಿಗಳ ನಡುವೆ ದೊಡ್ಡ ಅಂತರವಿದೆ. ಜನತಾ ಪರಿವಾರದಲ್ಲಿ ಬೆಳೆದ ಬಸವರಾಜ ಬೊಮ್ಮಾಯಿ ಬಿಜೆಪಿ ಸೇರಿದ್ದು 2008ರಲ್ಲಿ. ಪಕ್ಷ ಅಧಿಕಾರದಲ್ಲಿದ್ದಾಗ ಮುಖ್ಯ ಖಾತೆಗಳನ್ನು ನಿಭಾಯಿಸಿದ್ದರು, ಸಮರ್ಥ ಸಚಿವರಾಗಿ ಹೆಸರು ಮಾಡಿದ್ದರು. ಯಡಿಯೂರಪ್ಪ ಸಂಪುಟದಲ್ಲಿ ಗೃಹ ಸಚಿವರಾದಾಗ ಬೊಮ್ಮಾಯಿ ಅವರಿಗೆ ಇನ್ನೊಂದು ಮುಖವಿದೆ ಎಂಬುದನ್ನು ಜನ ಭಾವಿಸಲಾರಂಭಿಸಿದರು.

ಪೌರತ್ವ ತಿದ್ದುಪಡಿ ಕಾಯ್ದೆಗೆ ಸಂಬಂಧಿಸಿದಂತೆ ಬೀದರ್‌ನ ಶಾಹೀನ್ ಶಿಕ್ಷಣ ಸಂಸ್ಥೆಯಲ್ಲಿ ಮಕ್ಕಳು ಪ್ರದರ್ಶಿಸಿದ ನಾಟಕವೊಂದಕ್ಕೆ ಸಂಬಂಧಿಸಿದಂತೆ ಶಿಕ್ಷಕರೊಬ್ಬರನ್ನು ಹಾಗೂ ವಿದ್ಯಾರ್ಥಿಯ ತಾಯಿಯನ್ನು ಬಂಧಿಸಿದಾಗ ಅದನ್ನು ಬಸವರಾಜ ಬೊಮ್ಮಾಯಿ ಸಮರ್ಥಿಸಿಕೊಂಡರು. ಅದು ಅವರ ಇನ್ನೊಂದು ಮುಖ ಕಂಡ ಮೊದಲ ನಿದರ್ಶನವಾಗಿತ್ತು. ಹೈಕೋರ್ಟ್ ಈ ಪ್ರಕರಣವನ್ನು ರದ್ದುಪಡಿಸಿದ್ದು ಮಾತ್ರವಲ್ಲದೆ, ಕೈಯಲ್ಲಿ ಬಂದೂಕು ಇರಿಸಿಕೊಂಡು ಮಕ್ಕಳನ್ನು ವಿಚಾರಣೆಗೆ ಒಳಪಡಿಸಿದ್ದಕ್ಕಾಗಿ ಪೊಲೀಸರ ವಿರುದ್ಧ ಕಟುವಾಗಿ ಮಾತನಾಡಿತು. ದಕ್ಷಿಣ ಕನ್ನಡ ಜಿಲ್ಲೆಯ ಒಂದು ಶಾಲೆಯಲ್ಲಿ ವಿದ್ಯಾರ್ಥಿಗಳು ಅಯೋಧ್ಯೆಯ ಬಾಬರಿ ಮಸೀದಿ ಧ್ವಂಸಗೊಳಿಸಿದ ಘಟನೆಗೆ ಸಂಬಂಧಿಸಿದ ನಾಟಕವೊಂದನ್ನು ಆಡಿದಾಗ ಅದೇ ಗೃಹ ಸಚಿವರು ಬೇರೆ ರೀತಿ ವರ್ತಿಸಿದ್ದರು.

ದೆಹಲಿ ಪೊಲೀಸರು ಬೆಂಗಳೂರಿಗೆ ಬಂದು, ಪರಿಸರ ಕಾರ್ಯಕರ್ತೆ ದಿಶಾ ರವಿ ಅವರನ್ನು ಸುಳ್ಳು ಆರೋಪಗಳ ಟೂಲ್‌ಕಿಟ್ ಪ್ರಕರಣದಲ್ಲಿ ಬಂಧಿಸಿದಾಗ, ದಿಶಾ ಅವರ ಸಹಾಯಕ್ಕೆ ಬರುವಲ್ಲಿ ಬೊಮ್ಮಾಯಿ ವಿಫಲರಾಗಿದ್ದರು. ಹಲವು ದಿನಗಳ ನಂತರ ದಿಶಾ ಅವರ ಬಿಡುಗಡೆ ಆಯಿತು. ದಿಶಾ ವಿರುದ್ಧ ತೃಣಮಾತ್ರದ ಸಾಕ್ಷ್ಯವನ್ನು ಹಾಜರುಪಡಿಸುವಲ್ಲಿಯೂ ಪೊಲೀಸರು ವಿಫಲರಾಗಿದ್ದಾರೆ ಎಂದು ದೆಹಲಿ ನ್ಯಾಯಾಲಯ ಹೇಳಿತ್ತು.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರದಲ್ಲಿ ಬೊಮ್ಮಾಯಿ ಅವರು ದಕ್ಷಿಣ ಕನ್ನಡದಲ್ಲಿನ ಅನೈತಿಕ ಪೊಲೀಸ್‌ಗಿರಿಯನ್ನು ಸಮರ್ಥಿಸಿಕೊಂಡಿದ್ದರು. ಆಘಾತಕಾರಿಯಾದಂತಹ ಅನೈತಿಕ ಪೊಲೀಸ್‌ಗಿರಿ ಪ್ರಕರಣವನ್ನು ಬೊಮ್ಮಾಯಿ ಅವರು 'ಕೆಲವು ಕ್ರಿಯೆಗಳಿಗೆ ಪ್ರತಿಕ್ರಿಯೆ' ಎಂದು ಕರೆದು, ಹಿಂದುತ್ವವಾದಿ ಸಂಘಟನೆಗಳು ಕಾನೂನನ್ನು ಕೈಗೆತ್ತಿಕೊಳ್ಳುವುದಕ್ಕೆ, ಜನರು ತಮ್ಮ ವೈಯಕ್ತಿಕ ಜೀವನದಲ್ಲಿ ಏನು ಮಾಡಬಹುದು ಹಾಗೂ ಏನು ಮಾಡಬಾರದು ಎಂಬುದನ್ನು ಈ ಸಂಘಟನೆಗಳು ಹೇಳುವುದಕ್ಕೆ ಅಧಿಕೃತ ಅನುಮೋದನೆ ನೀಡಿದ್ದರು.

ಬೊಮ್ಮಾಯಿ ನೇತೃತ್ವದ ಸರ್ಕಾರವು ಮತಾಂತರ ನಿಷೇಧ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಂಡಿತು. ಅದಕ್ಕೂ ಮೊದಲು ಸರ್ಕಾರವು, ಕ್ರೈಸ್ತ ಪಾದ್ರಿಗಳು, ಅವರ ದೂರವಾಣಿ ಸಂಖ್ಯೆಗಳು, ಅವರ ಚರ್ಚುಗಳು ಹಾಗೂ ಪ್ರಾರ್ಥನಾ ಸ್ಥಳಗಳ ಮಾಹಿತಿ ಸಂಗ್ರಹಿಸುವಂತೆ ಸೂಚಿಸಿತು. ಇದು ಕ್ರೈಸ್ತ ಸಮುದಾಯವನ್ನು ಬೆದರಿಸುವ ನಡೆಯಾಗಿತ್ತು. ರಾಜ್ಯದ ಹಲವು ಕಡೆಗಳಲ್ಲಿ ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿಗಳು ನಡೆದವು. ಕ್ರಿಸ್ಮಸ್ ದಿನವೂ ದಾಳಿ ನಡೆಯಿತು. ಮುಖ್ಯಮಂತ್ರಿಯವರು ಎಚ್ಚರಿಕೆಯಿಂದ, ಉದ್ದೇಶಪೂರ್ವಕವಾಗಿ ಮೌನ ವಹಿಸಿದ್ದರು.



ಹಿಜಾಬ್ ವಿವಾದದ ಮೂಲಕ ಅಧಿಕಾರಸ್ಥರ ಗಮನವು ಮುಸ್ಲಿಮರ ಮೇಲೆ ದಾಳಿ ನಡೆಸುವುದರತ್ತ ತಿರುಗಿತು. ಮುಖ್ಯಮಂತ್ರಿಯವರು ಮುತ್ಸದ್ದಿತನ ಪ್ರದರ್ಶಿಸಿದ್ದರೆ ಈ ವಿವಾದವನ್ನು ಸ್ಥಳೀಯವಾಗಿ, ಸೌಹಾರ್ದಯುತವಾಗಿ ಬಗೆಹರಿಸಬಹುದಿತ್ತು. ಆದರೆ, ಇದು ಹಿಂದೂ–ಮುಸ್ಲಿಂ ವಿವಾದದ ರೂಪ ಪಡೆಯಲು ಅವಕಾಶ ನೀಡಲಾಯಿತು. ಇದಾದ ನಂತರದಲ್ಲಿ, ದೇವಸ್ಥಾನಗಳ ಜಾತ್ರೆಗಳ ಸಂದರ್ಭದಲ್ಲಿ ಮುಸ್ಲಿಂ ವ್ಯಾಪಾರಿಗಳು ಹಾಕುವ ತಾತ್ಕಾಲಿಕ ಅಂಗಡಿಗಳನ್ನು ವಿರೋಧಿಸಿ ಅಭಿಯಾನ ನಡೆಯಿತು. ಹಿಂದೂಗಳಲ್ಲದವರು ಪಾಲ್ಗೊಳ್ಳುವುದನ್ನು ಕಾನೂನು ನಿರ್ಬಂಧಿಸಿದೆ ಎಂದು ಹೆಚ್ಚಿನವರಿಗೆ ಗೊತ್ತೇ ಇರದಿದ್ದ ನಿಯಮವೊಂದನ್ನು ಸರ್ಕಾರವು ಹೊರಗೆ ಎಳೆದುತಂದಿತು.

ಅಲ್ಲಿಗೇ ಎಲ್ಲವೂ ನಿಲ್ಲಲಿಲ್ಲ. ಧ್ರುವೀಕರಣದ ಯತ್ನಗಳು ಸ್ಥಗಿತವಾಗುವ ಯಾವ ಲಕ್ಷಣಗಳೂ ಇಲ್ಲ. ಹಲಾಲ್ ಮಾಂಸದ ವಿಚಾರವಾಗಿ ಅನಗತ್ಯ ವಿವಾದವೊಂದನ್ನು ಸೃಷ್ಟಿಸಲಾಯಿತು. ಹಲಾಲ್ ಮಾಂಸದ ವಿಚಾರದಲ್ಲಿ ಪ್ರಸ್ತಾಪಿಸಲಾಗಿದೆ ಎನ್ನಲಾದ 'ಗಂಭೀರ ಆಕ್ಷೇಪ'ಗಳ ಬಗ್ಗೆ ಗಮನಹರಿಸುವುದಾಗಿ ಬೊಮ್ಮಾಯಿ ಅವರು ಭರವಸೆ ನೀಡಿದರು. ಆದರೆ, ಬಯೋಕಾನ್ ಕಂಪನಿಯ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಅವರು ಧಾರ್ಮಿಕ ಕಂದರ ಹೆಚ್ಚಾಗುತ್ತಿರುವುದನ್ನು ತಡೆಯಬೇಕು ಎಂದು ಬೊಮ್ಮಾಯಿ ಅವರನ್ನು ಬಹಿರಂಗವಾಗಿ ಒತ್ತಾಯಿಸಿದರು. ರಾಜ್ಯದ ಎಲ್ಲರ ಆರ್ಥಿಕ ಬೆಳವಣಿಗೆ ಆಗಬೇಕು ಎಂದು ಆಗ್ರಹಿಸಿದರು. ಆಗ ಬೊಮ್ಮಾಯಿ ಅವರು ಹಿಂದಕ್ಕೆ ಸರಿದು, ಹೊಂದಾಣಿಕೆಯ ನಿಲುವು ತಳೆದರು. ಇದಾದ ನಂತರದಲ್ಲಿ ಧ್ವನಿವರ್ಧಕಗಳ ಮೂಲಕ ಆಜಾನ್ ಕೂಗುವುದರ ಸುತ್ತ ಕೂಡ ವಿವಾದ ಸೃಷ್ಟಿಯಾಗಿದೆ.

ತಮ್ಮ ನೇತೃತ್ವದಲ್ಲಿ ಸರ್ಕಾರವು ದೊಡ್ಡದೇನನ್ನೋ ಸಾಧಿಸಿದೆ ಎಂದು ತೋರಿಸಲು ಬೊಮ್ಮಾಯಿ ಅವರ ಬಳಿ ಏನೂ ಇಲ್ಲ. ಚುನಾವಣೆ ವೇಳೆಗೆ ಏನಾದರೂ ಸಾಧಿಸಬಹುದು ಎಂಬ ವಿಶ್ವಾಸ ಅವರಲ್ಲಿ ಇಲ್ಲವೆನಿಸುತ್ತದೆ. ಜನನಾಯಕನಾಗಿ ಅವರು ಯಡಿಯೂರಪ್ಪ ಅವರ ಮಟ್ಟಕ್ಕೆ ಬರುವುದಿಲ್ಲ. ಬರುವ ಚುನಾವಣೆಯಲ್ಲಿ ಗೆಲ್ಲಲಿಕ್ಕೆ, ಅಧಿಕಾರದಲ್ಲಿ ಉಳಿಯಲಿಕ್ಕೆ ಇರುವ ಅತ್ಯುತ್ತಮ ಮಾರ್ಗ ಧ್ರುವೀಕರಣವನ್ನು ಮುಂದುವರಿಸಿಕೊಂಡು ಹೋಗುವುದು ಎಂದು ಬೊಮ್ಮಾಯಿ ತೀರ್ಮಾನಿಸಿರಬೇಕು.

ಒತ್ತಡಗಳು ಏನೇ ಇದ್ದಿರಬಹುದು, ಮುಂದಿನ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವಂತೆ ಮಾಡಿದರೂ, ಈ ಅಪಾಯಕಾರಿ ಆಟಕ್ಕೆ ತಡೆ ಹಾಕದೆ ಇದ್ದರೆ ಇತಿಹಾಸವು ತಮ್ಮ ಬಗ್ಗೆ ಮೃದು ಧೋರಣೆ ತಾಳುವುದಿಲ್ಲ ಎಂಬುದನ್ನು ಬೊಮ್ಮಾಯಿ ಅರಿಯಬೇಕು. ಕರ್ನಾಟಕಕ್ಕೆ ಇನ್ನಷ್ಟು ಹೆಚ್ಚುಗಾರಿಕೆಗಳನ್ನು ತಂದುಕೊಟ್ಟ ವ್ಯಕ್ತಿಯನ್ನಾಗಿ ಜನ ತಮ್ಮನ್ನು ನೆನಪಿಸಿಕೊಳ್ಳಬೇಕೋ ಅಥವಾ ದ್ವೇಷ, ಧರ್ಮಾಂಧತೆಯು ಕರ್ನಾಟಕದ ಆತ್ಮವನ್ನು ನಾಶ ಮಾಡುತ್ತಿದ್ದಾಗಲೂ ಸುಮ್ಮನೆ ಕುಳಿತಿದ್ದ ವ್ಯಕ್ತಿಯನ್ನಾಗಿ ನೆನಪಿಸಿಕೊಳ್ಳಬೇಕೋ ಎಂಬುದನ್ನು ಮುಖ್ಯಮಂತ್ರಿಯವರು ತೀರ್ಮಾನಿಸಬೇಕು.

ಲೇಖಕ: ಹಿರಿಯ ಪತ್ರಕರ್ತ

ಚುರುಮುರಿ



ಮುಳ್ಳಿನಿಂದ ಮುಳ್ಳು

● ಆನಂದ

ಒಂದಿಷ್ಟು ಮಂದಿ ಕಳ್ಳರನ್ನ ಪೊಲೀಸರಾಗಿ ನೇಮಿಸಿದರೆ ಚಲೊ ಇರ್ತದಲ್ಲಾ ಸಾಹೇಬ್ರೆ? ಎಂದು ಗೆಳೆಯ ಕೇಳಿದಾಗ ನನಗೆ 840 ವೋಲ್ಟ್ ಷಾಕ್ ಹೊಡೆದಂತಾಯಿತು.

ಕುರಿ ಕಾಯೋದಿಕ್ಕೆ ತೋಳಾನ ನೇಮಿಸ್ತಾರೇನೋ? ಎಂದೆ.

ಮತ್ತೆ ಸೆಟ್ ಎ ಥೀಫ್ ಟು ಕ್ಯಾಚ್ ಎ ಥೀಫ್ ಅಂತಾರಲ್ಲ ಸಾರೂ ಎಂದಾಗ ನನಗೆ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬ ಇನ್ನೊಂದು 'ಥಾಟ್ ಫಾರ್ ದಿ ಡೆ' ನೆನಪಾಯಿತು.

ಈಗ್ಯಾಕೆ ನೀನು ಕಳ್ಳರನ್ನ ಪೊಲೀಸರನ್ನಾಗಿ ನೇಮಿಸಲು ಹೊರಟೆ ಎಂದು ಕೇಳಿದೆ.

ಈ ಹರಡ್ತಾ ಹಬ್ಬಿಕೊಳ್ತಾ ಇರೊ ಪಿಎಸ್‌ಐ ಹಗರಣ ನೋಡಿದಾಗ ನನಗೆ ಈ ಐಡಿಯಾ ಹೊಳೆಯಿತು, ಕೆಂಪು ಚಂದನ ಕಳ್ಳತನ ಮಾಡಿದ್ದ ಒಬ್ಬಾತ ಪಿಎಸ್‌ಐ ಟಾಪರ್ ಆಗ್ತಾನಾ ಅಂದರೆ ಅವನದು ಬಹುಮುಖ ಪ್ರತಿಭೆ. ಅಂತಹವನು ಪೊಲೀಸನೇ ಆದರೆ ಇತರ ನಿಜವಾದ ಕಳ್ಳರನ್ನ ಲೀಲಾಜಾಲವಾಗಿ ಹಿಡಿಯಬಹುದಲ್ಲವೆ? ಎಂದು ಕೇಳಿದಾಗ ಅವನ ವಾದದಲ್ಲಿ ಲಾಜಿಕ್ ಇರಬಹುದೆ ಎಂದೆನಿಸಿತು.

ಆದುದರಿಂದ ಈಗಿರುವ ಮಿಸಲಾತಿಯ ಜತೆಗೆ ಇಂತಹವರಿಗೂ ಕೋಟಾ ಕಲ್ಪಿಸಿದರೆ ಪೊಲೀಸರ ಬಲವರ್ಧನೆ ಆಗದೇ ಸಾರೂ ಎಂದು ಕೇಳಿದ.

ನಮ್ಮಿಬ್ಬರ ಈ ಇಂಟಲೆಕ್ಚುಯಲ್ ಡಿಸ್ಕಷನ್ ಕೇಳಿಸಿಕೊಳ್ಳುತ್ತಿದ್ದ ಹೆಂಡತಿ ಮಧ್ಯೆ ಪ್ರವೇಶಿಸಿ ಈಗಾಗಲೇ ಅನೇಕ ಇಂತಹವರು ಪೊಲೀಸರಾಗಿಲ್ಲವೇನ್ರಿ? ಹೊಸದಾಗಿ ನೇಮಕ ಮಾಡಿಕೊಳ್ಳಬೇಕಾ? ಎಂದು ಕೇಳಿದಾಗ ನಾವಿಬ್ಬರೂ ಬೆಚ್ಚಿದೆವು.

ಹೌದ್ರೀ, ಅನೇಕ ಪೊಲೀಸರು ಗಳಿಸಿರುವ ಆಸ್ತಿ, ಕಟ್ಟಿರುವ ಮನೆ ನೋಡಿದಾಗ ಅದು ಕಳ್ಳತನದ ಮಾಲು ಅಂತ ಅನಿಸೊಲ್ಲವೆ? ಬ್ಯಾಂಕಿಗೆ ಜಮಾ ಆಗೊ ಸಂಬಳದಿಂದ ಅದೆಲ್ಲಾ ಮಾಡೋದಿಕ್ಕೆ ಆಗ್ತಿತ್ತೆ? ಎಂದು ಸಪ್ಲಿಮೆಂಟರಿ ಪ್ರಶ್ನೆ ಎಸೆದಳು. ಛೆ ಛೆ ಎಲ್ಲರೂ ಹಾಗಿಲ್ಲ ಮೇಡಂ ಎಂದ ನನ್ನ ಗೆಳೆಯ.

ನಾನೆಲ್ಲಿ ಹಾಗೆಂದೆ. ಕೆಲವರು ಮಾತ್ರ ನೀವು ಕೇಳ್ತಾ ಇರೊ ಕೋಟಾಕ್ಕೆ ಸೇರಿದೋರು. ಆದರೆ ಅವರ ಪ್ರತಿಭೆ ಉಪಯೋಗಕ್ಕೆ ಬರತಾ ಇಲ್ಲ ಎಂದು ಹೇಳಿ ಕಾಫಿ ತರಲು ಹೋದಳು.

ದಿನದ ಟ್ವೀಟ್


ಹಣ ಎಲ್ಲಿಂದ ಬರುತ್ತದೆ?



ಆರ್‌ಬಿಐ ರೆಪೊ ದರ ಹೆಚ್ಚಿಸಿರುವುದರಿಂದ ದೇಶದ ಸರ್ಕಾರಗಳ ಸಾಲದ ಬಿಕ್ಕಟ್ಟು ತೀವ್ರಗೊಳ್ಳಲಿದೆ. ಸರ್ಕಾರಗಳ ಸಾಲದ ಮೊತ್ತವು 2021–22ರಲ್ಲಿ ₹ 205 ಲಕ್ಷ ಕೋಟಿ ಎಂದು ಐಎಂಎಫ್ ಅಂದಾಜಿಸಿದೆ. ರೆಪೊ ದರವನ್ನು ಶೇಕಡ 0.40ರಷ್ಟು ಏರಿಸಿರುವುದರಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೇಲೆ ಹೆಚ್ಚುವರಿಯಾಗಿ ₹ 82 ಸಾವಿರ ಕೋಟಿಯ ಬಡ್ಡಿ ಹೊರೆ ಬೀಳಲಿದೆ. ಈ ಹಣ ಎಲ್ಲಿಂದ ಬರುತ್ತದೆ?

ಕೃಷ್ಣ ಕಾಂತ್, ಪತ್ರಕರ್ತ

ಕಿಡಿನುಡಿ



ಅಕ್ರಮ ನೇಮಕಾತಿ ವಿಚಾರದಲ್ಲಿ ಸಚಿವ ಅಶ್ವತ್ಥನಾರಾಯಣ ಅವರ ಹೆಸರನ್ನು ಅವರ ಸಹೋದ್ಯೋಗಿಗಳೇ ಮಾಧ್ಯಮಗಳಿಗೆ ತೇಲಿ ಬಿಟ್ಟಿದ್ದಾರೆ. ಅಮಿತ್ ಶಾ ಭೇಟಿ ವೇಳೆ ಅಶ್ವತ್ಥನಾರಾಯಣ ಹೆಸರನ್ನು ಬೇಕಂತಲೇ ಎಳೆದು ತಂದು, ಅವರ ತಲೆದಂಡಕ್ಕೆ ಒತ್ತಡ ಹೇರುವುದು ಬಿಜೆಪಿಯ ಕೆಲ ನಾಯಕರ ಉದ್ದೇಶವಾಗಿತ್ತು. ಹೀಗಾಗಿ ಮಾಧ್ಯಮಗಳಿಗೆ ಅವರೇ ಮಾಹಿತಿ ನೀಡಿದ್ದಾರೆ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 5-5-1997

● ರಿಯಾಯಿತಿಗಳಲ್ಲಿ ಭಾರಿ ಖೋತಾ ಸಂಭವ

ನವದೆಹಲಿ, ಮೇ 4 (ಪಿಟಿಐ)– ದೇಶದ ಆದಾಯದಲ್ಲಿರುವ ಕೊರತೆ ಪ್ರಮಾಣವನ್ನು ಕಡಿಮೆ ಮಾಡುವ ಸಲುವಾಗಿ ಅರ್ಹತೆ ಇಲ್ಲದ ಕ್ಷೇತ್ರಗಳು ಅಥವಾ ಸರಕುಗಳಿಂದ ಕನಿಷ್ಠ ಶೇ 50 ರಷ್ಟು ರಿಯಾಯಿತಿಗಳನ್ನು ಖೋತಾ ಮಾಡಲು ಪ್ರಯತ್ನಿಸಲಾಗುವುದು ಎಂದು ತಿಳಿಸಿರುವ ಕೇಂದ್ರದ ಆರ್ಥಿಕ ಸಚಿವ ಪಿ.ಚಿದಂಬರಂ, ರಿಯಾಯಿತಿಗಳನ್ನು ಕುರಿತಂತೆ ಸರ್ಕಾರ ಶೀಘ್ರದಲ್ಲೇ 'ಶ್ವೇತಪತ್ರ' ಬಿಡುಗಡೆ ಮಾಡಲಿದೆ ಎಂದರು.

ಸಂಯುಕ್ತ ರಂಗ ಸರ್ಕಾರದಲ್ಲಿ 2ನೇ ಬಾರಿಗೆ ಹಣಕಾಸು ಸಚಿವರಾಗಿ ನೇಮಕವಾದ ನಂತರ, ಸಮ್ಮೇಳನವೊಂದರಲ್ಲಿ ಮಾತನಾಡಿದ ಚಿದಂಬರಂ, ಭಾರತದಲ್ಲಿನ ರಿಯಾಯಿತಿಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾಗುತ್ತಿರುವ ಶ್ವೇತಪತ್ರ ಮುಕ್ತಾಯದ ಹಂತದಲ್ಲಿದ್ದು, ಲೋಕಸಭಾ ಸದಸ್ಯರಿಗೆ ವಿತರಿಸಲಾಗುವುದು. ಕೆಲವೇ ದಿನಗಳಲ್ಲಿ ಇದರ ಬಿಡುಗಡೆ ಆಗಲಿದ್ದು, ಈ ಬಗ್ಗೆ ರಾಷ್ಟ್ರೀಯ ಚರ್ಚೆಗೆ ಆಹ್ವಾನಿಸಲಾಗುವುದು ಎಂದು ತಿಳಿಸಿದರು.

● ರಾಜ್ಯ ದಳ ಅಧ್ಯಕ್ಷರ ಸರ್ವಾನುಮತದ ಆಯ್ಕೆಗೆ ಪ್ರಯತ್ನ

ಬೆಂಗಳೂರು, ಮೇ 4– ಜನತಾದಳ ರಾಜ್ಯ ಘಟಕದ ಅಧ್ಯಕ್ಷರ ಸರ್ವಾನುಮತದ ಆಯ್ಕೆಗೆ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಸಿದ್ಧತೆ ನಡೆಸಿದ್ದಾರೆ. ಈ ಸಂಬಂಧ 10 ರಂದು ಚುನಾವಣೆ ನಡೆಯಲಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 5-5-1972

● ರಾಜ್ಯದ ಹೆಸರು ಬದಲಾಯಿಸಲು ಸಂಪುಟದ ನಿರ್ಧಾರ

ಬೆಂಗಳೂರು, ಮೇ 4– ಹದಿನಾರು ವರ್ಷಗಳ ಹಿಂದೆ ಕನ್ನಡ ನಾಡು ಉದಯವಾದಾಗ ಕೈಗೂಡದಿದ್ದ ಜನತೆಯ ಹಂಬಲದಂತೆ ರಾಜ್ಯದ ಹೆಸರು ಬದಲಾವಣೆಯಾಗಲಿದೆ.

ರಾಜ್ಯದ ಹೆಸರನ್ನು ಬದಲಾಯಿಸಲು ಇಂದು ನಡೆದ ಮಂತ್ರಿಮಂಡಲದ ಸಭೆ ತೀರ್ಮಾನ ಕೈಗೊಂಡಿತು. ಹೆಸರು ಏನಿರಬೇಕೆಂಬ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲಿಲ್ಲ.

ಕರ್ನಾಟಕ, ಕರ್ಣಾಟಕ, ಕನ್ನಡ ನಾಡು. ಈ ರೀತಿ ಮೂರು ಹೆಸರುಗಳು ಸೂಚಿತವಾಗಿವೆ.

● ಕೆ.ಎಚ್.ರಂಗನಾಥ್ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ

ಬೆಂಗಳೂರು, ಮೇ 4– ಎರಡೂವರೆ ವರ್ಷಗಳ ಹಿಂದೆ ಕಾಂಗ್ರೆಸ್ ಒಡೆದಾಗಿನಿಂದ ಆಡಳಿತ ಕಾಂಗ್ರೆಸ್ಸಿನ ನಾಯಕತ್ವ ವಹಿಸಿ ಒಂದು ಭಾಗದ ಕರ್ತವ್ಯವನ್ನು ಮುಗಿಸಿರುವ ಶ್ರೀ ಡಿ.ದೇವರಾಜ ಅರಸು ಅವರಿಂದ 'ಹಿಂದುಳಿದ ವರ್ಗದ ಸಂಕೇತ'ವಾದ ಶ್ರೀ ಕೆ.ಎಚ್.ರಂಗನಾಥ್ ಅವರು ಇಂದು ಪ್ರದೇಶ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದರು.

ಶ್ರೀ ರಂಗನಾಥ್ ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದಾಗ ಅಭಿಮಾನಿಗಳು ಸಂತಸದಿಂದ ಪಟಾಕಿಗಳನ್ನು ಹಾರಿಸಿದರು.

ಸಂಗತ

ಕೌಶಲ ಕರಗತಗೊಳಿಸುವತ್ತ ಚಿತ್ತ

ಮಕ್ಕಳು ತಮ್ಮ ನೈಜ ಸಾಮರ್ಥ್ಯ ಹಾಗೂ ಕೌಶಲಗಳನ್ನು ಅರಿತುಕೊಳ್ಳಲು ಸೂಕ್ತ ಅವಕಾಶಗಳನ್ನು ಒದಗಿಸಬೇಕಾದುದು ಇಂದಿನ ಅಗತ್ಯ

● ಡಾ. ಎಚ್.ಬಿ.ಚಂದ್ರಶೇಖರ್

ಮಕ್ಕಳಲ್ಲಿ ಕನಸುಗಳನ್ನು ತುಂಬಬೇಕು, ಅವರ ಕನಸುಗಳಿಗೆ ಬಣ್ಣ ಹಚ್ಚಬೇಕು ಎಂಬ ಮಾತುಗಳನ್ನು ಅನೇಕ ಸಂದರ್ಭಗಳಲ್ಲಿ ನಾವು ಉಲ್ಲೇಖಿಸುತ್ತೇವೆ. ಮಕ್ಕಳಿಗೆ ಎಳವೆಯಲ್ಲೇ 'ನೀವೇನಾಗಬೇಕೆಂದು ಬಯಸುವಿರಿ?', 'ನಿಮ್ಮ ಜೀವನದ ಗುರಿ ಏನು?', 'ಯಾವ ವೃತ್ತಿ ಅಂದರೆ ಇಷ್ಟ?' ಎಂಬಂಥ ಪ್ರಶ್ನೆಗಳನ್ನು ಕೇಳುತ್ತಾ ಅವರನ್ನು ಸಂವಾದದಲ್ಲಿ ತೊಡಗಿಸಿಕೊಳ್ಳುವುದು ಹಾಗೂ ವಿವಿಧ ವೃತ್ತಿಗಳು ಮತ್ತು ಅವುಗಳಿಗೆ ಅಗತ್ಯವಾದ ಶೈಕ್ಷಣಿಕ ಪದವಿಗಳ ಕುರಿತು ಪರಿಚಯ ಮಾಡಿಸುವುದು ಮಕ್ಕಳಲ್ಲಿ ಕನಸುಗಳನ್ನು ತುಂಬುವ ಪ್ರಮುಖ ವಿಧಾನವಾಗಿದೆ.

ಆರು, ಏಳನೇ ತರಗತಿಯಲ್ಲಿದ್ದಾಗಲೇ 'ನಾನೇನಾಗಬೇಕು?' ಎಂಬ ಆಲೋಚನೆಯ ಬೀಜವನ್ನು ಮಕ್ಕಳ ತಲೆಯಲ್ಲಿ ಹಾಕಿ, ಮಕ್ಕಳೊಂದಿಗೆ ಶಿಕ್ಷಕರು ಸಂವಾದ ಮಾಡುತ್ತಾ ಅವರಲ್ಲಿ ಉತ್ಸಾಹ, ಪ್ರೇರಣೆ ತುಂಬುತ್ತಿದ್ದಲ್ಲಿ, ಹತ್ತು, ಹನ್ನೆರಡನೇ ತರಗತಿಯ ವೇಳೆಗೆ ಈ ಬೀಜವು ಗಿಡ, ಮರವಾಗಿ ಬೆಳೆಯತೊಡಗುತ್ತದೆ. ಚಿಕ್ಕವರಿದ್ದಾಗ ಮಕ್ಕಳು ಹಾಕಿಕೊಳ್ಳುವ ಗುರಿಗಳು ದೊಡ್ಡವರಾದ ಮೇಲೆ ಬದಲಾಗಲೂಬಹುದು. ಆದರೆ ಮಕ್ಕಳ ಬೆಳವಣಿಗೆಯ ಹಾದಿಯಲ್ಲಿ ಸಿಗುವ ಅನುಭವಗಳು ಹಾಗೂ ದೊರೆಯುವ ಮಾಹಿತಿ, ಪ್ರೇರಣೆಗಳು ಅವರು ತಮ್ಮ ಭವಿಷ್ಯದ ಹಾದಿಯನ್ನು ಕಂಡುಕೊಳ್ಳುವಷ್ಟು ಸಮರ್ಥರನ್ನಾಗಿ ಮಾಡುತ್ತವೆ.

ತಮಗಿರುವ ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ಪೂರಕವಾದ ಕೌಶಲ ಅಥವಾ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ಮುಂದುವರಿದಲ್ಲಿ ಅವರು ಆನಂದದಿಂದ ಕೆಲಸ ಮಾಡುತ್ತಾ ಹೋಗುತ್ತಾರೆ.

ಮಕ್ಕಳು ತಮ್ಮ ನೈಜ ಸಾಮರ್ಥ್ಯ ಹಾಗೂ ಕೌಶಲಗಳನ್ನು ಅರಿತುಕೊಳ್ಳಲು ಸೂಕ್ತ ಅವಕಾಶಗಳನ್ನು ಶಾಲೆಗಳು ಒದಗಿಸಬೇಕು. ಈ ದಿಸೆಯಲ್ಲಿ ಶಿಕ್ಷಕರು ಸ್ವಪ್ರೇರಿತರಾಗಿ ಕಾರ್ಯನಿರ್ವಹಿಸಬೇಕು. ಆದರೆ ಈ ಕುರಿತ ಮಾಹಿತಿ, ಆಸಕ್ತಿ, ತಜ್ಞತೆ, ಪ್ರೇರಣೆ ಎಲ್ಲಾ ಶಿಕ್ಷಕರಿಗೆ ಇರುವುದಿಲ್ಲ. ಅದನ್ನು ಅವರಿಗೆ ನೀಡಬೇಕು. ಇದಕ್ಕಾಗಿ ಸೂಕ್ತ ತಯಾರಿ, ಯೋಜನೆಯ ಅವಶ್ಯಕತೆ ಇದೆ.

ಕೌಶಲ ಮತ್ತು ಉದ್ಯಮಶೀಲತೆಗೆ ಸಂಬಂಧಿಸಿದಂತೆ ಕಾರ್ಯಪಡೆಯು ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ಸಿದ್ಧಪಡಿಸಿದ ವರದಿಯಲ್ಲಿ ಸ್ಪಷ್ಟವಾದ ಶಿಫಾರಸುಗಳನ್ನು ಮಾಡಲಾಗಿದೆ. ದೇಶದ ಜನಸಂಖ್ಯೆಯ ಶೇ 55ರಷ್ಟು ಮಂದಿ 20ರಿಂದ 59ರ ವಯೋಮಾನದವರಿದ್ದು, ದುಡಿಯುವ ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ವಯೋಮಾನದ ಜನರು ಅಗತ್ಯವಾದ ಕೌಶಲಗಳನ್ನು ಕರಗತ ಮಾಡಿಕೊಂಡು ಸೂಕ್ತವಾದ ಉದ್ಯೋಗಗಳಲ್ಲಿ ನಿರತರಾದಲ್ಲಿ, ದೇಶದ ಆರ್ಥಿಕ ಬೆಳವಣಿಗೆಗೆ ಪುಷ್ಟಿ ದೊರೆಯುತ್ತದೆ. ರಾಜ್ಯದಲ್ಲಿ 2030ರೊಳಗೆ ಕೌಶಲ ತರಬೇತಿ ಹೊಂದಬೇಕಾದ 35 ವಯೋಮಾನದೊಳಗಿನ ಯುವಕ– ಯುವತಿಯರ ಸಂಖ್ಯೆ 1.88 ಕೋಟಿ ಎಂದು ಕಾರ್ಯಪಡೆ ಅಂದಾಜಿಸಿದೆ.

ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯವಾದ ಡಿಜಿಟಲ್ ಕೌಶಲ ಮತ್ತು ಉದ್ಯಮಶೀಲತೆಯ ಮನೋಭಾವ ಬೆಳೆಸಲು ಶಿಕ್ಷಣ ಇಲಾಖೆಯ ಡಿ.ಎಸ್.ಇ.ಆರ್.ಟಿ.ಯು ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ 9ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಉದ್ಯಮಶೀಲ ಮನೋಭಾವ ಬೆಳೆಸುವ ಕುರಿತಾದ ಪಠ್ಯಕ್ರಮವನ್ನು ರೂಪಿಸಿ, ವಾರಕ್ಕೆ ಒಂದು ಅವಧಿಯಲ್ಲಿ ಕಡ್ಡಾಯವಾಗಿ ಕಲಿಸಲು ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ದೆಹಲಿಯ ಸರ್ಕಾರಿ ಶಾಲೆಗಳಲ್ಲಿ 2019ರಿಂದ ಜಾರಿಯಲ್ಲಿರುವ 'ಬ್ಯುಸಿನೆಸ್ ಬ್ಲಾಸ್ಟರ್ಸ್' ಕಾರ್ಯಕ್ರಮದ ಮಾದರಿಯನ್ನು ಅಳವಡಿಸಿಕೊಳ್ಳಲು ಆಲೋಚಿಸಲಾಗಿದೆ.

ರಾಜ್ಯದ ಐಟಿಐಗಳಿಂದ ವಿವಿಧ ವೃತ್ತಿಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಸುಮಾರು 70,000 ವಿದ್ಯಾರ್ಥಿಗಳು ತೇರ್ಗಡೆ ಹೊಂದುತ್ತಿದ್ದು, ಇವರು ಸಣ್ಣ ಉದ್ದಿಮೆದಾರರಾಗಿ ಮಾರ್ಪಡಲು ಅಗತ್ಯವಾದ ಪಠ್ಯಕ್ರಮವನ್ನು ಅಳವಡಿಸಲು ಮುಂದಾಗಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಮಾಜದಲ್ಲಿರುವ ವಿವಿಧ ವೃತ್ತಿಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿ, ಮಾರ್ಗದರ್ಶನ ಮಾಡಲು ಪ್ರತೀ ಶಾಲೆ, ಕಾಲೇಜಿನಲ್ಲಿ ಒಂದು ಘಟಕ ತೆರೆದು, ಆಸಕ್ತ ಶಿಕ್ಷಕರನ್ನು ಈ ದಿಸೆಯಲ್ಲಿ ಸಜ್ಜುಗೊಳಿಸುವ ಚಿಂತನೆ ಇದೆ. ಪ್ರತೀ ವಿದ್ಯಾರ್ಥಿಗೆ ಅಗತ್ಯವಾಗುವ ಕೌಶಲಗಳು, ಕಲಿಕೆ ಮತ್ತು ಅಭಿವೃದ್ಧಿಯ ಪರ್ಯಾಯಗಳು ಹಾಗೂ ಕೈಗೊಳ್ಳಬಹುದಾದ ವೃತ್ತಿ ಅವಕಾಶಗಳಂತಹ ವಿವರಗಳನ್ನು ಹೊಂದಿರುವ ವೃತ್ತಿ ವರದಿಯ ಕಾರ್ಡ್ ಅನ್ನು ಅಭಿವೃದ್ಧಿಪಡಿಸಿ, ಉಪಯೋಗಿಸುವ ಮಹತ್ವಾಕಾಂಕ್ಷೆಯ ಗುರಿ ಹೊಂದಲಾಗಿದೆ.



ಕಾಲೇಜು ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಕಾರ್ಯಕ್ರಮಗಳ ಜೊತೆ ಜಿಲ್ಲೆಗಳಲ್ಲಿ ಸ್ಥಳೀಯ ವೃತ್ತಿ ಅವಕಾಶಗಳನ್ನು ಸೃಜಿಸಲು ಅಗತ್ಯವಾದ ಕೇಂದ್ರಗಳನ್ನು ರೂಪಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲು ಕಾರ್ಯಪಡೆ ಶಿಫಾರಸು ಮಾಡಿದೆ. ಕೃಷಿ ಮತ್ತು ಕೃಷಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಉದ್ಯಮಗಳನ್ನು ಉತ್ತೇಜಿಸುವ ಅಂಶವು ಮಹತ್ವದ್ದಾಗಿದ್ದು, ದೇಶದ ಕೃಷಿ ಕ್ಷೇತ್ರಕ್ಕೆ ಯುವಜನರನ್ನು ಸೆಳೆದಲ್ಲಿ ಭವಿಷ್ಯದಲ್ಲಿ ಆಹಾರದ ಕೊರತೆ ಕಾಡದು.

ಶಾಲಾ ಕಾಲೇಜುಗಳ ಪಠ್ಯಕ್ರಮ, ಬೋಧನಾ ಕಲಿಕಾ ಪದ್ಧತಿಗಳನ್ನು ಅನುಭವ ಕೇಂದ್ರಿತವಾಗಿಸಿ, ವೃತ್ತಿ ಮತ್ತು ತಂತ್ರಜ್ಞಾನದ ಜೊತೆ ಬೆಸೆಯುವಂತೆ ಶಿಕ್ಷಣ ಪದ್ಧತಿಯನ್ನು ರೂಪಿಸುವುದು ಈ ದಿಸೆಯಲ್ಲಿ ಅಗತ್ಯವಾದ ಅಂಶವಾಗಿದೆ. ಇದನ್ನು ಸಾಧ್ಯವಾಗಿಸಲು ಎಲ್ಲರೂ ಕೈಜೋಡಿಸುವ ಅವಶ್ಯಕತೆ ಇದೆ. ನಮ್ಮ ಶಿಕ್ಷಣ ಕ್ರಮದಲ್ಲಿ ಮಾಹಿತಿ ಕಲಿಕೆಗೆ ಒತ್ತು ನೀಡಿರುವಂತೆ ಜೊತೆ ಜೊತೆಗೆ ಕೌಶಲ ಕಲಿಕೆಯೂ ಆಗುವಂತೆ ಕ್ರಮ ಕೈಗೊಳ್ಳಬೇಕಾಗಿರುವುದು ಇಂದಿನ ಅಗತ್ಯ.

ವಾಚಕರ ವಾಣಿ

ಬದಲಾವಣೆಯ ಕೂಗು ರವಾನಿಸುವ ಸಂದೇಶ...?

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಕೂಗು ಅಲಾರಂನಂತೆ ಆಗಾಗ ಕೇಳಿಬರುತ್ತದೆ. ಕೆಲ ದಿನಗಳ ಮಟ್ಟಿಗೆ ಸ್ತಬ್ಧವಾಗಿದ್ದ ಈ ಧ್ವನಿ ಇತ್ತೀಚೆಗೆ ಮತ್ತೆ ಜೋರು ಪಡೆದಿದೆ. ರಾಜ್ಯಕ್ಕೆ ಅಮಿತ್ ಶಾ ಭೇಟಿ ನೀಡಿದ್ದಕ್ಕೂ ಬದಲಾವಣೆಯ ಕೂಗಿಗೂ ತಳುಕು ಹಾಕಿ ಜನರು ಮಾತನಾಡುತ್ತಿದ್ದಾರೆ. ಈ ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗಲೂ ಇದೇ ರೀತಿಯ ಮಾತುಗಳು ಹರಿದಾಡುತ್ತಿದ್ದವು.

ಪದೇ ಪದೇ ನಾಯಕತ್ವ ಬದಲಾವಣೆಯಿಂದ ಜನವರ್ಗಗಳಿಗೆ ಕೆಟ್ಟ ಸಂದೇಶ ರವಾನೆಯಾಗುತ್ತದೆ. ಬೇರೆ ರಾಜ್ಯಗಳಲ್ಲಿ ಮಾಡಿದಂತಹ ರಾಜಕೀಯ ಪ್ರಯೋಗಗಳನ್ನು ಕರ್ನಾಟಕದಂತಹ ರಾಜ್ಯದಲ್ಲಿ ಜಾರಿಗೆ ತರುವುದು ಕಲ್ಪಿಸಿಕೊಂಡಷ್ಟು ಸುಲಭದ ವಿಷಯವಲ್ಲ. ಬಿಜೆಪಿಗೆ ದಕ್ಷಿಣ ಭಾರತದಲ್ಲಿ ಗಟ್ಟಿ ನೆಲೆ ಇರುವುದು ಕರ್ನಾಟಕದಲ್ಲಿ ಮಾತ್ರ. ಆದ್ದರಿಂದ ಪರಿಣಾಮಗಳ ಬಗೆಗೆ ಯೋಚಿಸಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಚುನಾವಣೆ ಹತ್ತಿರವಾಗುತ್ತಿರುವ ಸಂದರ್ಭದಲ್ಲಿ ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಹೇಳಿಕೆಗಳು ಪಕ್ಷಕ್ಕೆ ಒಳಿತನ್ನು ಮಾಡಲಾರವು. ಬದಲಾವಣೆಯ ಸುದ್ದಿ ಸುಳ್ಳಾಗಿದ್ದರೆ ಅದನ್ನು ಹಬ್ಬಿಸಿದ ಪಕ್ಷದ ನಾಯಕರ ವಿರುದ್ಧ ವರಿಷ್ಠರು ಕ್ರಮ ಕೈಗೊಳ್ಳಬೇಕು.

ಮಣಿಕಂಠ ಪಾ. ಹಿರೇಮಠ, ಹಂಪಿ

ಜನೌಷಧಿ ಕೇಂದ್ರ: ಸಂಖ್ಯೆ ಹೆಚ್ಚಿಸುವುದು ಅಗತ್ಯ

ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳಲ್ಲಿ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಔಷಧಿಗಳು ಲಭ್ಯವಿದ್ದು, ಜನಸಾಮಾನ್ಯರಿಗೆ ಹೆಚ್ಚಿನ ಉಪಯೋಗವಾಗಿದೆ. ಜನೌಷಧಿ ಯೋಜನೆಯು 2008ರಲ್ಲಿ ಜಾರಿಗೆ ಬಂತು. ಆ ಬಳಿಕ ಮರು ನಾಮಕರಣ ನಡೆಯಿತು. ಯೋಜನೆ ಪ್ರಾರಂಭವಾಗಿ ಇಷ್ಟು ವರ್ಷಗಳಾದರೂ ಇಡೀ ದೇಶದಲ್ಲಿ ಬರೀ 9,000 ಜನೌಷಧಿ ಕೇಂದ್ರಗಳಿವೆ. ಸಮಾಧಾನಕರ ಸಂಗತಿಯೆಂದರೆ ಇದರಲ್ಲಿ ನಮ್ಮ ರಾಜ್ಯದಲ್ಲಿಯೇ ಸುಮಾರು 950 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳ ಸಂಖ್ಯೆಯನ್ನು ಆದ್ಯತೆಯ ಮೇಲೆ ಹೆಚ್ಚು ಮಾಡಲು ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ. ಅಲ್ಲದೆ, ಈ ಕೇಂದ್ರಗಳಲ್ಲಿ ಪಶುಔಷಧಿಗಳು ಸಹ ಲಭ್ಯವಿರುವಂತೆ ನೋಡಿಕೊಳ್ಳಬೇಕು. ಸಂಬಂಧಿಸಿದವರು ಈ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.

ಬಹುತೇಕ ಔಷಧಿಗಳ ಪ್ರಮಾಣವು ಶರೀರದ ತೂಕ ಹಾಗೂ ಗಾತ್ರದ ಮೇಲೆ ಅವಲಂಬಿತವಾಗಿರುವುದರಿಂದ ಜಾನುವಾರುಗಳಿಗೆ ಹೆಚ್ಚಿನ ಪ್ರಮಾಣದ ಔಷಧಿಯ ಅವಶ್ಯಕತೆಯಿದೆ. ಆದುದರಿಂದ ಔಷಧಿಗಳ ಮೇಲೆ ಹೆಚ್ಚು ವೆಚ್ಚ ಮಾಡುವುದು ಅನಿವಾರ್ಯವಾಗಿದೆ. ಮಿಶ್ರತಳಿ ಹಸುಗಳು ಪದೇ ಪದೇ ಕಾಯಿಲೆಗೆ ಒಳಗಾಗುವುದರಿಂದ ಸದಾ ಚಿಕಿತ್ಸೆ– ಔಷಧಿಗಳ ಮೊರೆಹೋಗುವುದು ಸಾಮಾನ್ಯ ಸಂಗತಿ. ಪಶು ಆಹಾರದ ಬೆಲೆಯೂ ದಿನೇ ದಿನೇ ದುಬಾರಿ ಆಗುತ್ತಿರುವುದರಿಂದ ಹೈನುಗಾರಿಕೆಯು ಅತ್ಯಂತ ತ್ರಾಸದಾಯಕವಾಗಿದೆ. ಈ ಹಿನ್ನೆಲೆಯಲ್ಲಿ ಕಡಿಮೆ ಬೆಲೆಯಲ್ಲಿ ಪಶು ಔಷಧಿಗಳನ್ನು ಸಹ ಜನೌಷಧಿ ಕೇಂದ್ರಗಳಲ್ಲಿ ಲಭ್ಯವಿರುವಂತೆ ಮಾಡಿದರೆ ಜಾನುವಾರು ಮಾಲೀಕರ ಅದರಲ್ಲೂ ಮಿಶ್ರತಳಿ ಹಸು ಸಾಕಣೆದಾರರ ಕಷ್ಟವನ್ನು ಸ್ವಲ್ಪಮಟ್ಟಿಗಾದರೂ ನಿವಾರಿಸಿದಂತೆ ಆಗುತ್ತದೆ.

ಡಾ.ಟಿ. ಜಯರಾಂ, ಕೋಲಾರ

ವಂಚಕರ ದೂಷಿಸಿ ಪ್ರಯೋಜನವಿಲ್ಲ

ಶಿರಾ ಪಟ್ಟಣದ ನಾಲ್ವರು ಆನ್‌ಲೈನ್ ವಂಚನೆಗೆ ಒಳಗಾಗಿ ₹ 1.50 ಕೋಟಿ ಕಳೆದುಕೊಂಡಿರುವುದು ಬೆಳಕಿಗೆ ಬಂದಿದೆ. ತಮ್ಮ ಕಂಪನಿಯಲ್ಲಿ ₹ 7.50 ಲಕ್ಷ ಹೂಡಿದರೆ 30 ದಿನಗಳಲ್ಲಿ ₹ 56 ಲಕ್ಷ ದೊರಕುತ್ತದೆ ಎಂದು ವಂಚಕರು ನಂಬಿಸಿದ್ದಾರೆ. ಜೊತೆಗೆ ಲಾಭಾಂಶದ ಕಮಿಷನ್ ಹಾಗೂ ಜಿಎಸ್‌ಟಿ ಎಂದು ಮತ್ತೆ ಹಣ ಪೀಕಿದ್ದಾರೆ.

ಈ ಕಾಲದಲ್ಲಿ ಸಾಮಾನ್ಯವಾದ ಯಾವುದೇ ವ್ಯಾಪಾರ ವಹಿವಾಟಿನಲ್ಲಿ ತೊಡಗಿಸಿದ ಮೂಲಧನಕ್ಕೆ ಶೇಕಡ 10ರಿಂದ 20ರಷ್ಟು ಲಾಭ ಬಂದರೆ ಅದೇ ಪುಣ್ಯ. ಅಂತಹದ್ದರಲ್ಲಿ ಮೂಲಧನದ ಹಲವು ಪಟ್ಟು ಲಾಭಾಂಶ ಕೊಡುತ್ತೇವೆ ಎಂದರೆ ಅವರು ನಿಸ್ಸಂಶಯವಾಗಿ ವಂಚಕರೇ ಆಗಿರುತ್ತಾರೆ. ಈ ಸರಳ ಸತ್ಯವನ್ನು ಎಲ್ಲರೂ ಮನಗಾಣಬೇಕು. ಮಾಧ್ಯಮಗಳಲ್ಲಿ ಇಂತಹವು ವರದಿ ಆಗುತ್ತಲೇ ಇರುತ್ತವೆ. ಅಂತಹದ್ದರಲ್ಲೂ ಈ ರೀತಿಯ ವಂಚಕರನ್ನು ನಂಬುತ್ತಾರೆ ಎಂದರೆ ಅದು ಮನುಜರ ದುರಾಸೆ ಅಷ್ಟೆ. ದುರಾಸೆಯೇ ದುಃಖಕ್ಕೆ ಮೂಲ. ನಾವು ಎಚ್ಚೆತ್ತುಕೊಳ್ಳಬೇಕೇ ಹೊರತು ವಂಚಕರನ್ನು ದೂಷಿಸಿ ಫಲವಿಲ್ಲ. ಇನ್ನಾದರೂ ಅತಿ ಆಸೆಯ ಪ್ರವೃತ್ತಿಯಿಂದ ಜನ ಹೊರಬರಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ನಿರಾಸೆ ಹೊಂದಲು ಕಾರಣವಿಲ್ಲ!

ಎಕ್ಸ್‌ಟ್ರಾ ರಿವಾರ್ಡ್ ಕಾರ್ಡ್ ಹೊಂದಿರುವ ಗ್ರಾಹಕರಿಗೆ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನವರು ಪ್ರತೀ ಲೀಟರ್ ಇಂಧನ ಖರೀದಿಯ ಮೇಲೆ ರಿವಾರ್ಡ್ ಪಾಯಿಂಟ್ ಕೊಡುತ್ತಾರೆ. ಗಳಿಸಿದ ಪಾಯಿಂಟ್‌ಗಳನ್ನು ಮರಳಿಸಿ ಇಂಧನ ಪಡೆಯುವ ಯೋಜನೆಯೊಂದು ಹಲವಾರು ವರ್ಷಗಳಿಂದ ಜಾರಿಯಲ್ಲಿದೆ. ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಈ ಸೇವೆ ಲಭ್ಯವಿರಲಿಲ್ಲ. ಸಂಬಂಧಿತ ಅಧಿಕಾರಿಗಳಿಗೆ ಪದೇ ಪದೇ ದೂರು ನೀಡಿ, ಬೇಸತ್ತಿದ್ದ ನಾನು ಏಪ್ರಿಲ್ 30ರಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರದೀಪ್ ಸಿಂಗ್ ಪುರಿ ಅವರಿಗೆ ಮನವಿ ಸಲ್ಲಿಸಿ, ಈ ಸಮಸ್ಯೆ ಪರಿಹರಿಸಲು ಕೋರಿದ್ದೆ. ಮೇ 4 ರಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಉನ್ನತ ಅಧಿಕಾರಿಯೊಬ್ಬರು ಕರೆ ಮಾಡಿ, ನನ್ನ ತೊಂದರೆಯನ್ನು ಆಲಿಸಿ, 'ದಯವಿಟ್ಟು, ನನ್ನ ಈ ಸಂಖ್ಯೆಯನ್ನು ಸೇವ್ ಮಾಡಿಟ್ಟುಕೊಂಡು, ಏನಾದರೂ ಸಮಸ್ಯೆ ಇದ್ದರೆ, ನೇರವಾಗಿ ನನಗೇ ಕರೆ ಮಾಡಿ, ನಾನು ಪರಿಹರಿಸುತ್ತೇನೆ. ದಯಮಾಡಿ ಮಿನಿಸ್ಟರ್ ಸರ್‌ಗೆ ಪತ್ರ ಬರೆಯಬೇಡಿ' ಎಂದು ವಿನಂತಿಸಿದರು!

ವ್ಯವಸ್ಥೆಯೇ ಕೆಟ್ಟು ಹೋಗಿದೆ, ನಮ್ಮ ದೇಶವನ್ನು ಯಾರೂ ಸುಧಾರಿಸಲು ಸಾಧ್ಯವಿಲ್ಲ ಎಂದು ಗೊಣಗುತ್ತಿದ್ದ ನಮಗೆ ನಿಜಕ್ಕೂ ಇದು ಆಶ್ಚರ್ಯಕರ ಸಂಗತಿ! ಒಬ್ಬ ಸಾಮಾನ್ಯ ನಾಗರಿಕನ, ಅತ್ಯಂತ ಸಣ್ಣ ಸಮಸ್ಯೆಯೊಂದಕ್ಕೆ, ಭಾರತ ಸರ್ಕಾರದ ಸಂಪುಟ ದರ್ಜೆಯ ಸಚಿವರೊಬ್ಬರು ಕೇವಲ 4 ದಿನಗಳಲ್ಲಿ ಸ್ಪಂದಿಸುತ್ತಾರೆ, ಸಮಸ್ಯೆಯನ್ನು ಕ್ಷಿಪ್ರವಾಗಿ ಬಗೆಹರಿಸುತ್ತಾರೆ ಎಂದರೆ ನಾವು ನಿರಾಶರಾಗುವುದಕ್ಕೆ ಕಾರಣವಿಲ್ಲ ಎನಿಸುತ್ತದೆ. ಕೆಂಪುಪಟ್ಟಿಯ ವರ್ತುಲದಲ್ಲಿ ಸಿಲುಕಿ ನರಳುತ್ತಿರುವ ನಾಗರಿಕರಿಗೆ ಇಂತಹ ಕೆಲವು ಪ್ರಸಂಗಗಳು ಚೇತೋಹಾರಿಯಾಗುತ್ತವೆ, ಬದುಕಿನಲ್ಲಿ ಭರವಸೆ ಮೂಡಿಸುತ್ತವೆ.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

2020 ದೇಶದಲ್ಲಿ ಸಂಭವಿಸಿದ ಸಾವುಗಳೆಷ್ಟು?

ದೇಶದಲ್ಲಿ ಸಂಭವಿಸಿದ ಕೋವಿಡ್ ಸಾವಿನ ನೈಜ ದತ್ತಾಂಶವನ್ನು ಸರ್ಕಾರ ಮರೆಮಾಚಿದೆ ಎಂದು ಈ ಹಿಂದೆ ವಿರೋಧ ಪಕ್ಷಗಳು, ಕೆಲವು ಅಂತರರಾಷ್ಟ್ರೀಯ ಮಟ್ಟದ ಅಧ್ಯಯನಗಳು ಹೇಳಿದ್ದವು. ಆದರೆ, ಅದನ್ನು ಕೇಂದ್ರ ಸರ್ಕಾರ ನಿರಾಕರಿಸಿತ್ತು. ದೇಶಕ್ಕೆ ಕೋವಿಡ್ ಕಾಲಿಟ್ಟ ವರ್ಷವಾದ 2020ರಲ್ಲಿ ಆದ ಮರಣ ನೋಂದಣಿಗಳಿಗೆ ಸಂಬಂಧಿಸಿದ ವರದಿಯನ್ನು ಕೇಂದ್ರ ಸರ್ಕಾರ ಮಂಗಳವಾರವಷ್ಟೇ ಬಿಡುಗಡೆ ಮಾಡಿದೆ. 2019ಕ್ಕೆ ಹೋಲಿಸಿದರೆ, 2020ರಲ್ಲಿ ಮರಣ ನೋಂದಣಿಯಲ್ಲಿ 4.74 ಲಕ್ಷದಷ್ಟು ಏರಿಕೆಯಾಗಿದೆ. ಇದು ಕೋವಿಡ್‌ಗೆ ಸಂಬಂಧಿಸಿದ ಸಾವಿನ ಪ್ರಕರಣಗಳಿಂದ ಆದ ಏರಿಕೆ ಎಂದು ವಿಶ್ಲೇಷಿಸಲಾಗುತ್ತಿದೆ. ಸರ್ಕಾರ ಈ ವಿಶ್ಲೇಷಣೆಯನ್ನು ಮತ್ತೆ ನಿರಾಕರಿಸಿದೆ. ಆದರೆ, ಈಗ ಬಿಡುಗಡೆಯಾಗಿರುವ ವರದಿಗಳಲ್ಲಿ ಮಹತ್ವದ ಕೆಲವು ದತ್ತಾಂಶಗಳನ್ನು ಕೈಬಿಡಲಾಗಿದೆ


• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.


ದೇಶದಲ್ಲಿ 2020ರಲ್ಲಿ ನೋಂದಣಿಯಾದ ಮರಣ ಸಂಖ್ಯೆಗೆ ಸಂಬಂಧಿಸಿದ ವರದಿಯನ್ನು 'ನಾಗರಿಕ ನೋಂದಣಿ ವ್ಯವಸ್ಥೆ' (ಸಿಆರ್‌ಎಸ್) ಬಿಡುಗಡೆ ಮಾಡಿದೆ. ಈ ವರದಿಯ ಪ್ರಕಾರ 2020ರಲ್ಲಿ 81.11 ಲಕ್ಷ ಮರಣ ನೋಂದಣಿಯಾಗಿವೆ. ಸರ್ಕಾರವು ಬಿಡುಗಡೆ ಮಾಡಿರುವ ಈ ವರದಿಯಲ್ಲಿ ಹಲವು ಮಹತ್ವದ ಅಂಶಗಳನ್ನು ಕೈಬಿಡಲಾಗಿದೆ. ದೇಶದಲ್ಲಿ ಪ್ರತಿ ವರ್ಷ ಸಂಭವಿಸಿದ ಸಾವಿನಲ್ಲಿ ನೋಂದಣಿಯಾದ ಸಾವಿನ ಶೇಕಡಾವಾರು ಪ್ರಮಾಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಾಗರಿಕ ನೋಂದಣಿ ವ್ಯವಸ್ಥೆಯ ವಾರ್ಷಿಕ ವರದಿಗಳಲ್ಲಿ ಈವರೆಗೆ ನೀಡಲಾಗುತ್ತಿತ್ತು. 1989ರಿಂದ 2019ರವರೆಗಿನ ಎಲ್ಲಾ ವಾರ್ಷಿಕ ವರದಿಗಳಲ್ಲಿ ಈ ಮಾಹಿತಿ ನೀಡಲಾಗಿದೆ. ಆದರೆ 2020ರಲ್ಲಿ ಈ ಮಾಹಿತಿಯನ್ನು ಕೈಬಿಡಲಾಗಿದೆ.

ಈ ವರದಿಗಳಲ್ಲಿ ನೋಂದಣಿಯಾದ ಮರಣ ಸಂಖ್ಯೆಯ ಮಾಹಿತಿ ನೀಡಲಾಗುತ್ತದೆ. ಜತೆಗೆ ಮರಣ ನೋಂದಣಿಯ ಶೇಕಡಾವಾರು ಪ್ರಮಾಣವನ್ನು ನೀಡಲಾಗುತ್ತದೆ. ಈ ಎರಡೂ ದತ್ತಾಂಶಗಳನ್ನು ಆಧರಿಸಿ ದೇಶದಲ್ಲಿ ಆ ವರ್ಷದಲ್ಲಿ ಸಂಭವಿಸಿದ ಒಟ್ಟು ಸಾವನ್ನು ಲೆಕ್ಕ ಹಾಕಲಾಗುತ್ತದೆ. ಉದಾಹರಣೆಗೆ, 2019ರಲ್ಲಿ ದೇಶದಾದ್ಯಂತ 76.41 ಲಕ್ಷ ಮರಣ ನೋಂದಣಿಯಾಗಿವೆ. 2019ರಲ್ಲಿ ನೋಂದಣಿಯಾದ ಮರಣ ಪ್ರಮಾಣ ಶೇ 92ರಷ್ಟು ಎಂದು ವರದಿಯ ದತ್ತಾಂಶ ಹೇಳುತ್ತದೆ. ಈ ಪ್ರಕಾರ 2019ರಲ್ಲಿ ಶೇ 8ರಷ್ಟು ಮರಣ ನೋಂದಣಿಯಾಗಿಲ್ಲ. ನೋಂದಣಿಯಾದ 76.41 ಲಕ್ಷ ಮರಣಕ್ಕೆ, ಈ ಶೇ 8ರಷ್ಟು ಪ್ರಕರಣಗಳನ್ನು ಸೇರಿಸಿದರೆ ದೇಶದಲ್ಲಿ ಸಂಭವಿಸಿದ ಒಟ್ಟು ಸಾವಿನ ಸಂಖ್ಯೆ 83 ಲಕ್ಷವಾಗುತ್ತದೆ.

2020ರ ವರದಿಯಲ್ಲಿ ನೋಂದಣಿಯಾದ ಮರಣ ಸಂಖ್ಯೆಯನ್ನು ಮಾತ್ರ ನೀಡಲಾಗಿದೆ. ಆ ವರ್ಷದಲ್ಲಿ ನೋಂದಣಿಯಾದ ಮರಣದ ಶೇಕಡಾವಾರು ಪ್ರಮಾಣವನ್ನು ನೀಡಿಲ್ಲ. ಇದರಿಂದ ಆ ವರ್ಷದಲ್ಲಿ ಎಷ್ಟು ಸಾವು ಸಂಭವಿಸಿವೆ ಎಂಬುದನ್ನು ಅಂದಾಜಿಸಲು ಸಾಧ್ಯವಿಲ್ಲ. ಹೀಗಾಗಿ 2020ರಲ್ಲಿ ದೇಶದಲ್ಲಿ ಸಂಭವಿಸಿದ ಸಾವಿನ ಬಗ್ಗೆ ಪೂರ್ಣ ಚಿತ್ರಣ ಈ ವರದಿಯಲ್ಲಿ ಇಲ್ಲ.







ಮರಣ ಸಂಖ್ಯೆಯಲ್ಲಿ ಏರುಗತಿ


ದೇಶದಲ್ಲಿ ಪ್ರತೀವರ್ಷ ಸಾವನ್ನಪ್ಪುವವರ ನೋಂದಣಿ ಸಂಖ್ಯೆ ಒಂದು ದಶಕದಲ್ಲಿ ಸುಮಾರು 25 ಲಕ್ಷದಷ್ಟು ಏರಿಕೆಯಾಗಿದೆ. 2010ರಲ್ಲಿ 56 ಲಕ್ಷ ಜನರು ವಿವಿಧ ಕಾರಣಗಳಿಂದ ಮೃತಪಟ್ಟಿದ್ದರು. ಇಲ್ಲಿಂದ 10 ವರ್ಷ ಕಳೆಯುವಷ್ಟರಲ್ಲಿ ಅಂದರೆ, 2020ರಲ್ಲಿ ಮೃತರಾದವರ ನೋಂದಣಿಯು 81 ಲಕ್ಷಕ್ಕೆ ತಲುಪಿದೆ. ಗಮನಾರ್ಹ ವಿಚಾರವೆಂದರೆ, 2017ರಿಂದ ನಂತರದ ವರ್ಷಗಳಲ್ಲಿ ದಾಖಲಾದ ಮರಣದಲ್ಲಿ ಸುಮಾರು 17 ಲಕ್ಷದಷ್ಟು ಹೆಚ್ಚಳವಾಗಿದೆ. 2020ರಲ್ಲಿ ಈವರೆಗಿನ ಅತಿಹೆಚ್ಚು ಮರಣ ನೋಂದಣಿಯಾಗಿವೆ. ಆ ವರ್ಷದಲ್ಲಿ ಕೋವಿಡ್–19 ಮೊದಲ ಅಲೆಯು ದೇಶವನ್ನು ಬಾಧಿಸಿತ್ತು ಎಂಬುದು ಗಮನಾರ್ಹ.

ಈ ಹತ್ತು ವರ್ಷಗಳಲ್ಲಿ ಮರಣ ನೋಂದಣಿಯಲ್ಲಿ ಗಣನೀಯವಾಗಿ ಏರಿಕೆಯಾಗಿರುವುದೂ ಸಹ ಸಾವಿನ ಸಂಖ್ಯೆಯಲ್ಲಿ ಏರಿಕೆಯಾಗಲು ಕಾರಣವಾಗಿದೆ. ಇದೇ ಅವಧಿಯಲ್ಲಿ ವೈದ್ಯಕೀಯ ಕ್ಷೇತ್ರವೂ ಸಾಕಷ್ಟು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿದೆ. ವೈದ್ಯಕೀಯ ಚಿಕಿತ್ಸೆ, ಆಸ್ಪತ್ರೆಯಂತಹ ಮೂಲಸೌಕರ್ಯಗಳೂ ಸುಧಾರಿಸಿವೆ. ಆದಾಗ್ಯೂ, ಮರಣ ಪ್ರಮಾಣದಲ್ಲಿ ದೊಡ್ಡ ಮಟ್ಟದ ಏರಿಕೆಯನ್ನು ತಡೆಯಲು ಸಾಧ್ಯವಾಗಿಲ್ಲ ಎಂಬುದನ್ನು ದತ್ತಾಂಶಗಳು ಸೂಚಿಸುತ್ತವೆ.

2011, 2014 ಹಾಗೂ 2016ರಲ್ಲಿ ಮರಣ ನೋಂದಣಿ ಏರಿಕೆಯ ಸಂಖ್ಯೆ ಲಕ್ಷದ ಒಳಗಿದೆ. ಈ ಮೂರು ವರ್ಷಗಳನ್ನು ಹೊರತುಪಡಿಸಿದರೆ, ಉಳಿದೆಲ್ಲ ವರ್ಷಗಳಲ್ಲಿ 1 ಲಕ್ಷದಿಂದ 6 ಲಕ್ಷದವರೆಗೂ ಏರಿಕೆ ಕಂಡುಬಂದಿದೆ. 2019ರಲ್ಲಿ ಈ ದಶಕದ ಅತಿಹೆಚ್ಚು, ಅಂದರೆ 6.9 ಲಕ್ಷದಷ್ಟು ಹೆಚ್ಚುವರಿ ಮರಣ ನೋಂದಣಿಯಾಗಿವೆ. ನಂತರದ ವರ್ಷ ಅಂದರೆ, ಕೋವಿಡ್ ಮೊದಲ ಅಲೆಯು ದಾಳಿಯಿಟ್ಟಿದ್ದ ವರ್ಷದಲ್ಲಿ 4.74 ಲಕ್ಷದಷ್ಟು ಹೆಚ್ಚುವರಿ ಮರಣ ನೋಂದಣಿಯಾಗಿವೆ.

ನಗರ ಪ್ರದೇಶದಲ್ಲಿ ಭಾರಿ ಏರಿಕೆ

ದೇಶದಲ್ಲಿ ಪ್ರತಿ ವರ್ಷ ನೋಂದಣಿಯಾಗುವ ಮರಣ ಪ್ರಕರಣಗಳಲ್ಲಿ ಗ್ರಾಮೀಣ ಪ್ರದೇಶದ ಪಾಲು ಹೆಚ್ಚು. ಗ್ರಾಮೀಣ ಪ್ರದೇಶದಲ್ಲಿ ನೋಂದಣಿಯಾಗುವ ಮರಣ ಏರಿಕೆ ಪ್ರಮಾಣವೂ ಹೆಚ್ಚು. ಕೋವಿಡ್ ಬರುವುದಕ್ಕೂ ಮೊದಲಿನ ವರ್ಷಗಳಲ್ಲಿ ಮರಣ ನೋಂದಣಿಯು ಇದೇ ರೀತಿ ದಾಖಲಾಗಿದೆ. ಆದರೆ ಕೋವಿಡ್ ಬಂದ ವರ್ಷದಲ್ಲಿ ಅಂದರೆ 2020ರಲ್ಲಿ ನಗರ ಪ್ರದೇಶದಲ್ಲಿ ನೋಂದಣಿಯಾದ ಮರಣ ಸಂಖ್ಯೆಯ ಏರಿಕೆ ಪ್ರಮಾಣವು ಹೆಚ್ಚಾಗಿದೆ. 2020ರಲ್ಲಿ ದೇಶದ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲೇ ಕೋವಿಡ್ ವ್ಯಾಪಕವಾಗಿತ್ತು. ಹೀಗಾಗಿ ಈ ಪ್ರದೇಶದಲ್ಲಿ ಹೆಚ್ಚಿನ ಕೋವಿಡ್ ಸಾವಿನಿಂದ, ಇಲ್ಲಿ ನೋಂದಣಿಯಾದ ಮರಣ ಸಂಖ್ಯೆಯೂ ಏರಿಕೆಯಾಗಿದೆ ಎಂದು ವಿಶ್ಲೇಷಿಸಲಾಗಿದೆ



• 2020ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮರಣ ನೋಂದಣಿಯಲ್ಲಿ ಆದ ಏರಿಕೆ ಪ್ರಮಾಣವು, 2019ಕ್ಕೆ ಹೋಲಿಸಿದರೆ ಶೇ57ರಷ್ಟು ಇಳಿಕೆಯಾಗಿದೆ

• 2020ರಲ್ಲಿ ನಗರ ಪ್ರದೇಶದಲ್ಲಿ ಮರಣ ನೋಂದಣಿಯಲ್ಲಿ ಆದ ಏರಿಕೆ ಪ್ರಮಾಣವು, 2019ಕ್ಕೆ ಹೋಲಿಸಿದರೆ ಶೇ30.3ರಷ್ಟು ಹೆಚ್ಚಳವಾಗಿದೆ

ಹೆಚ್ಚುವರಿ ಸಾವಿನಲ್ಲಿ ಕೋವಿಡ್ ಪಾಲೆಷ್ಟು?

ಸಿಆರ್‌ಎಸ್ ವರದಿಯಲ್ಲಿ ದಾಖಲಾಗಿರುವ ಹೆಚ್ಚುವರಿ ಸಾವು ಕೇವಲ ಕೋವಿಡ್‌ನಿಂದಲೇ ಸಂಭವಿಸಿವೆ ಎಂದು ಹೇಳಲಾಗದು ಎಂದು ನೀತಿ ಆಯೋಗದ ಸದಸ್ಯ ಹಾಗೂ ಕೋವಿಡ್ ಕಾರ್ಯಪಡೆ ಮುಖ್ಯಸ್ಥ ವಿ.ಕೆ. ಪಾಲ್ ಹೇಳಿದ್ದಾರೆ.

'ಆದರೆ, ಸರ್ಕಾರ ಈ ಹಿಂದೆ ಉಲ್ಲೇಖಿಸಿದ್ದ ಕೋವಿಡ್ ಸಾವಿಗಿಂತ ಹೆಚ್ಚು ಸಾವು ಸಂಭವಿಸಿರಬಹುದು' ಎಂದು ಪೌಲ್ ಅವರು ಅಭಿಪ್ರಾಯಪಟ್ಟಿದ್ದಾರೆ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿದೆ.

2019ಕ್ಕೆ ಹೋಲಿಸಿದರೆ, 2020ರಲ್ಲಿ ಸಾವಿನ ಸಂಖ್ಯೆ ಹೆಚ್ಚಳವಾಗಿರುವುದು ನಿಜವಾದರೂ ಅದಕ್ಕೆ ಹಲವು ಕಾರಣಗಳಿವೆ ಎಂದು ಅವರು ಹೇಳಿದ್ದಾರೆ. ಮರಣ ನೋಂದಣಿ ಪ್ರಮಾಣ ಏರಿಕೆಯಾಗಿದೆ. ವ್ಯಾಜ್ಯ, ಆಸ್ತಿ ಮೊದಲಾದ ಕಾರಣಗಳಿಗಾಗಿ ಮರಣ ನೋಂದಣಿ ಪ್ರಮಾಣಪತ್ರ ಪಡೆಯಲು ಜನರು ಮುಂದಾಗಿರುವುದೂ ಈ ಬೆಳವಣಿಗೆಗೆ ಕಾರಣ ಎಂದು ಅವರು ವಿಶ್ಲೇಷಿಸಿದ್ದಾರೆ.

2020ರ ಅಧಿಕೃತ ಕೋವಿಡ್ ಸಾವಿನ ಸಂಖ್ಯೆ 1.49 ಲಕ್ಷ ಎಂದು ಸರ್ಕಾರದ ಕೋವಿಡ್ ಅಂಕಿ–ಅಂಶಗಳು ಉಲ್ಲೇಖಿಸಿವೆ. ಸಿಆರ್‌ಎಸ್ ವರದಿಯ ಪ್ರಕಾರ, 2020ರಲ್ಲಿ 4.74 ಲಕ್ಷ ಹೆಚ್ಚುವರಿ ಮರಣ ಉಲ್ಲೇಖವಾಗಿದ್ದರೂ, ಕೋವಿಡ್ ಅಲ್ಲದೆ ಬೇರೆಬೇರೆ ಸೋಂಕು ಅಥವಾ ವಿವಿಧ ಕಾರಣಗಳಿಂದಲೂ ಸಾವು ಸಂಭವಿಸಿರಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

1.49 ಲಕ್ಷ
2020ರಲ್ಲಿ ಕೋವಿಡ್‌ನಿಂದ ಸಂಭವಿಸಿದ ಸಾವು

4.74 ಲಕ್ಷ
2020ರಲ್ಲಿ ಮರಣ ನೋಂದಣಿಯಲ್ಲಿ ಆದ ಏರಿಕೆ

ಆಧಾರ: ಸಿಆರ್‌ಎಸ್ ವರದಿ–2016, 2017, 2018, 2019 ಮತ್ತು 2020, ರಾಯಿಟರ್ಸ್, ಪಿಟಿಐ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 112

ಬೇರೆ ಮದುವೆಯಾದ ಯಜ್ಞದತ್ತ

ಕುಲಘಾತುಕ ಮಗನ ಕುಕೃತ್ಯಗಳನ್ನು ಜೂಜುಕೋರ ಹೇಳುತ್ತಿದ್ದರೆ, ಯಜ್ಞದತ್ತನಿಗೆ ಜಂಘಾಬಲವೇ ಉಡುಗಿ ಹೋದಂತಾಗುತ್ತಿತ್ತು. ಮಗನ ಅವಗುಣಗಾನ ಮುಂದುವರೆಸಿದ ಜೂಜುಕೋರ 'ನನಗೊಬ್ಬನಿಗೆ ಈ ಉಂಗುರವೊಂದನ್ನು ಕೊಟ್ಟಿದ್ದಾನೆ ಎಂದು ತಿಳಿಯಬೇಡ. ಇನ್ನೂ ಅನೇಕ ಜೂಜುಗಾರರಿಗೆ ಜೂಜಾಟದಲ್ಲಿ ಸೋತು ಅವರಿಗೆ ಬಹಳ ಹಣವನ್ನು ಕೊಟ್ಟಿದ್ದಾನೆ. ರತ್ನದ ಆಭರಣಗಳು, ಪಾತ್ರೆ-ಪದಾರ್ಥಗಳು, ಬೆಲೆಬಾಳುವ ರೇಷ್ಮೆಯ ಬಟ್ಟೆಗಳು, ಗಿಂಡಿ ಮೊದಲಾದ ಕಂಚು ತಾಮ್ರದ ಪಾತ್ರೆಗಳೆಲ್ಲವನ್ನೂ ಅವನು ನಮಗಿತ್ತಿದ್ದಾನೆ.

'ಜೂಜುಕೋರರು ಪ್ರತಿ ದಿನವೂ ಜೂಜಿನಲ್ಲಿ ಸೋತ ಗುಣನಿಧಿ ಉಟ್ಟಬಟ್ಟೆಯನ್ನೂ ಬಿಡದೆ ಕಿತ್ತುಕೊಂಡು, ಬೆತ್ತಲೆ ಕಟ್ಟಿಹಾಕುತ್ತಾರೆ. ಅವನಂತಹ ಜೂಜುಗಾರನು ಈ ಭೂಮಂಡಲದಲ್ಲೇ ಬೇರೊಬ್ಬನಿಲ್ಲ' ಎಂದು ಹೇಳಿದಾಗ ಯಜ್ಞದತ್ತನಿಗೆ ತಲೆ ಗಿರ್ರನೆ ತಿರುಗಿದಂತಾಯಿತು. ಜೂಜುಕೋರನೊಬ್ಬನಿಂದ ತನ್ನ ಮಗನ ದುರ್ವರ್ತನೆಯನ್ನು ಕೇಳಿ, ಯಜ್ಞದತ್ತ ನಾಚಿಕೆಯಿಂದ ತಗ್ಗಿಸಿದ ತಲೆಯನ್ನು ಮೇಲಕ್ಕೆತ್ತದೆ, ತಲೆಗೆ ಮುಸುಗನ್ನು ಎಳೆದುಕೊಂಡು ಬಿರುಸು ನಡೆಯೊಂದಿಗೆ, ರವರವಗುಟ್ಟುವ ಆಕ್ರೋಶದ ಮುಖದೊಂದಿಗೆ ಮನೆಗೆ ಹೊರಟ. ಲೌಕಿಕ ವ್ಯವಹಾರವನ್ನೇ ಅರಿಯದ, ಕೇವಲ ಶ್ರುತಿವಿಹಿತಕರ್ಮಗಳಲ್ಲೇ ಆಸಕ್ತನಾದ ಯಜ್ಞದತ್ತದೀಕ್ಷಿತ ಮನೆಗೆ ಬಂದವನೆ ಕೋಪದಿಂದ ತನ್ನ ಹೆಂಡತಿಗೆ 'ಎಲೈ ಪರಮ ವಂಚಕಿ! ನಿನ್ನ ಮಗನಾದ ಗುಣನಿಧಿ ಎಲ್ಲಿದ್ದಾನೆ? ಹೇಳು. ನಾನು ಸ್ನಾನಮಾಡಿ ಮೈಯುಜ್ಜಿಕೊಳ್ಳುವಾಗ ನನ್ನ ಬೆರಳಿನಿಂದ ತೆಗೆದುಕೊಂಡೆಯಲ್ಲ ಆ ನನ್ನ ಉಂಗುರವೆಲ್ಲಿದೆ ಹೇಳು? ಬೇಗನೆ ಆ ರತ್ನದ ಉಂಗುರವನ್ನು ನನಗೆ ತಂದುಕೊಡು' – ಎಂದ ಆವೇಶದಿಂದ.

'ಈ ಮಾತನ್ನು ಕೇಳಿದೊಡನೆಯೇ, ಮಡಿಯುಟ್ಟು ಮಧ್ಯಾಹ್ನದ ಕೆಲಸದಲ್ಲಿ ತೊಡಗಿದ್ದ, ದೀಕ್ಷಿತಾಯನಿ ನಡುಗುತ್ತಾ ಹೇಳಿದಳು, 'ನಾನು ಈಗ ದೇವರ ಪೂಜೆಗೆ ಸಿದ್ಧಮಾಡುವುದರಲ್ಲಿ ತೊಡಗಿದ್ದೇನೆ. ಅತಿಥಿಗಳಿಗೆ ಹೊತ್ತಾದೀತು. ಈಗತಾನೇ ಪಕ್ವಾನ್ನಗಳನ್ನು ಮಾಡುವ ಆತುರದಲ್ಲಿ ಉಂಗುರವನ್ನು ಯಾವ ಪಾತ್ರೆಯಲ್ಲಿಟ್ಟೆನೋ ಮರೆತೆ' ಎಂದಾಗ ಯಜ್ಞದತ್ತ ಮತ್ತಷ್ಟು ಕುಪಿತನಾಗಿ 'ಮಗುವನ್ನು ಹೆತ್ತವಳೇ, ನಿತ್ಯವೂ ಸುಳ್ಳನ್ನೇ ಹೇಳುವವಳೇ. ಮಗ ಎಲ್ಲಿ ಹೋದನೆಂದು ಕೇಳಿದಾಗಲೆಲ್ಲ, ಓದುವುದನ್ನೆಲ್ಲಾ ಓದಿ ಈಗತಾನೆ ಸ್ನೇಹಿತರೊಂದಿಗೆ ಹೋದನೆಂದು ಸುಳ್ಳು ಹೇಳುತ್ತಿದ್ದೆಯಲ್ಲವೇ?' ಎಂದು ಗದರುತ್ತಾನೆ.


'ನಾನು ನಿನಗೆ ತಂದುಕೊಟ್ಟಿದ್ದ ಮಂಜಿಷ್ಠಾರಾಗರಂಜಿತವಾದ (ಹಳದಿ ಬಣ್ಣ) ಮನೆಯಲ್ಲಿ ಯಾವಾಗಲೂ (ದಂಡದ ಮೇಲೆ) ತೂಗಾಡುತ್ತಿದ್ದ ಆ ಸೀರೆಯೆಲ್ಲಿ? ನಿಜವನ್ನು ಹೇಳು. ರತ್ನಖಚಿತವಾದ ಆ ಗಿಂಡಿಯು ಈಗೇಕೆ ಎಲ್ಲಿಯೂ ಕಾಣಿಸುತ್ತಿಲ್ಲ. ನಾನು ನಿನಗೆ ತಂದುಕೊಟ್ಟಿದ್ದ ರೇಶಿಮೆ ನೂಲಿನಿಂದ ಮಾಡಿದ ಆ ತ್ರಿಪಟಿ (ಶಾಲುವಿನ ಮಾದರಿಯ ಹೊದೆಯುವ ಬಟ್ಟೆ) ಎಲ್ಲಿ? ದಕ್ಷಿಣ ದೇಶದಿಂದ ತಂದಿದ್ದ ಆ ಕಂಚೂ, ಗೌಡದೇಶದಿಂದ ತಂದಿದ್ದ ತಾಮ್ರದ ಬಿಂದಿಗೆ ಎಲ್ಲಿದೆ? ಹೇಳು. ವಿಲಾಸಾರ್ಥವಾಗಿ ಉಪಯೋಗಿಸುತ್ತಿದ್ದ ಸುಖಕರವಾದ ಆನೆಯ ದಂತದಲ್ಲಿ ಮಾಡಿದ್ದ ಮಂಚಿಕೆ (ಕೆನ್ನೆಯಲ್ಲಿ ಧರಿಸುವ ಕರ್ಣಪತ್ರದಂತಹ ಆಭರಣ) ಎಲ್ಲಿ? ಚಂದ್ರಕಾಂತಿಯಂತೆ ಬೆಳಗುತ್ತಿದ್ದ ಮಲೆನಾಡಿನಿಂದ ತಂದಿದ್ದ, ದೀಪವನ್ನು ಕೈಯಲ್ಲಿ ಹೊತ್ತು ನಿಂತಿದ್ದ, ಪುತ್ಥಳಿ ಎಲ್ಲಿ? ಇನ್ನು ಹೆಚ್ಚು ಹೇಳಿಯೇನು ಪ್ರಯೋಜನ? ನಾನು ಬೇರೆ ಮದುವೆ ಮಾಡಿಕೊಂಡ ಮೇಲೆಯೇ ಪುನಃ ಊಟ ಮಾಡುತ್ತೇನೆ. ಅಲ್ಲಿವರೆಗೂ ನೀ ಮಾಡಿದ ಅಡುಗೆ ಊಟ ಮಾಡುವುದಿಲ್ಲ. ದುಷ್ಟನೂ ಕುಲಪಾಂಸನನೂ ಆದ, ಆ ಮಗನಿಂದ ನಾನು ಮಕ್ಕಳಿಲ್ಲದವನಂತೆಯೇ ಆಗಿದ್ದೇನೆ. ಎಳು, ನೀರು ತೆಗೆದುಕೊಂಡು ಬಾ! ಅವನಿಗೆ ಎಳ್ಳುನೀರು ಬಿಡುವೆಯಂತೆ. ವಂಶಕ್ಕೆ ಕಳಂಕವನ್ನು ಹಚ್ಚುವ ಕೆಟ್ಟ ಮಗನನ್ನು ಹೆರುವುದಕ್ಕಿಂತಲೂ, ಮಕ್ಕಳಿಲ್ಲದಿರುವುದೇ ಲೇಸು. ಕುಲಕ್ಕೋಸ್ಕರ ಒಬ್ಬನನ್ನು ಪರಿತ್ಯಾಗ ಮಾಡಲೂಬಹುದು ಎಂಬುದೇ ಸನಾತನ ನೀತಿ' ಎಂದು ಹೇಳುತ್ತಾನೆ.

ಹೀಗೆ ಹೇಳಿ ಯಜ್ಞದತ್ತ ತನ್ನ ಸ್ನಾನಾಹ್ನಿಕಗಳನ್ನು ಮುಗಿಸಿಕೊಂಡ. ಅದೇ ದಿನವೇ ಶ್ರೋತ್ರಿಯನೊಬ್ಬನ ಮಗಳನ್ನು ನೋಡಿ ಆಕೆಯನ್ನು ಮದುವೆಯಾದ ಅಂತ ಬ್ರಹ್ಮ ನಾರದನಿಗೆ ಗುಣನಿಧಿಯ ಕತೆಯನ್ನು ಹೇಳುವಲ್ಲಿಗೆ ಗುಣನಿಧಿಚರಿತ್ರವರ್ಣನ ಎಂಬ ಹದಿನೇಳನೆ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಪಬ್‌ವೊಂದರಲ್ಲಿ ಮಹಿಳೆಯ ಜೊತೆ ಕಾಣಿಸಿಕೊಂಡಿದ್ದ ವಿಡಿಯೊ ವೈರಲ್ ಆಗಿದೆ. 'ಚೀನಾದ ರಾಯಭಾರಿಯ ಜತೆ ನೇಪಾಳದ ಪಬ್‌ನಲ್ಲಿ ರಾಹುಲ್ ಕಾಣಿಸಿಕೊಂಡಿದ್ದಾರೆ' ಎಂದು ಬಿಜೆಪಿ ಆರೋಪಿಸಿತ್ತು. 'ಕಾಂಗ್ರೆಸ್ ಬಿಕ್ಕಟ್ಟಿನಲ್ಲಿರುವಾಗ ರಾಹುಲ್ ಅವರು ನೈಟ್‌ಕ್ಲಬ್‌ನಲ್ಲಿದ್ದಾರೆ' ಎಂದು ಮುಖಂಡ ಅಮಿತ್ ಮಾಳವೀಯ ಟ್ವೀಟ್ ಮಾಡಿದ್ದರು. ಈ ವಿದ್ಯಮಾನ ಕಾಂಗ್ರೆಸ್–ಬಿಜೆಪಿ ನಡುವೆ ವಾಕ್ಸಮರ ಸೃಷ್ಟಿಸಿತ್ತು. 'ಭಾರತದ ವಿರುದ್ಧ ಸಂಚು ರೂಪಿಸಲು ರಾಹುಲ್ ಅವರು ಚೀನಾ ರಾಯಭಾರಿ ಜತೆಗೆ ಮಾತನಾಡಲು ನೇಪಾಳಕ್ಕೆ ಹೋಗಿದ್ದಾರೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.



ರಾಹುಲ್ ಗಾಂಧಿ ಅವರ ಜೊತೆ ಕಾಣಿಸಿಕೊಂಡಿರುವ ಮಹಿಳೆ ಚೀನಾದ ರಾಯಭಾರಿ ಅಲ್ಲ ಎಂದು ಇಂಡಿಯಾ ಟುಡೇ ವರದಿ ಮಾಡಿದೆ. 'ಸಿಎನ್‌ಎನ್ ಸುದ್ದಿಸಂಸ್ಥೆಯ ದೆಹಲಿ ವರದಿಗಾರ್ತಿ ಸುಮ್ನಿಮಾ ಉದಾಸ್ ಅವರ ಮದುವೆ ಸಮಾರಂಭದಲ್ಲಿ ಭಾಗಿಯಾಗಲು ರಾಹುಲ್ ನೇಪಾಳಕ್ಕೆ ಭೇಟಿ ನೀಡಿದ್ದರು. ಸುಮ್ನಿಮಾ ಅವರ ತಂದೆ ಬಿಮಾ ಉದಾಸ್ ಅವರು ಮ್ಯಾನ್ಮಾರ್‌ಗೆ ನೇಪಾಳದ ರಾಯಭಾರಿಯಾಗಿದ್ದರು. ಪಬ್ ನಿರ್ವಾಹಕರನ್ನು ಸಂಪರ್ಕಿಸಿದಾಗ, ಚೀನಾದ ಯಾವ ರಾಯಭಾರಿಯೂ ರಾಹುಲ್ ಜೊತೆ ಇರಲಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ರಾಹುಲ್ ಜೊತೆ ಇರುವ ಮಹಿಳೆಯು ಮದುಮಗಳ ಗೆಳತಿ' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸಮಾಜ ಧರ್ಮ

ಧರಿಸಿರ್ಪುದಲ ಧರ್ಮ? ಧರಿಸು ಜೀವನಧುರವ|
ಚರಿಸು ಲೋಕದ ಮಾರ್ಗಗಳಲಿ ಹಿತವರಿತು ||
ಸರಿಪಡಿಸಿ ದಾರಿಗಳ ಕೆರೆ ತೋಪು ಸತ್ರಗಳ |
ನೆರವಾಗು ಪಯಣಕ್ಕೆ – ಮಂಕುತಿಮ್ಮ || 621 ||

ಪದ-ಅರ್ಥ: ಧರಿಸಿರ್ಪುದಲ = ಧರಿಸಿರುವುದಲ್ಲ, ಜೀವನಧುರವ = ಜೀವನ + ಧುರವ(ನೊಗ), ಚರಿಸು = ನಡೆ, ಹಿತವರಿತು = ಹಿತವ + ಅರಿತು, ಸತ್ರ = ಛತ್ರ.

ವಾಚ್ಯಾರ್ಥ: ಧರ್ಮವೇ ಎಲ್ಲವನ್ನೂ ಧರಿಸಿರುವುದಲ್ಲವೆ? ಜೀವನದ ನೊಗವನ್ನು ಹೊರು, ಲೋಕದ ದಾರಿಗಳಲ್ಲಿ, ಹಿತವನ್ನು ಅರಿತು ನಡೆ, ಪಯಣಕ್ಕೆ ನೆರವಾಗುವುದಕ್ಕೆ ದಾರಿಗಳ, ಕೆರೆ, ತೋಪು, ಛತ್ರಗಳನ್ನು ಸರಿಪಡಿಸು.

ವಿವರಣೆ: ಧರ್ಮ ಪದದ ಧಾತು ಧೃ. ಹಾಗೆಂದರೆ ಧರಿಸುವುದು, ಆಧಾರ ನೀಡುವುದು. ಮಹಾಭಾರತದ ಕರ್ಣಪರ್ವದಲ್ಲಿ ಬರುವ ಮಾತು ಇನ್ನೂ ಸ್ಪಷ್ಟವಾಗಿ ಹೇಳುತ್ತದೆ.

ಧಾರಣಧರ್ಮ ಮಿತ್ಯಾ: ಧರ್ಮೋ ಧಾರಯತೀ ಪ್ರಜಾ: ||

"ಯಾವುದು ಪ್ರಜೆಗಳನ್ನು ಮತ್ತು ಆ ಮೂಲಕವಾಗಿ ಸಮಾಜವನ್ನು ಧರಿಸುತ್ತದೆಯೋ, ಅದೇ ಧರ್ಮ"

ಆದಿ ಶಂಕರಾಚಾರ್ಯರು, ಶ್ರೀಮದ್ ಭಗವದ್ಗೀತಾ ಭಾಷ್ಯದ ಉಪೋದ್ಘಾತದಲ್ಲಿ ಹೇಳಿದ ಮಾತು ಮನನೀಯವಾದದ್ದು.

ಜಗತ: ಸ್ಥಿತಿ ಕಾರಣಂ ಪ್ರಾಣಿನಾಂ ಸಾಕ್ಷಾತ್ ಅಭ್ಯುದಯನಿ:ಶ್ರೇಯಸಹೇತುಯ: ಸ ಧರ್ಮ: ||

"ಯಾವುದು ಜಗತ್ತಿನ ಸ್ಥಿತಿ, ವ್ಯವಸ್ಥೆ, ಸಕಲ ಪ್ರಾಣಿಗಳ ಅಭ್ಯುದಯ ಮತ್ತು ಅಧ್ಯಾತ್ಮಿಕ ಉನ್ನತಿ ಎನ್ನುವ ಮೂರು ಧ್ಯೇಯಗಳನ್ನು ಸಾಧಿಸುತ್ತದೆಯೋ, ಅದೇ ಧರ್ಮ".

ಹಾಗಾದರೆ ಧರ್ಮ ಇರುವುದು ವ್ಯಕ್ತಿ, ಸಮಾಜ ಮತ್ತು ಬದುಕಿನ ಉದ್ದೇಶ ಈ ಮೂರು ವಿಷಯಗಳಿಗೆ ಸಂಬಂಧಪಟ್ಟದ್ದು ಮತ್ತು ಮೂರನ್ನು ರಕ್ಷಿಸುವುದು. ಧರ್ಮ ಎನ್ನುವುದು ಮುಖ್ಯವಾಗಿ ಸಾಮಾಜಿಕ ಬದುಕಿಗೆ ಸಂಬಂಧಿಸಿದ್ದು ಎಂದಾಯಿತು. ವ್ಯಕ್ತಿ ತನ್ನ ಸುತ್ತಮುತ್ತಲಿನ ಜನರೊಡನೆ, ಪರಿಸರದೊಡನೆ ಹೇಗೆ ಸಮರಸವಾಗಿ ಬದುಕುತ್ತಾನೆ ಎನ್ನುವುದು ಅವನ ಧರ್ಮದ ಪರಿಧಿಯಲ್ಲಿ ಬರುತ್ತದೆ. ಅದನ್ನು ಬಸವಣ್ಣನವರು ಅತ್ಯಂತ ಸರಳವಾಗಿ "ದಯೆಯಿಲ್ಲದ ಧರ್ಮ ಯಾವುದಯ್ಯ? ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ" ಎಂದು ತಿಳಿಸುತ್ತಾರೆ. ಮತ್ತೆ, "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ, ಮುನಿಯಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ" ಎಂದು ಧರ್ಮದ ಸಪ್ತಸೂತ್ರಗಳನ್ನು ನೀಡುತ್ತಾರೆ.

ಈ ಎಲ್ಲ ಹಿನ್ನಲೆಯಲ್ಲಿ ಕಗ್ಗ ಧರ್ಮಕ್ಕೆ ಮತ್ತೊಂದು ಅತ್ಯಂತ ಸುಲಭವಾದ, ಪ್ರಾಯೋಗಿಕವಾದ ವ್ಯಾಖ್ಯೆಯನ್ನು ನೀಡುತ್ತದೆ. ಧರ್ಮ ನಿನ್ನನ್ನು ರಕ್ಷಿಸಬೇಕಾದರೆ, ಜೀವನದ ಗಾಡಿಯ ನೊಗಕ್ಕೆ ಹೆಗಲುಕೊಡು, ಬದುಕಿನ ಮಾರ್ಗಗಳಲ್ಲಿ ಯಾವುದು ನಿನಗೆ ಹಿತವೋ, ಮತ್ತಾರಿಗೂ ಅದರಿಂದ ತೊಂದರೆ ಇಲ್ಲವೋ ಎಂಬುದನ್ನು ಗಮನಿಸಿ ನಡೆ. ನಿನ್ನ ಕೈಲಾದ ಚಿಕ್ಕಪುಟ್ಟ ಅಥವಾ ದೊಡ್ಡದಾದ ಕೆಲಸಗಳನ್ನು ಮಾಡು. ರಸ್ತೆಗಳನ್ನು ಸರಿ ಮಾಡು, ಕೆರೆ, ತೋಪುಗಳನ್ನು ಕಟ್ಟಿಸು, ಛತ್ರಗಳನ್ನು ಸರಿಮಾಡು. ಏನಾದರೂ ಮಾಡು, ಲೋಕಕ್ಕೆ ಪ್ರಯೋಜನ ಕಾರಿಯಾದದ್ದನ್ನು ಮಾಡು. ಅದು ಜನರ ಪಯಣಕ್ಕೆ ನೆರವಾಗುವುದರೊಂದಿಗೆ, ನಿನ್ನ ಅಧ್ಯಾತ್ಮಿಕ ಪ್ರಯಾಣಕ್ಕೂ ನೆಲೆಯಾಗುತ್ತದೆ. ಅದೇ ಧರ್ಮ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 5, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಚತುರ್ಥಿ ಗಂ. 10-01 ನಕ್ಷತ್ರ: ಮೃಗಶಿರ ಗಂ. 06-16
ಯೋಗ: ಸುಕರ್ಮ ಗಂ. 18-06, ಕರಣ: ವಿಷ್ಟಿ ಗಂ. 10-01, ಮೇಷ ಮಾಸದ 21 ನೇ ದಿನ
ರಾಹುಕಾಲ: ಮಧ್ಯಾಹ್ನ 01:30–03:00
ಸೂರ್ಯೋದಯ: 06-11 **ಸೂರ್ಯಾಸ್ತ:** 06-43
ಮುಸ್ಲಿಂ ದಿನಾಂಕ: 03 ಶವ್ವಾಲ್
ಅದೃಷ್ಟ ಸಂಖ್ಯೆ: 3, 11

ಮೇಷ: ಇಂದು ಮಾರುಕಟ್ಟೆಯಲ್ಲಿ ನಿಮ್ಮ ವ್ಯಾಪಾರ ಅಧಿಕವಾಗಿದ್ದು ಹೆಚ್ಚಿನ ಅವಕಾಶಗಳೊಂದಿಗೆ ಶುಭ ಫಲವನ್ನು ತರಲಿದೆ. ಯಾವುದೇ ವಿಚಾರಗಳಿಗೂ ಬೇಸರ ಪಡುವ ಅವಶ್ಯಕತೆ ಇಲ್ಲ. ಹೊಸ ಜವಾಬ್ದಾರಿಗಳು ನಿಮ್ಮ ಹೆಗಲೇರಲಿವೆ

ವೃಷಭ: ಕುಟುಂಬ ವರ್ಗದಲ್ಲಿ ನಿಮ್ಮ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಸಜ್ಜನರ ಒಡನಾಟದಿಂದ ಮನಸ್ಸಿಗೆ ನೆಮ್ಮದಿ ಇರುವುದು. ಪಾಲುದಾರರೊಂದಿಗೆ ಸೇರಿ ಮಾಡುವ ಕೆಲಸದಿಂದ ಯಶಸ್ಸು ಸಿಗುತ್ತದೆ.

ಮಿಥುನ: ವೃತ್ತಿ ಜೀವನಕ್ಕೆ ಸಂಬಂಧಿಸಿದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಈಗಾಗಲೇ ಆರಂಭಿಸಿರುವ ಕೆಲಸವೂ ಕೂಡ ಬೆಳವಣಿಗೆಯ ಹಾದಿಯಲ್ಲಿರುತ್ತದೆ.

ಕರ್ಕಾಟಕ: ಉದ್ಯೋಗದಲ್ಲಿ ಬದಲಾವಣೆ ಬಯಸಿದರೆ ಸ್ವಲ್ಪ ದಿನಗಳ ಕಾಲ ಕಾಯುವುದು ಅವಶ್ಯವಾಗಲಿದೆ. ರಾಜಕಾರಣದ ರಹಸ್ಯ ಮಾತುಕತೆಗಳಲ್ಲಿ ನಿಮ್ಮ ಸ್ಥಾನ ಪ್ರಮುಖವಾಗಿರುವುದು.

ಸಿಂಹ: ಉದ್ಯೋಗಸ್ಥ ಮಹಿಳೆಯರಿಗೆ ಬಡ್ತಿ ದೊರೆಯುವ ಸಂಭವವಿದೆ. ನೂತನ ಗೃಹ ಖರೀದಿ ಇಲ್ಲವೇ ಗೃಹ ನಿರ್ಮಾಣದಂತಹ ಕಾರ್ಯಗಳನ್ನು ಮುಂದೂಡುವುದು ಉತ್ತಮ.

ಕನ್ಯಾ: ವ್ಯಾಪಾರದಲ್ಲಿ ಸಹಚರರಿಂದಲೇ ಮೋಸವಾಗುತ್ತಿರುವ ವಿಚಾರವು ಅನುಭವಕ್ಕೆ ಬರಲಿದೆ. ಈ ದಿನ ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಹೆಚ್ಚಿನ ಬಂಡವಾಳ ತೊಡಗಿಸುವುದು ಸರಿಯಲ್ಲ.

ತುಲಾ: ನಿಮ್ಮ ಚಟುವಟಿಕೆಗಳ ಒತ್ತಡದ ನಡುವೆಯು ಇತರರಿಗೆ ಸಹಾಯ ಮಾಡುವ ಪರೋಪಕಾರ ಮನೋಭಾವದಿಂದ ನಿಮಗೆ ಯಶಸ್ಸು ಲಭಿಸಲಿದೆ. ರೇಷ್ಮೆ ಬೆಳೆಗಾರರಿಗೆ ಈ ಬಾರಿಯ ಬೆಳೆಯಿಂದ ಹೆಚ್ಚಿನ ಸಂತಸ ಸಿಗಲಿದೆ.

ವೃಶ್ಚಿಕ: ವೈದ್ಯರ ಸಲಹೆಯಂತೆ ದೇಹಾರೋಗ್ಯಕ್ಕಾಗಿ ಆಹಾರ ಸೇವನೆಯಲ್ಲಿ ಕೆಲವು ನಿರ್ಬಂಧಗಳನ್ನು, ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಬಹುದು. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ.

ಧನು: ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡುವುದು ಒಳ್ಳೆಯದು. ಸ್ವಾರ್ಥದಿಂದ ನೀವು ವ್ಯವಹರಿಸಿದ ಪರಿಣಾಮ ಪಶ್ಚಾತಾಪ ಪಡುವಂತಾಗುವುದು.

ಮಕರ: ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ನಿಮಗೆ ಈ ದಿನ ತಿಳಿಯುವುದು. ಹಿಂದೆ ಯಾವುದೋ ದಿನ ಮಾಡಿದ ಕೆಲಸದ ಫಲವಾಗಿ ಈ ದಿನ ಅದರ ಲಾಭ ಬಂದು ಕೈ ಸೇರಿದ ಸಂತಸ ಆಗಲಿದೆ.

ಕುಂಭ: ವ್ಯವಹಾರದಲ್ಲಿ ಎದುರಾಗಿರುವ ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕುವುದು ಉತ್ತಮ. ಕುಟುಂಬದಲ್ಲಿ ಉತ್ತಮ ವಾತಾವರಣ ವಿದ್ದು ಸಂತಸ ಹಾಗೂ ಸಮಾಧಾನ ತರಲಿದೆ.


ಮೀನ: ನಿಮ್ಮ ಮುಕ್ತ ಮನೋಭಾವ ಇಂದು ನೀವಾಡುವ ಮಾತುಗಳಿಂದ ಬಹಿರಂಗಗೊಳ್ಳಲಿದೆ. ಕಾಗದ ಪತ್ರಗಳಿಗೆ ಓದಿಯೇ ಸಹಿ ಹಾಕುವುದನ್ನು ಅಭ್ಯಾಸಿಸಿಕೊಳ್ಳಿರಿ.

ಪದಬಂಧ 4948

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಕಂದಾಯವನ್ನು ನಿಗದಿಪಡಿಸುವ ವ್ಯವಸ್ಥೆ (4)
5.ಅಧಿಕಾರ ಪತ್ರ (3)
6.ತಾಯಿಯ ಮನೆಯ ಕಿಟಕಿ (4)
8.ಗರದಲ್ಲಿರುವ ಅನ್ಯ ಮಾರ್ಗ (4)
12.ನಡುವೆ ಕಟಿಯನ್ನಿಟ್ಟು ತೋರ್ಪಡಿಸು (4)
14.ವಾದಕ್ಕೆ ಗ್ರಾಸವಾದ ತರ್ಜುಮೆ (4)
15.ಹೊರದೂಡಲ್ಪಟ್ಟವನು (3)
16.ಮಾನವನ್ನು ಹೊಂದಿದ ವಸ್ತುಸ್ಥಿತಿ (4)

ಮೇಲಿಂದ ಕೆಳಕ್ಕೆ
1.ಒಳ್ಳೆಯ ನಡತೆ ಇಲ್ಲದಿರುವಿಕೆ (5)
2.ಈತ ಲಗ್ನವಾಗುತ್ತಿರುವವ (4)
3.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ (4)
4.ದಿನದೊಳಗೆ ಆಗಮಿಸಿದ ಮಂತ್ರಿ (3)
7.ಶ್ರಮ ನಿರ್ವಹಿಸುವಿಕೆ (2)
9.ಕುತೂಹಲವೂ ಆಗಿರುವ ಆಸೆ (3)
10.ಸೂರ್ಯನ ರಶ್ಮಿ (5)
11.ತಲೆ ಕೂದಲಿಗೆ ಹತ್ತುವ ಕ್ರಿಮಿ (2)
12.ತೋರಿಸುವಿಕೆಯನ್ನು ಹೀಗೆನ್ನಿ (4)
13. ಸುಮನೋಹರವಾದ ಬಾದಾರಯಣ ಕಾಲದ ಪುಷ್ಪಶರ (4)
14.ಅಡಗಿಕೊಳ್ಳಲು ಪ್ರಶಸ್ತವಾದ ಕಾಡು (3)



4947 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶೇಷಪ್ರಶ್ನೆ 3.ತಥಾಗತ
5.ಮತ 6.ಪರಿಚಯ
8.ಖಗ 9.ಮಲೆ
10.ತರಕಾರಿ 12.ಸುತ
15.ಹರಿದಾರಿ 16.ನವರಂಗ

ಮೇಲಿಂದ ಕೆಳಕ್ಕೆ:
1.ಶೇಷ 2.ಪ್ರಭಾತ
3.ತರಾತುರಿ 4.ತಣಿ
5.ಮನೋಗತ 6.ಪರಾರಿ
7.ಯಮದೂತ 11.ಕಾಲುದಾರಿ
12.ಸುದೈವ 13.ದೇಹ
14.ಬೀಗ

ಸುಡೊಕು 5334


3	2			8		9		1
	9	8						4
	4		9			3		8
6								9
	5		7	6	9		8	
8						6		
		4	2			7		6
				9	7			
						4		5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5333 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,069
ಇಂದಿನ ಅಂತ್ಯ	16,678
▼	391
ದಿನದ ಕನಿಷ್ಠ	16,623

ವಿನಿಮಯ ದರ

$ ಡಾಲರ್	76.43
£ ಪೌಂಡ್	95.60
€ ಯುರೊ	80.42
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹390

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1660)
ಸೋಯಾ (ರಿಫೈನ್ಡ್)	₹1580 (1580)
ಸೂರ್ಯಕಾಂತಿ (ರಿಫೈನ್ಡ್)	₹1900 (1900)
ಪಾಮೋಲಿನ್	₹1550 (1550)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹301-648
ದ್ವಿತಳಿ (ಬಿ.ವಿ)	₹342-818

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹167
ಆರ್‌ಎಸ್‌ಎಸ್-5	₹161
ಗುಡ್ ಲಾಟ್	₹157

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1300
ಮಧ್ಯಮ	₹700-900
ಸಣ್ಣ	₹350-700

1,157 ಉತ್ಪನ್ನಗಳು ಹೊರಕ್ಕೆ

ನವದೆಹಲಿ (ಪಿಟಿಐ): ಟಿ.ವಿ., ಸೋಪು, ಆಟಿಕೆಗಳು, ಪಾದರಕ್ಷೆ, ದಿಢೀರ್ ಕಾಫಿ ಸೇರಿದಂತೆ ಒಟ್ಟು 1,157 ಉತ್ಪನ್ನಗಳನ್ನು ಕೇಂದ್ರ ಸರ್ಕಾರವು ಯುಎಇ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದದ ವ್ಯಾಪ್ತಿಯಿಂದ ಹೊರಗಿರಿಸಿದೆ.

ಒಪ್ಪಂದವು ಮೇ 1ರಿಂದ ಜಾರಿಗೆ ಬಂದಿದೆ. ಈ ಉತ್ಪನ್ನಗಳಿಗೆ ಕೇಂದ್ರವು ಸೀಮಾ ಸುಂಕ ವಿನಾಯಿತಿಯನ್ನು ನೀಡುವುದಿಲ್ಲ ಎಂದು ವಾಣಿಜ್ಯ ಸಚಿವಾಲಯ ಹೇಳಿದೆ. ಬೇರೆ ಯಾವುದೇ ದೇಶದ ಉತ್ಪನ್ನಗಳು ಭಾರತಕ್ಕೆ ಯುಎಇ ಮೂಲಕ ಪ್ರವೇಶಿಸಿ, ರಿಯಾಯಿತಿ ಪಡೆಯಲು ಅವಕಾಶವಿಲ್ಲ ಎಂದಿದೆ.









ಎಲ್‌ಐಸಿ ಐಪಿಒ: ಎಸ್‌ಬಿಐ ಶಾಖೆ ಮೇ 8ರಂದು ಸೇವೆ

ಮುಂಬೈ (ಪಿಟಿಐ): ಎಲ್‌ಐಸಿ ಐಪಿಒಗೆ ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸಲು ನೆರವಾಗುವ ಉದ್ದೇಶದಿಂದ ಎಸ್‌ಬಿಐ ಗೊತ್ತುಪಡಿಸಿದ ಬ್ಯಾಂಕ್ ಶಾಖೆಗಳನ್ನು ಸಾರ್ವಜನಿಕರಿಗೆ ಭಾನುವಾರವೂ ತೆರೆದಿರಿಸಬಹುದು ಎಂದು ಆರ್‌ಬಿಐ ಹೇಳಿದೆ.

ಎಲ್‌ಐಸಿ ಐಪಿಒ ಬಿಡ್ ಸಲ್ಲಿಸಲು ಸೋಮವಾರದವರೆಗೆ ಅವಕಾಶ ಇದೆ. ಶನಿವಾರವೂ ಬಿಡ್ ಸಲ್ಲಿಸಬಹುದು. ಬಿಡ್ ಸಲ್ಲಿಕೆಗೆ ನೆರವಾಗುವ ಉದ್ದೇಶದಿಂದ ಕೇಂದ್ರ ಸರ್ಕಾರವು, ಎಸ್‌ಬಿಐ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವ ಶಾಖೆಗಳನ್ನು ಭಾನುವಾರವೂ ತೆರೆಯಲು ಮನವಿ ಮಾಡಿತ್ತು.

‘ಈ ವಿಷಯವನ್ನು ಪರಿಶೀಲಿಸಲಾಗಿದ್ದು, ಎಸ್‌ಬಿಐ ಗೊತ್ತುಪಡಿಸಿದ ಶಾಖೆಗಳನ್ನು ಬ್ಯಾಂಕ್‌ಗಳು ಭಾನುವಾರವೂ (ಮೇ 8) ಸಾರ್ವಜನಿಕರಿಗೆ ತೆರೆದಿರಿಸಬಹುದು’ ಎಂದು ಆರ್‌ಬಿಐ ಹೇಳಿದೆ. ಎಸ್‌ಬಿಐ ವ್ಯವಸ್ಥೆಯ ಮೂಲಕ ಐಪಿಒ ಬಿಡ್ ಸಲ್ಲಿಸಲು ಅವಕಾಶ ಇರುತ್ತದೆ.

ಕಾರುಣ್ಯದ ಆಚಾರ್ಯ ರಾಮಾನುಜಾಚಾರ್ಯ

• ಅರ್ಜುನ ಭಾರದ್ವಾಜ



ಭಗವದ್ರಾಮಾನುಜರ ಜನನವಾದದ್ದು ಕಾಂಚಿಪುರದ ಬಳಿಯಿರುವ ಶ್ರೀಪೆರಂಬುದೂರ್ ಎಂಬ ಗ್ರಾಮದಲ್ಲಿ, ಕ್ರಿ. ಶ. 1017ರಲ್ಲಿ. ಅವರ ಜನ್ಮನಾಮ ಲಕ್ಷ್ಮಣಸೂರಿ ಎಂದಿತ್ತು ಎನ್ನುವ ಪ್ರತೀತಿಯುಂಟು. ತಮ್ಮ ಸೋದರಮಾವಂದಿರಾದ ಶ್ರೀ ತಿರುಮಲೈ ನಂಬಿ ಅವರ ಮೂಲಕ ಆಧ್ಯಾತ್ಮಿಕ ವಿದ್ಯಾಭ್ಯಾಸವು ಪ್ರಾರಂಭವಾಯಿತು. ಮುಂದೆ ವೇದಾಂತ ಶಾಸ್ತ್ರಗಳ ಅಧ್ಯಯನವು ಯಾದವ ಪ್ರಕಾಶರ ಮಾರ್ಗದರ್ಶನದಲ್ಲಿ ನಡೆದರೂ, ಶಿಷ್ಯರಿಗೆ ಗುರುಗಳ ತಾತ್ತ್ವಿಕಬೋಧನೆಯು ಸರಿಹೊಂದದೆ, ರಾಮಾನುಜರು ಯಾದವಪ್ರಕಾಶರಿಂದ ದೂರ ಸರಿದರು. ಮುಂದೆ ಯಾಮುನಾಚಾರ್ಯರೆಂಬ ವಿಶಿಷ್ಟಾದ್ವೈತ ಗುರುಗಳ ಶಿಷ್ಯತ್ವಕ್ಕಾಗಿ ಶ್ರೀರಂಗಂ ನಗರಕ್ಕೆ ತೆರಳಿದ ರಾಮಾನುಜರಿಗೆ ಅವರು ಅಲ್ಲಿಗೆ ಸೇರುವ ಮುನ್ನವೇ ಗುರುಗಳು ವೈಕುಂಠವನ್ನು ಸೇರಿದ್ದು ವಿಧಿವೈಚಿತ್ರ್ಯವೆನಿಸಿತು. ರಾಮಾನುಜರು ಜ್ಞಾನಕ್ಕಾಗಿ ವಿವಿಧ ವರ್ಣಗಳ ಗುರುಗಳನ್ನು ಆಶ್ರಯಿಸಿ ಶಾಸ್ತ್ರಗಳ ಅಧ್ಯಯನವನ್ನು ಮಾಡಿದರು. ಯಾಮುನಾಚಾರ್ಯರ ಶಿಷ್ಯರಾದ ಮಹಾಪೂರ್ಣರಿಂದ ಸಂನ್ಯಾಸದೀಕ್ಷೆಯನ್ನು ಪಡೆದರು.

ಮುಂದೆ ಶ್ರೀರಂಗಂ ನಗರದಲ್ಲಿ ಅರವತ್ತಕ್ಕೂ ಹೆಚ್ಚು ವರ್ಷಗಳು ಬಾಳಿ ಅಲ್ಲಿ ಲಕ್ಷಕ್ಕೂ ಹೆಚ್ಚು ಗೃಹಸ್ಥರಿಗೆ, ಏಳು ನೂರು ಜೀಯರ್‌ಗಳಿಗೆ, ಎಪ್ಪತ್ತು ನಾಲ್ಕು ಆಚಾರ್ಯಪುರುಷರಿಗೆ ಮಾರ್ಗದರ್ಶನವನ್ನು ನೀಡಿ, ಹಲವರಿಗೆ ಶ್ರೀವೈಷ್ಣವತತ್ತ್ವದ ಬೋಧನೆಯನ್ನು ಮಾಡಿದರು. ಶ್ರೀರಂಗಂ ದೇವಾಲಯದ ಆಚರಣೆ ಮತ್ತು ಆಡಳಿತಗಳಲ್ಲಿ ಅನೇಕ ಉಪಯುಕ್ತವಾದ ಬದಲಾವಣೆಗಳನ್ನು ತಂದರು. ಮುಂದೆ ತಿರುಪತಿಗೂ ಭೇಟಿ ನೀಡಿ ಅಲ್ಲಿಯೂ ಸರ್ಜನಾತ್ಮಕವಾದ ಬದಲಾವಣೆಗಳನ್ನು ಮಾಡಿದರು. ಯಾಮುನಾಚಾರ್ಯರು ತೀರಿಕೊಂಡಾಗ ಅವರ ಬಲಗೈಯ ಮೂರು ಬೆರಳುಗಳು ಚಾಚಿದ್ದು, ಇನ್ನೆರಡು ಬೆರಳುಗಳು ಮಡಿಚಿದ್ದನ್ನು ರಾಮಾನುಜರು ಕಂಡಿದ್ದರು - ಇದು ಯಾಮುನಾಚಾರ್ಯರಿಗೆ ಇದ್ದ ಮೂರು ಕೊನೆಗಾಣದ ಧ್ಯೇಯಗಳ ಸಂಕೇತವೆಂದು ರಾಮಾನುಜರು ಅರಿತರು. ಅದರಲ್ಲಿ ಅನ್ಯತಮವಾದದ್ದು ಬಾದರಾಯಣರ ಬ್ರಹ್ಮಸೂತ್ರಗಳಿಗೆ ವಿಶಿಷ್ಟಾದ್ವೈತಪರವಾದ ಭಾಷ್ಯದ ರಚನೆ. ಅದರಂತೆಯೇ ಭಗವದ್ರಾಮಾನುಜಾಚಾರ್ಯರು ಶ್ರೀಭಾಷ್ಯವನ್ನು ರಚಿಸಿದರು. ಮುಂದೆ ಭಗವದ್ಗೀತಾಭಾಷ್ಯವನ್ನೂ, ವೇದಾಂತಸಾರ, ವೇದಾಂತದೀಪ, ಗದ್ಯತ್ರಯ ಮತ್ತು ವೇದಾಂತಸಂಗ್ರಹ ಎಂಬುವ ಗ್ರಂಥಗಳನ್ನೂ ವಿದ್ವತ್ಪ್ರಪಂಚಕ್ಕೆ ನೀಡಿದರು.

ರಾಮಾನುಜದರ್ಶನವನ್ನು ತತ್ತ್ವತ್ರಯದರ್ಶನವೆಂದೂ ಕರೆಯುವುದುಂಟು - ಚಿತ್ ಎಂದರೆ ಭೋಕ್ತೃ , ಅಚಿತ್ ಎಂದರೆ ಭೋಜ್ಯವಾದ ಜಗತ್ತು ಮತ್ತು ಈಶ್ವರ, ಅರ್ಥಾತ್ ಸರ್ವಾಂತರ್ಯಾಮಿಯಾದ ಪರಮಾತ್ಮ - ಇವು ಮೂರು ತತ್ತ್ವಗಳು. ನಿತ್ಯವೂ ಸತ್ಯವೂ ಆದಂತಹ ಜೀವ-ಜಗತ್ತುಗಳು ಪರಮಾತ್ಮನ ಅಂಗವೆಂದೂ ಮತ್ತು ಪರಮಾತ್ಮನು ಅಂಗಿ ಎಂದೂ ಇಲ್ಲಿಯ ತಾತ್ಪರ್ಯ. ಇದನ್ನೇ ಶೇಷ-ಶೇಷಿಭಾವವೆಂದೂ ಕರೆಯುವುದುಂಟು. ಈಶ್ವರನು ಸಗುಣನೂ ಸಾಕಾರನೂ ಹೌದು, ಹಾಗೆಯೇ ಕಾರುಣ್ಯಧಾಮ, ಸರ್ವಜ್ಞ, ಸರ್ವಶಕ್ತ ಮತ್ತು ಸರ್ವಾಂತರ್ಯಾಮಿ. ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳು ಪರಮಾತ್ಮನ ಲೀಲೆ, ಮತ್ತು ಇದರಿಂದ ಅವನಿಗೆ ಆನಂದ ಎಂಬುವುದು ರಾಮಾನುಜರ ಸಿದ್ಧಾಂತ. ಜೀವನು ಭವಬಂಧನದಿಂದ ಬಿಡಿಸಿಕೊಳ್ಳಲು ಭಕ್ತಿಯೊಂದೇ ಸಾಧನ. ಕರ್ಮ-ಜ್ಞಾನಗಳು ಭಕ್ತಿಗೆ ಸಹಕಾರಿ. ಸರ್ವ-ಕರ್ಮಗಳನ್ನೂ ಭಗವದ್ ಕೈಂಕರ್ಯರೂಪದಿಂದಲೇ ಮಾಡಬೇಕು. ಶ್ರೀಮನ್ನಾರಾಯಣನಲ್ಲಿ ಅನನ್ಯವಾದ ಭಕ್ತಿ-ಶ್ರದ್ಧೆಗಳನ್ನು ಇರಿಸಬೇಕು. ಸರ್ವಸ್ವವನ್ನೂ ಭಗವಂತನಲ್ಲಿ ಸಮರ್ಪಿಸುವುದನ್ನು ಪ್ರಪತ್ತಿ ಅಥವಾ ಶರಣಾಗತಿ ಎಂದು ಕರೆಯುವರು. ರಾಮಾನುಜದರ್ಶನದಲ್ಲಿ ಇದೇ ಮುಕ್ತಿಗೆ ಸಾಧನ.

ಶ್ರೀಮದ್ರಾಮಾನುಜಾಚಾರ್ಯರು ಪಾಂಚರಾತ್ರಾಗಮದ ಆಚಾರಪದ್ಧತಿಯನ್ನು ಪ್ರಚಾರಕ್ಕೆ ತಂದದ್ದಲ್ಲದೆ ಅನೇಕ ದೇವಸ್ಥಾನಗಳಲ್ಲಿ ಅದನ್ನು ವ್ಯವಸ್ಥಾಪಿಸಿದರು. ರಾಮಾನುಜರ ಸರ್ವಜನಸಮಭಾವವು ಅನ್ಯಾದೃಶವಾದದ್ದು. ಯಾವುದೇ ಜಾತಿ-ವರ್ಣಗಳ ಭೇದವಿಲ್ಲದೆ ನಿರ್ಮಲ ಭಕ್ತಿಯುಕ್ತರಾದವರಿಗೆ ಮಾರ್ಗದರ್ಶನವನ್ನು ಮಾಡಿದರು. ಹಿಂದುಳಿದ ವರ್ಗದ ಜನರನ್ನು ‘ತಿರುಕುಲತ್ತರ್’ (ದಿವ್ಯಕುಲಕ್ಕೆ ಸೇರಿದವರು) ಎಂದು ಪರಿಗಣಿಸಿ ದಿವ್ಯಪ್ರಬಂಧಗಳ ಬೋಧನೆಯ ಮೂಲಕ ಅವರನ್ನು ಶ್ರೀವೈಷ್ಣವ ಭಕ್ತಿಪಂಥಕ್ಕೆ ಸೇರಿಸಿಕೊಂಡರು. ಭಗವದ್ರಾಮಾನುಜಾಚಾರ್ಯರ ಕಾರುಣ್ಯದಿಂದ ಹಲವಾರು ಹಿಂದುಳಿದ ಜನಾಂಗಳಿಗೆ ದೇವತಾರಾಧನೆ ಮತ್ತು ಆಧ್ಯಾತ್ಮಿಕ ಪಥಗಳಿಗೆ ಪ್ರವೇಶ ದೊರಕಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54000
ಕಾರ್ಕಳ	
ಹೊಸತು	40000-45000
ಹಳತು	46000-54000
ಕುಮಟ	
ಚಿಪ್ಪು	27509-31099
ಕೋಕ	18099-29699
ಹಳೆಚಾಲಿ	47509-50009
ಹೊಸಚಾಲಿ	35569-40099
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	20899-34369
ಚಾಲಿ	32609-38339
ಕೋಕ	22599-35509
ಕೆಂಪುಗೋಟು	34879-37099
ರಾಶಿ	33469-48269
ಸಿಪ್ಪೆಗೋಟು	18069-21200
ಶಿವಮೊಗ್ಗ	
ಬೆಟ್ಟೆ	49058-52899
ಗೊರಬಲು	17120-36568
ರಾಶಿ	43666-49389
ಸರಕು	56366-80100
ಸಿದ್ದಾಪುರ	
ಬಿಳಿಗೋಟು	37219-45109
ಕೋಕ	22699-32599
ಚಾಲಿ	42611-42611
ಕೆಂಪುಗೋಟು	26851-31069
ರಾಶಿ	43019-48509
ತಟ್ಟಿಬೆಟ್ಟೆ	37219-45109
ಶಿರಸಿ	
ಬೆಟ್ಟೆ	32421-47699
ಬಿಳಿಗೋಟು	12099-31709
ಚಾಲಿ	31101-40411
ರಾಶಿ	39789-49521
ಯಲ್ಲಾಪುರ	
ಆಪಿ	54695-56399
ಬಿಳಿಗೋಟು	27199-31499
ಚಾಲಿ	37299-40099
ಕೋಕ	17212-27899
ಕೆಂಪುಗೋಟು	31699-34199
ರಾಶಿ	47840-50209
ತಟ್ಟಿಬೆಟ್ಟೆ	37809-43399
ತಿಪಟೂರು ಕೊಬ್ಬರಿ	
ಕನಿಷ್ಠ	15800
ಗರಿಷ್ಠ	17117
ಮಾದರಿ	17000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15850	16000	217.95 ಸೆಂಟ್ಸ್
ಎಸಿ	8900	8500	8550	
ಆರ್‌ಪಿ	9600	97000	9900	ಲಂಡನ್
ಆರ್‌ಸಿ	4500	4100	4400	2115ಡಾಲರ್ಸ್

ಆರ್‌ಬಿಐ ನಿರ್ಧಾರ: ಎರಡು ತಿಂಗಳ ಕನಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯ

ಷೇರುಪೇಟೆಯಲ್ಲಿ ಕರಡಿ ಕುಣಿತ

ಮುಂಬೈ (ಪಿಟಿಐ): ಹಣದುಬ್ಬರ ನಿಯಂತ್ರಿಸಲು ಆರ್‌ಬಿಐ ಬಡ್ಡಿ ದರ ಹೆಚ್ಚಿಸಿರುವುದು ದೇಶದ ಷೇರುಪೇಟೆಗಳಲ್ಲಿ ಕರಡಿ ಕುಣಿತಕ್ಕೆ ಎಡೆಮಾಡಿಕೊಟ್ಟಿತು.

ಅಮೆರಿಕದ ಫೆಡರಲ್ ರಿಸರ್ವ್ ಸಭೆಗೂ ಮೊದಲೇ ಆರ್‌ಬಿಐ ಈ ನಿರ್ಧಾರ ತೆಗೆದುಕೊಂಡಿದೆ. ಜಾಗತಿಕ ಬಿಕ್ಕಟ್ಟು ಮತ್ತು ಉತ್ಪನ್ನಗಳ ಬೆಲೆ ಏರಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ಫೆಡರಲ್ ರಿಸರ್ವ್ ಸಹ ಬಡ್ಡಿದರ ಹೆಚ್ಚಿಸುವ ನಿರೀಕ್ಷೆ ಇದೆ.

ಮುಂಬೈ ಷೇರುಪೇಟೆಯು (ಬಿಎಸ್‌ಇ ಸೆನ್ಸೆಕ್ಸ್) ಹೆಚ್ಚಿನ ಮಾರಾಟದ ಒತ್ತಡಕ್ಕೆ ಒಳಗಾಗಿ 1,307 ಅಂಶ ಕುಸಿತ ಕಂಡಿತು. ಎರಡು ತಿಂಗಳ ಕನಿಷ್ಠ ಮಟ್ಟವಾದ 55,669 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 391 ಅಂಶ ಕುಸಿತ ಕಂಡು 16,678 ಅಂಶಗಳಿಗೆ ತಲುಪಿತು.

ಬಜಾಜ್ ಫೈನಾನ್ಸ್ ಷೇರು ಮೌಲ್ಯ ಶೇ 4.29ರಷ್ಟು ಗರಿಷ್ಠ ನಷ್ಟ ಕಂಡಿತು. ಬಿಎಸ್‌ಇ ಮಿಡ್‌ಕ್ಯಾಪ್ ಇಂಡೆಕ್ಸ್ ಶೇ 2.63ರಷ್ಟು ಮತ್ತು ಸ್ಮಾಲ್‌ಕ್ಯಾಪ್ ಇಂಡೆಕ್ಸ್ ಶೇ 2.11ರಷ್ಟು ಇಳಿಕೆ ಕಂಡವು. ಬಿಎಸ್‌ಇನಲ್ಲಿ ಪವರ್‌ಗ್ರಿಡ್, ಎನ್‌ಟಿಪಿಸಿ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್ ಷೇರುಗಳು ಮಾತ್ರವೇ ಗಳಿಕೆ ಕಂಡುಕೊಂಡವು.

ಅಮೆರಿಕದ ಫೆಡರಲ್ ರಿಸರ್ವ್ ಸಭೆಗೂ ಮುನ್ನ ಬಡ್ಡಿದರ ಹೆಚ್ಚಳ ಮಾಡುವ ಮೂಲಕ ಭಾರತದ ಮಾರುಕಟ್ಟೆಗಳಲ್ಲಿ ಆರ್‌ಬಿಐ ಕಂಪನ ಸೃಷ್ಟಿಸಿತು. ಇದರಿಂದಾಗಿ ಸೂಚ್ಯಂಕಗಳು ಹಠಾತ್ ಇಳಿಕೆ ಕಂಡವು ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 3.12ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 108.3 ಡಾಲರ್‌ಗಳಿಗೆ ತಲುಪಿತು.

₹ 6.27 ಲಕ್ಷ ಕೋಟಿ ನಷ್ಟ: ಮುಂಬೈ ಷೇರುಪೇಟೆಯಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದಾಗಿ ಷೇರುಪೇಟೆಯಲ್ಲಿ ನೋಂದಾಯಿತ ಹೂಡಿಕೆದಾರರ ಸಂಪತ್ತು ಮೌಲ್ಯದಲ್ಲಿ ₹ 6.27 ಲಕ್ಷ ಕೋಟಿಯಷ್ಟು ನಷ್ಟ ಅಗಿದೆ. ಇದರಿಂದ ಷೇರುಪೇಟೆಯ ಒಟ್ಟಾರೆ ಸಂಪತ್ತು ಮೌಲ್ಯ ₹ 259.60 ಲಕ್ಷ ಕೋಟಿಗೆ ಇಳಿಕೆ ಕಂಡಿತು.


ಎಲ್‌ಐಸಿ ಐಪಿಒ: ಶೇ 67ರಷ್ಟು ಬಿಡ್

ನವದೆಹಲಿ (ಪಿಟಿಐ): ಎಲ್‌ಐಸಿ ಐಪಿಒಗೆ ಮೊದಲ ದಿನ, ಪಾಲಿಸಿದಾರರಿಗೆ ನಿಗದಿಪಡಿಸಿದ ಷೇರುಗಳಿಗೆ 1.9 ಪಟ್ಟು ಹೆಚ್ಚು ಬಿಡ್ ಸಲ್ಲಿಕೆಯಾಗಿದೆ. ಒಟ್ಟಾರೆಯಾಗಿ ಶೇಕಡ 67ರಷ್ಟು ಷೇರುಗಳಿಗೆ ಬಿಡ್ ಸಲ್ಲಿಕೆ ಆಗಿದೆ.

ಕೇಂದ್ರ ಸರ್ಕಾರವು ಎಲ್‌ಐಸಿಯಲ್ಲಿನ ಶೇ 3.5ರಷ್ಟು ಷೇರುಗಳನ್ನು ಮಾರಾಟ ಮಾಡುವ ಮೂಲಕ ₹ 21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ.

ಸಣ್ಣ ಹೂಡಿಕೆದಾರರರಿಗೆ 6.9 ಕೋಟಿ ಷೇರುಗಳನ್ನು ಮೀಸಲಿಡಲಾಗಿದೆ. ಅದರಲ್ಲಿ ಶೇ 60ರಷ್ಟಕ್ಕೆ ಅರ್ಜಿ ಸಲ್ಲಿಕೆ ಆಗಿದೆ. ಕಂಪನಿಯ ಸಿಬ್ಬಂದಿಗೆ ಮೀಸಲಿಟ್ಟಿದ್ದ ಅಷ್ಟೂ ಷೇರುಗಳಿಗೆ ಅರ್ಜಿ ಸಲ್ಲಿಕೆ ಆಗಿದೆ.

ಅರ್ಹ ಸಾಂಸ್ಥಿಕ ಹೂಡಿಕೆದಾರರು (ಕ್ಯುಐಬಿ) ಶೇ 33ರಷ್ಟು ಷೇರುಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ಸಾಂಸ್ಥಿಕೇತರ ಹೂಡಿಕೆದಾರರು ಶೇ 26ರಷ್ಟು ಷೇರುಗಳಿಗೆ ಅರ್ಜಿ ಸಲ್ಲಿಸಿದ್ದಾರೆ.



ರಿಯಾಲ್ಟಿ, ವಾಹನ ಷೇರುಗಳಲ್ಲಿ ನಷ್ಟ

ಆರ್‌ಬಿಐ ನಿರ್ಧಾರದಿಂದ ರಿಯಲ್ ಎಸ್ಟೇಟ್, ಬ್ಯಾಂಕಿಂಗ್ ಮತ್ತು ವಾಹನ ವಲಯದ ಷೇರುಗಳ ಮೌಲ್ಯ ಇಳಿಕೆ ಕಾಣುವಂತಾಯಿತು. ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 3.31ರಷ್ಟು, ವಾಹನ ಸೂಚ್ಯಂಕ ಶೇ 2.53ರಷ್ಟು ಹಾಗೂ ಬ್ಯಾಂಕಿಂಗ್ ಸೂಚ್ಯಂಕ ಶೇ 2.29ರಷ್ಟು ಇಳಿಕೆ ಆಯಿತು.

ಅಕ್ಷಯ ತೃತೀಯಾ: ಮಾರಾಟ ಶೇ 5ರಷ್ಟು ಹೆಚ್ಚಳ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ಷಯ ತೃತೀಯಾ ದಿನ (ಮಂಗಳವಾರ) ಚಿನ್ನಾಭರಣಗಳ ಖರೀದಿಯು ರಾಜ್ಯದಲ್ಲಿ 2019ರ ಮಟ್ಟಕ್ಕೆ ಹೋಲಿಸಿದರೆ ಶೇಕಡ 5ರಷ್ಟು ಏರಿಕೆಯಾಗಿದೆ ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ನಿರ್ದೇಶಕರಲ್ಲಿ ಒಬ್ಬರಾದ ಎನ್. ವಿದ್ಯಾಸಾಗರ್ ತಿಳಿಸಿದರು.

ಬೆಂಗಳೂರಿನಲ್ಲಿ ಚಿನ್ನ ಮಾರಾಟವು 1.5–2 ಟನ್‌ವರೆಗೆ ಆಗಿದೆ. ಮೌಲ್ಯದ ಲೆಕ್ಕದಲ್ಲಿ ₹ 150 ಕೋಟಿಯಷ್ಟು ಆಗಿದೆ. ರಾಜ್ಯದಲ್ಲಿ ಒಟ್ಟಾರೆ ಮಾರಾಟ ಮೌಲ್ಯವು ₹ 750 ಕೋಟಿಗಳಿಂದ ₹ 1,000 ಕೋಟಿಯಷ್ಟಾಗಿದೆ ಎಂದು ಅವರು ಮಾಹಿತಿ ನೀಡಿದರು.

‘ಕೋವಿಡ್ ಸಾಂಕ್ರಾಮಿಕದಿಂದಾಗಿ ಎರಡು ವರ್ಷಗಳಿಂದ ಜನರು ಹೆಚ್ಚು ಖರೀದಿ ಮಾಡಿರಲಿಲ್ಲ. ಮನೆಯವರು, ಸ್ನೇಹಿತರ ಸಮಸ್ಯೆಗಳನ್ನು ನಿವಾರಿಸುವುದು ಆದ್ಯತೆ ಆಗಿದ್ದರಿಂದ ಚಿನ್ನದ ಮೇಲೆ ಹೂಡಿಕೆ ಮಾಡಿರಲಿಲ್ಲ. ಈ ಬಾರಿ ಅಂತಹ ಪರಿಸ್ಥಿತಿ ಇಲ್ಲದಿದ್ದರಿಂದ ಜನರು ಖರೀದಿ ನಡೆಸಿದ್ದಾರೆ’ ಎಂದು ಅವರು ವಿವರಿಸಿದರು.

‘ಮಳಿಗೆಗಳಲ್ಲಿ ಎಂದಿನಂತೆಯೇ ವ್ಯಾಪಾರ ನಡೆಯಿತು. ಅಕ್ಷಯ ತೃತೀಯಾ ದಿನ ಸಾಮಾನ್ಯವಾಗಿ ಕಂಡುಬರುವ ಖರೀದಿ ಸಂಭ್ರಮ ಇರಲಿಲ್ಲ. ಅಕ್ಷಯ ತೃತೀಯಾ ದಿನಕ್ಕೆ ಮಾರಾಟಕ್ಕೆಂದು ತಂದಿದ್ದ ಚಿನ್ನ, ಬೆಳ್ಳಿ ನಾಣ್ಯಗಳು ಪೂರ್ತಿಯಾಗಿ ಮಾರಾಟವಾಗಿಲ್ಲ’ ಎಂದು ಬೆಂಗಳೂರಿನ ಚಿನ್ನಾಭರಣ ವ್ಯಾಪಾರಿಯೊಬ್ಬರು ಹೇಳಿದರು.



ಭಾರತದಲ್ಲಿ ಅಕ್ಷಯ ತೃತೀಯಾ ದಂದು ಚಿನ್ನಾಭರಣ ಖರೀದಿಸುವುದು ಒಂದು ಸಂಪ್ರದಾಯದಂತೆ ಆಗಿದೆ. ಎರಡು ವರ್ಷಗಳ ಕೋವಿಡ್ ಸಂಬಂಧಿತ ನಿರ್ಬಂಧಗಳು ಈ ವರ್ಷ ಇಲ್ಲವಾಗಿರುವ ಕಾರಣ ವರ್ತಕರು ಮತ್ತು ಗ್ರಾಹಕರಲ್ಲಿ ಸಹಜವಾಗಿಯೇ ಹಬ್ಬದ ಸಂಭ್ರಮ ಹೆಚ್ಚಾಗಿರುವಂತೆ ಕಂಡುಬಂದಿದೆ ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ಭಾರತದ ಪ್ರಾದೇಶಿಕ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸೋಮಸುಂದರಂ ಪಿ.ಆರ್. ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಹೋಂಡಾ ಸಿಟಿ ಇ–ಎಚ್‌ಇವಿ ಬೆಲೆ ₹ 19.49 ಲಕ್ಷ

ನವದೆಹಲಿ (ಪಿಟಿಐ): ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯು ಬುಧವಾರ ಹೋಂಡಾ ಸಿಟಿ ಇ–ಎಚ್‌ಇವಿ ಬಿಡುಗಡೆ ಮಾಡುವ ಮೂಲಕ ಹೈಬ್ರಿಡ್ ಎಲೆಕ್ಟ್ರಿಕ್ ವಾಹನ ವಿಭಾಗವನ್ನು ಪ್ರವೇಶಿಸಿದೆ. ದೆಹಲಿಯಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 19.49 ಲಕ್ಷ.

ಈ ಕಾರು ಸೆಲ್ಫ್ ಚಾರ್ಜಿಂಗ್ ಎರಡು ಮೋಟರ್‌ಗಳ ಹೈಬ್ರಿಡ್ ಸಿಸ್ಟಂ ಹೊಂದಿದೆ. 1.5 ಲೀಟರ್ ಪೆಟ್ರೋಲ್ ಎಂಜಿನ್ ಇದ್ದು, ಪ್ರತಿ ಲೀಟರಿಗೆ 26.5 ಕಿಲೋ ಮೀಟರ್ ಇಂಧನ ದಕ್ಷತೆ ನೀಡಲಿದೆ ಎಂದು ಕಂಪನಿಯು ತಿಳಿಸಿದೆ.

ರಾಜಸ್ಥಾನದ ತಪುಕರಾ ಘಟಕದಲ್ಲಿ ಇದನ್ನು ತಯಾರಿಸಲಾಗುತ್ತದೆ ಎಂದು ಕಂಪನಿ ಹೇಳಿದೆ.

ಸೇವಾ ವಲಯದ ರಫ್ತು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ರಫ್ತು ವಹಿವಾಟಿನ ಮೌಲ್ಯವು 2021–22ರಲ್ಲಿ ದಾಖಲೆಯ ₹ 19 ಲಕ್ಷ ಕೋಟಿಗೆ ತಲುಪಿದೆ ಎಂದು ವಾಣಿಜ್ಯ ಸಚಿವಾಲಯ ಬುಧವಾರ ಮಾಹಿತಿ ನೀಡಿದೆ.

2019–20ರಲ್ಲಿ ಸೇವಾ ವಲಯದ ರಫ್ತು ವಹಿವಾಟು ಮೌಲ್ಯವು ₹ 16.18 ಲಕ್ಷ ಕೋಟಿ ಆಗಿತ್ತು ಎಂದು ತಿಳಿಸಿದೆ.

ಮಾರ್ಚ್‌ನಲ್ಲಿ ಸೇವೆಗಳ ರಫ್ತು ಮೌಲ್ಯವು ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹ 2.04 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದೂ ಹೇಳಿದೆ.

ಕೋಟಕ್ ಬ್ಯಾಂಕ್‌ಗೆ ಲಾಭ

ಮುಂಬೈ (ಪಿಟಿಐ): ಕೋಟಕ್ ಮಹೀಂದ್ರ ಬ್ಯಾಂಕ್ 2021–22ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 2,767 ಕೋಟಿ ಲಾಭ ಗಳಿಸಿದೆ.

ಮುಂಬೈ ಧಾರಣೆ

ಶೇಂಗಾ

4-5-2022

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9650-9700
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	10100-10150

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1670)
ಒಂದು ವಾರದ ಡೆಲಿವರಿ	1655 (1665)
ಸೋಯಾ ಕಚ್ಚಾ	1570 (1560)
ಪಾಮ್ ವಾರದ ಡೆಲಿವರಿ	1548 (1548)
ಸೂರ್ಯಕಾಂತಿ ಎಣ್ಣೆ ಕಚ್ಚಾ	1840 (1830)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,750 (51,600)
ಬೆಳ್ಳಿ ಕೆ.ಜಿ 62,500 (63,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

Per word	Ordinary	Bold	Ordinary Semi Display	Bold Semi Display
	70	100	80	135
CD Per Sqcm	Single Col	Double Col	Multi Col	
	480	450	475	



ಮಹಿಪಾಲ್ ಲೊಮ್ರೊರ್ ಮಿಂಚು; ಹರ್ಷಲ್ ಪಟೇಲ್‌ಗೆ ಮೂರು ವಿಕೆಟ್; ಚೆನ್ನೈಗೆ ಸೋಲು

ಬೆಂಗಳೂರಿಗೆ ಗೆಲುವಿನ ‘ಹರ್ಷ’

ಪುಣೆ (ಪಿಟಿಐ): ಮಹಿಪಾಲ್ ಲೊಮ್ರೊರ್ ಬ್ಯಾಟಿಂಗ್ ಮತ್ತು ಹರ್ಷಲ್ ಪಟೇಲ್ ಬೌಲಿಂಗ್ ಮಿಂಚಿನ ಮುಂದೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟ ನಡೆಯಲಿಲ್ಲ.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 13 ರನ್‌ಗಳಿಂದ ಚೆನ್ನೈ ವಿರುದ್ಧ ಗೆದ್ದಿತು. ಬ್ಯಾಟಿಂಗ್ ಆರಂಭಿಸಿದ ಬೆಂಗಳೂರು ತಂಡಕ್ಕೆ ವಿರಾಟ್ ಕೊಹ್ಲಿ (30; 33ಎ) ಮತ್ತು ಫಫ್ ಡುಪ್ಲೆಸಿ (38; 22ಎ) ಉತ್ತಮ ಅಡಿಪಾಯ ಹಾಕಿದರು. ಮಧ್ಯಮ ಕ್ರಮಾಂಕದಲ್ಲಿ ಮಿಂಚಿದ ಮಹಿಪಾಲ್ ಲೊಮ್ರೊರ್ (42; 27ಎ) ಬ್ಯಾಟಿಂಗ್ ಬಲದಿಂದ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 173 ರನ್ ಗಳಿಸಿತು.

ಈ ಗುರಿ ಬೆನ್ನಟ್ಟಿದ ಚೆನ್ನೈ ಸೂಪರ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 160 ರನ್ ಗಳಿಸಿತು. 10ನೇ ಪಂದ್ಯ ಆಡಿದ ಚೆನ್ನೈಗೆ ಇದು ಏಳನೇ ಸೋಲು. ಇದರಿಂದಾಗಿ ಹಾಲಿ ಚಾಂಪಿಯನ್ ಚೆನ್ನೈ ಪ್ಲೇ ಆಫ್ ಪ್ರವೇಶಿಸುವ ಅವಕಾಶದ ಬಾಗಿಲು ಬಹುತೇಕ ಮುಚ್ಚಿದಂತಾಗಿದೆ. 11ನೇ ಪಂದ್ಯವಾಡಿದ ಆರ್‌ಸಿಬಿ ಗೆ ಒಲಿದ ಆರನೇ ಜಯ ಇದು. ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿರುವುದರಿಂದ ಪ್ಲೇ ಆಫ್ ಕನಸು ಇನ್ನೂ ಜೀವಂತವಾಗುಳಿದಿದೆ.

ಪಟೇಲ್ ಪೆಟ್ಟು: ಚೆನ್ನೈ ತಂಡಕ್ಕೆ ಋತುರಾಜ್ ಗಾಯಕವಾಡ್ (28ರನ್) ಮತ್ತು ಡೆವೊನ್ ಕಾನ್ವೆ (56; 37ಎ) ಉತ್ತಮ ಆರಂಭ ನೀಡಿದರು. ಆದರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ತಂಡದ ಸೋಲಿಗೆ ಕಾರಣವಾಯಿತು. ಬೆಂಗಳೂರು ತಂಡದ ಮಧ್ಯಮವೇಗಿ ಹರ್ಷಲ್ ಪಟೇಲ್ ಅವರು ಪ್ರಮುಖ ಬ್ಯಾಟರ್‌ಗಳಾದ ಮೋಯಿನ್ ಅಲಿ, ರವೀಂದ್ರ ಜಡೇಜ ಮತ್ತು ಡ್ವೇನ್ ಪ್ರಿಟೋರಿಯಸ್ ವಿಕೆಟ್‌ಗಳನ್ನು ಗಳಿಸಿದರು. ಇನ್ನೊಂದೆಡೆ ಮ್ಯಾಕ್ಸ್‌ವೆಲ್ ಎರಡು ವಿಕೆಟ್‌ಗಳನ್ನು ಗಳಿಸಿದರು.



ಆರ್‌ಸಿಬಿಯ ಮಹಿಪಾಲ್ ಲೊಮ್ರೊರ್ ಬ್ಯಾಟಿಂಗ್ –ಪಿಟಿಐ ಚಿತ್ರ

ಮಹಿಪಾಲ್ ಆಸರೆ: ಮಹಿಪಾಲ್ ಮತ್ತು ರಜತ್ ಪಾಟೀದಾರ್ (21;15) ವಿಕೆಟ್ ಪತನವನ್ನು ತಡೆದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 44 ರನ್ ಸೇರಿಸಿದರು. ರನ್ ಗಳಿಕೆಯ ವೇಗ ಪ್ರಯತ್ನದಲ್ಲಿ ರಜತ್ ಔಟಾದರು. ದಿನೇಶ್ ಕಾರ್ತಿಕ್ (ಔಟಾಗದೆ 26) ಇನಿಂಗ್ಸ್‌ಗೆ ಬಲ ತುಂಬಿದರು. ಅವರು ಮತ್ತು ಲೊಮ್ರೊರ್ ಆಟ ಬಿರುಸು ಪಡೆದುಕೊಂಡಿತ್ತು. ಆದರೆ 19ನೇ ಓವರ್‌ನಲ್ಲಿ ತೀಕ್ಷಣ ಮೂರು ವಿಕೆಟ್‌ಗಳನ್ನು ಕಬಳಿಸಿ ರನ್ ಗಳಿಕೆಗೆ ತಡೆಯೊಡ್ಡಿದ್ದರು. ಕೇವಲ ಎರಡು ರನ್‌ಗಳ ಅಂತರದಲ್ಲಿ ಲೊಮ್ರೊರ್, ವಣಿಂದು ಹಸರಂಗಾ ಮತ್ತು ಶಾಬಾಜ್ ಅಹಮದ್ ಅವರ ವಿಕೆಟ್‌ಗಳು ಪತನವಾದವು.

ಇಂದಿನ ಪಂದ್ಯ: ಡೆಲ್ಲಿ ಕ್ಯಾಪಿಟಲ್ಸ್–ಸನ್‌ರೈಸರ್ಸ್ ಹೈದರಾಬಾದ್
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್
ಪಂದ್ಯ ಆರಂಭ: ರಾತ್ರಿ 7.30

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 8ಕ್ಕೆ 173 (20 ಓವರ್)

ವಿರಾಟ್ ಬಿ ಮೋಯಿನ್ 30 (33ಎ, 4X3, 6X1), ಡುಪ್ಲೆಸಿ ಸಿ ಜಡೇಜ ಬಿ ಮೋಯಿನ್ 38 (22ಎ, 4X4, 6X1), ಮ್ಯಾಕ್ಸ್‌ವೆಲ್ ರನೌಟ್ (ಉತ್ತಪ್ಪ/ಧೋನಿ) 3 (3ಎ), ಮಹಿಪಾಲ್ ಸಿ ಋತುರಾಜ್ ಬಿ ತೀಕ್ಷಣ 42 (27ಎ, 4X3, 6X2), ರಜತ್ ಸಿ ಮುಕೇಶ್ ಬಿ ಪ್ರಿಟೋರಿಯಸ್ 21 (15ಎ, 4X1, 6X1), ದಿನೇಶ್ ಔಟಾಗದೆ 26 (17ಎ, 4X1, 6X2), ಹಸರಂಗ ಸಿ ಋತುರಾಜ್ ಬಿ ತೀಕ್ಷಣ 0 (1ಎ), ಶಾಬಾಜ್ ಬಿ ತೀಕ್ಷಣ 1 (2ಎ), ಹರ್ಷಲ್ ರನೌಟ್ (ಕಾನ್ವೆ/ಪ್ರಿಟೋರಿಯಸ್)0 (0ಎ), ಸಿರಾಜ್ ಔಟಾಗದೆ 0 (0ಎ)

ಇತರೆ (ಲೆಗ್‌ಬೈ 5, ವೈಡ್ 7) 12

ವಿಕೆಟ್ ಪತನ: 1-62 (ಫಫ್ ಡುಪ್ಲೆಸಿ, 7.2), 2-76 (ಗ್ಲೆನ್ ಮ್ಯಾಕ್ಸ್‌ವೆಲ್, 8.6), 3-79 (ವಿರಾಟ್ ಕೊಹ್ಲಿ, 9.5), 4-123 (ರಜತ್ ಪಾಟಿದಾರ್, 15.1), 5-155 (ಮಹಿಪಾಲ್ ಲೊಮ್ರೊರ್, 18.1), 6-155 (ವನಿಂದು ಹಸರಂಗ, 18.2), 7-157 (ಶಾಬಾಜ್ ಅಹಮದ್, 18.6), 8-171 (ಹರ್ಷಲ್ ಪಟೇಲ್, 19.5)

ಬೌಲಿಂಗ್: ಮುಕೇಶ್ ಚೌಧರಿ 3-0-30-0, ಸಿಮ್ರನ್‌ಜೀತ್ ಸಿಂಗ್ 2-0-21-0, ಮಹೀಶ್ ತೀಕ್ಷಣ 4-0-27-3, ರವೀಂದ್ರ ಜಡೇಜ 4-0-20-0, ಮೋಯಿನ್ ಅಲಿ 4-0-28-2, ಡ್ವೇನ್ ಪ್ರಿಟೋರಿಯಸ್ 3-0-42-1

ಚೆನ್ನೈ ಸೂಪರ್ ಕಿಂಗ್ಸ್ 8ಕ್ಕೆ 160 (20 ಓವರ್)

ಋತುರಾಜ್ ಸಿ ಪ್ರಭುದೇಸಾಯಿ (ಬದಲಿ) ಬಿ ಶಾಬಾಜ್ 28 (23ಎ, 4X3, 6X1), ಕಾನ್ವೆ ಸಿ ಶಾಬಾಜ್ ಬಿ ಹಸರಂಗ 56 (37ಎ, 4X6, 6X2), ಉತ್ತಪ್ಪ ಸಿ ಪ್ರಭುದೇಸಾಯಿ (ಬದಲಿ) ಬಿ ಮ್ಯಾಕ್ಸ್‌ವೆಲ್ 1 (3ಎ), ರಾಯುಡು ಬಿ ಮ್ಯಾಕ್ಸ್‌ವೆಲ್ 10 (8ಎ, 6X1), ಮೋಯಿನ್ ಸಿ ಸಿರಾಜ್ ಬಿ ಹರ್ಷಲ್ 34 (27ಎ, 4X2, 6X2), ಜಡೇಜ ಸಿ ವಿರಾಟ್ ಬಿ ಹರ್ಷಲ್ 3 (5ಎ), ಧೋನಿ ಸಿ ರಜತ್ ಬಿ ಹ್ಯಾಜಲ್‌ವುಡ್ 2 (3ಎ), ಪ್ರಿಟೋರಿಯಸ್ ಸಿ ವಿರಾಟ್ ಬಿ ಹರ್ಷಲ್ 13 (8ಎ, 4X1, 6X1), ಸಿಮ್ರನ್‌ಜೀತ್ ಔಟಾಗದೆ 2 (2ಎ), ಮಹೀಶ್ ಔಟಾಗದೆ 7 (4ಎ, 6X1)

ಇತರೆ ((ಲೆಗ್‌ಬೈ 4) 4

ವಿಕೆಟ್ ಪತನ: 1-54 (ಋತುರಾಜ್ ಗಾಯಕವಾಡ್, 6.4), 2-59 (ರಾಬಿನ್ ಉತ್ತಪ್ಪ, 7.2), 3-75 (ಅಂಬಟಿ ರಾಯುಡು, 9.4), 4-109 (ಡೆವೊನ್ ಕಾನ್ವೆ, 14.1), 5-122 (ರವೀಂದ್ರ ಜಡೇಜ, 15.6), 6-133 (ಮೋಯಿನ್ ಅಲಿ, 17.2), 7-135 (ಮಹೇಂದ್ರ ಸಿಂಗ್ ಧೋನಿ, 18.1), 8-149 (ಡ್ವೇನ್ ಪ್ರಿಟೋರಿಯಸ್, 19.2)

ಬೌಲಿಂಗ್: ಶಾಬಾಜ್ ಅಹಮದ್ 3-0-27-1, ಜೋಶ್ ಹ್ಯಾಜಲ್‌ವುಡ್ 4-0-19-1, ಮೊಹಮ್ಮದ್ ಸಿರಾಜ್ 2-0-22-0, ವನಿಂದು ಹಸರಂಗ 3-0-31-1, ಗ್ಲೆನ್ ಮ್ಯಾಕ್ಸ್‌ವೆಲ್ 4-0-22-2, ಹರ್ಷಲ್ ಪಟೇಲ್ 4-0-35-3

ಫಲಿತಾಂಶ: ಬೆಂಗಳೂರು ತಂಡಕ್ಕೆ 13 ರನ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	10	8	2	0	0	16	0.158
ಲಖನೌ	10	7	3	0	0	14	0.397
ರಾಜಸ್ಥಾನ	10	6	4	0	0	12	0.340
ಬೆಂಗಳೂರು	11	6	5	0	0	12	-0.444
ಹೈದರಾಬಾದ್	9	5	4	0	0	10	0.471
ಪಂಜಾಬ್	10	5	5	0	0	10	-0.229
ಡೆಲ್ಲಿ	9	4	5	0	0	8	0.587
ಕೋಲ್ಕತ್ತ	10	4	6	0	0	8	0.060
ಚೆನ್ನೈ	10	3	7	0	0	6	-0.431
ಮುಂಬೈ	9	1	8	0	0	2	-0.836

*ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್

(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	19
ಕುಲದೀಪ್	ಡೆಲ್ಲಿ	17
ರಬಾಡ	ಪಂಜಾಬ್	17

ಆರೆಂಜ್ ಕ್ಯಾಪ್

(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	588
ರಾಹುಲ್	ಲಖನೌ	451
ಶಿಖರ್	ಹೈದರಾಬಾದ್	369

ಸಹಾ ಪ್ರಕರಣ: ಮಜುಂದಾರ್‌ಗೆ ಎರಡು ವರ್ಷಗಳ ನಿರ್ಬಂಧ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್– ಬ್ಯಾಟರ್ ವೃದ್ಧಿಮಾನ್ ಸಹಾ ಅವರನ್ನು ಬೆದರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ರಕರ್ತ ಬೋರಿಯಾ ಮಜುಂದಾರ್ ಅವರಿಗೆ ಮುಂದಿನ 2 ವರ್ಷಗಳ ಕಾಲ ಕ್ರೀಡಾಂಗಣಗಳ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ.

ಈ ಅವಧಿಯಲ್ಲಿ ಅವರಿಗೆ ಬಿಸಿಸಿಐನಿಂದ ಮಾನ್ಯತಾ ಪತ್ರ ಸಿಗುವುದಿಲ್ಲ ಅವರು ಯಾವುದೇ ಕ್ರಿಕೆಟಿಗನನ್ನೂ ಸಂದರ್ಶನ ಮಾಡುವಂತೆ ಇಲ್ಲ. ದೇಶಿ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು ನಡೆಯುವ ಕ್ರೀಡಾಂಗಣಗಳನ್ನು ಪ್ರವೇಶಿಸುವಂತಿಲ್ಲ. ಬಿಸಿಸಿಐ ಅಧೀನ ಸಂಸ್ಥೆಗಳು, ಸದಸ್ಯರೊಂದಿಗೆ ಸಂಪರ್ಕ ಇಟ್ಟುಕೊಳ್ಳುವಂತಿಲ್ಲ. ಮಂಡಳಿಯ ಯಾವುದೇ ಸೌಲಭ್ಯವನ್ನೂ ಬಳಸಿಕೊಳ್ಳುವಂತಿಲ್ಲ. ತಮಗೆ ಬೆದರಿಕೆಯೊಡ್ಡಿದ್ದ ಸಂದೇಶಗಳ ಸ್ಕ್ರೀನ್‌ಶಾಟ್‌ಗಳನ್ನು ಸಹಾ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಆದರೆ ಆ ಸಂದರ್ಭದಲ್ಲಿ ತಮಗೆ ಬೆದರಿಕೆಯೊಡ್ಡಿದ ಪತ್ರಕರ್ತನ ಹೆಸರು ಬಹಿರಂಗಪಡಿಸಲು ಸಹಾ ಒಪ್ಪಿರಲಿಲ್ಲ.

ಫೆ. 25ರಂದು ಈ ಪ್ರಕರಣದ ವಿಚಾರಣೆಗಾಗಿ ಬಿಸಿಸಿಐ ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಿತು. ಮಂಡಳಿಯ ಉಪಾಧ್ಯಕ್ಷ ರಾಜೀವ್ ಶುಕ್ಲಾ, ಖಜಾಂಚಿ ಅರುಣಸಿಂಗ್ ಧುಮಾಲ್ ಮತ್ತು ಕೌನ್ಸಿಲರ್ ಪ್ರಭತೇಜ್ ಸಿಂಗ್ ಭಾಟಿಯಾ ಅವರ ಸಮಿತಿಯು ನಡೆಸಿದ ವಿಚಾರಣೆಯಲ್ಲಿ ಸಹಾ ಅವರು ತಮಗೆ ಬೋರಿಯಾ ಮಜುಂದಾರ್ ಎಂಬ ಪತ್ರಕರ್ತ ಬೆದರಿಕೆ ಸಂದೇಶ ಕಳುಹಿಸಿರುವುದಾಗಿ ತಿಳಿಸಿದ್ದರು.

‘ವೃದ್ಧಿಮಾನ್ ಅವರು ಪತ್ರಕರ್ತನ ಬೆದರಿಕೆ ಸಂದೇಶಗಳ ಸ್ಕ್ರೀನ್ ಶಾಟ್ ಗಳನ್ನು ಹಂಚಿಕೊಂಡಿದ್ದರು. ವಿಚಾರಣೆ ಸಮಯದಲ್ಲಿ ಅವರು ಪತ್ರಕರ್ತನ ಹೆಸರು ವಿವರಗಳನ್ನು ಬಹಿರಂಗಗೊಳಿಸಿದ್ದರು. ಬೋರಿಯಾ ಅವರನ್ನೂ ವಿಚಾರಣೆ ಮಾಡಲಾಯಿತು. ಸಮಿತಿಯು ಇಬ್ಬರ ಹೇಳಿಕೆಗಳನ್ನು ಪಡೆದ ನಂತರ ತೀರ್ಮಾನ ಕೈಗೊಂಡಿದೆ. ಅಪೆಕ್ಸ್ ಕೌನ್ಸಿಲ್ ಅನುಮೋದನೆ ನೀಡಿದೆ. ಆ ಪ್ರಕಾರ ಕ್ರಮ ಜರುಗಿಸಲಾಗಿದೆ’ ಎಂದು ಬಿಸಿಸಿಐ ಹಂಗಾಮಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೆಮಂಗ್ ಅಮಿನ್ ತಿಳಿಸಿದ್ದಾರೆ.



ಮಜುಂದಾರ್

ಬೋರಿಯಾ ಟ್ವೀಟ್‌ನಲ್ಲಿ ಏನಿತ್ತು?: ಬೋರಿಯಾ ತಮಗೆ ಟ್ವೀಟ್ ಮಾಡಿದ್ದ ಸ್ಕ್ರೀನ್ ಶಾಟ್‌ಗಳನ್ನು ಫೆ.19ರಂದು ಸಾಮಾಜಿಕ ಜಾಲತಾಣಗಳಲ್ಲಿ ಸಹಾ ಹಂಚಿಕೊಂಡಿದ್ದರು. ‘ನನಗೆ ಸಂದರ್ಶನ ಕೊಡಿ ಮುಂದೆ ಒಳ್ಳೆಯದಾಗುತ್ತದೆ. ತಂಡದಲ್ಲಿ 11 ಜನರಲ್ಲಿ ಒಬ್ಬ ವಿಕೆಟ್‌ಕೀಪರ್‌ನನ್ನು ಆಯ್ಕೆ ಮಾಡುತ್ತಾರೆ. ಆದರೆ, ನೀವು 11 ಉತ್ತಮರಲ್ಲದ ಪತ್ರಕರ್ತರನ್ನು ಆಯ್ಕೆ ಮಾಡಿಕೊಂಡಿರುವುದು ಸರಿಯಲ್ಲ. ನಿಮಗೆ ನೆರವು ನೀಡಬಲ್ಲ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಿ’ ಎಂದು ಸರಣಿ ಸಂದೇಶಗಳನ್ನು ಬೋರಿಯಾ ಕಳಿಸಿದ್ದರು. ಸಹಾಗೆ ವಾಟ್ಸ್‌ಆ್ಯಪ್ ಕರೆಯನ್ನೂ ಮಾಡಿದ್ದರು. ಅದನ್ನು ಸಹಾ ಸ್ವೀಕರಿಸಿರಲಿಲ್ಲ. ಅದರಿಂದ ಕುಪಿತಗೊಂಡಿದ್ದ ಬೋರಿಯಾ, ‘ನೀವು ನನಗೆ ಮರಳಿ ಕರೆ ಮಾಡಿಲ್ಲ. ಈ ಅವಮಾನವನ್ನು ನಾನು ಮರೆಯುವುದಿಲ್ಲ’ ಎಂದು ಸಂದೇಶ ಕಳಿಸಿದ್ದರು.

ಮರಡೊನಾ ಜರ್ಸಿಗೆ ₹ 70 ಕೋಟಿ!

ಲಂಡನ್ (ಪಿಟಿಐ): ಫುಟ್‌ಬಾಲ್ ದಿಗ್ಗಜ ಡಿಗೊ ಮರಡೊನಾ ‘ದೇವರ ಕೈ’ ಎಂದೇ ಕರೆಯಲಾಗುವ ಪಂದ್ಯದಲ್ಲಿ ಧರಿಸಿದ್ದ ಪೋಷಾಕು ₹ 70 ಕೋಟಿ ಮೌಲ್ಯಕ್ಕೆ ಹರಾಜಾಗಿದೆ.

ಅರ್ಜೆಂಟಿನಾದ ಮರಡೊನಾ 1986ರ ಜೂನ್ 22ರಂದು ನಡೆದ ಫಿಫಾ ವಿಶ್ವಕಪ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಎರಡು ಗೋಲು ಹೊಡೆದಿದ್ದರು. ಅದರಲ್ಲೊಂದು ಗೋಲು ’ಕುಖ್ಯಾತ’ವಾಗಿತ್ತು. ಆ ಪಂದ್ಯದಲ್ಲಿ ಮರಡೊನಾ ಧರಿಸಿದ್ದ ಪೋಷಾಕಿಗೆ ಬುಧವಾರ ಭಾರಿ ಮೌಲ್ಯ ದೊರೆಯಿತು.

ಏಪ್ರಿಲ್ 20ರಿಂದ ಜೆರ್ಸಿಯ ಬಿಡ್ ಪ್ರಕ್ರಿಯೆ ನಡೆದಿತ್ತು. ಏಳು ಮಂದಿ ಬಿಡ್‌ದಾರರು ಪೈಪೋಟಿ ನಡೆಸಿದರು. ಈ ಜೆರ್ಸಿಯು ಇಂಗ್ಲೆಂಡ್ ತಂಡದ ಮಾಜಿ ಮಿಡ್‌ಫೀಲ್ಡರ್ ಸ್ಟೀವ್ ಹಾಜ್ ಅವರ ಸಂಗ್ರಹದಲ್ಲಿತ್ತು.

‘ಇದೊಂದು ಐತಿಹಾಸಿಕ ಪೋಷಾಕು. 20ನೇ ಶತಮಾನದಲ್ಲಿಯೇ ಇದೊಂದು ಮಹತ್ವದ ಬಿಡ್ ಎನಿಸಿಕೊಳ್ಳಲಿದೆ. ಕ್ರೀಡಾ ಸಲಕರಣೆಯ ಹರಾಜಿನಲ್ಲಿಯೇ ಅತ್ಯಂತ ಹೆಚ್ಚು ಮೌಲ್ಯ ಪಡೆದ ದಾಖಲೆ ಇದಾಗಿದೆ’ ಸ್ಟ್ರೀಟ್‌ವೇರ್ ಆ್ಯಂಡ್ ಕಲೆಕ್ಟೆಬಲ್ಸ್ ಸಂಸ್ಥೆ ಮುಖ್ಯಸ್ಥ ಬ್ರಹಾಂ ವಾಚರ್ ಹೇಳಿದ್ದಾರೆ.

2019ರಲ್ಲಿ ನ್ಯೂಯಾರ್ಕ್ ಯಾಂಕೀಸ್ ತಂಡದ ಬೇಬ್ ರುಥ್ ಧರಿಸಿದ್ದ ಪೋಷಾಕು ₹ 43 ಕೋಟಿಗೆ ಹರಾಜಾಗಿದ್ದು ಇದುವರೆಗಿನ ದಾಖಲೆಯಾಗಿತ್ತು.

ಮಹಿಳಾ ಟಿ20: ರೈಲ್ವೇಸ್‌ಗೆ ಪ್ರಶಸ್ತಿ

ಸೂರತ್ (ಪಿಟಿಐ): ನಾಯಕಿ ಸ್ಮೃತಿ ಮಂದಾನ ಅವರ ಅಮೋಘ 84 ರನ್‌ಗಳು ವ್ಯರ್ಥವಾದವು. ರೈಲ್ವೇಸ್ ತಂಡವು ಮಹಾರಾಷ್ಟ್ರವನ್ನು ಮಣಿಸಿ ಮಹಿಳಾ ಸೀನಿಯರ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಬುಧವಾರ ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ರೈಲ್ವೇಸ್ ಏಳು ವಿಕೆಟ್ ಗಳಿಂದ ಮಹಾರಾಷ್ಟ್ರ ತಂಡಕ್ಕೆ ಸೋಲುಣಿಸಿತು. ಮೊದಲು ಬ್ಯಾಟ್ ಮಾಡಿದ ಮಹಾರಾಷ್ಟ್ರ 4 ವಿಕೆಟ್‌ಗೆ 160 ರನ್ ಗಳಿಸಿತು. ಗುರಿ ಬೆನ್ನತ್ತಿದ ರೈಲ್ವೇಸ್ ಎಸ್. ಮೇಘನಾ (52), ಹೇಮಲತಾ (65) ಅವರ ಅರ್ಧಶತಕಗಳ ಬಲದಿಂದ ಜಯದ ದಡ ತಲುಪಿತು.

ಸಂಕ್ಷಿಪ್ತ ಸ್ಕೋರು: ಮಹಾರಾಷ್ಟ್ರ: 20 ಓವರ್‌ಗಳಲ್ಲಿ 4ಕ್ಕೆ 160 (ಸ್ಮೃತಿ ಮಂದಾನ 84, ಶಿವಾಲಿ ಶಿಂಧೆ 30; ಸ್ವಾಗತಿಕಾ ರಥ್ 33ಕ್ಕೆ 3, ಸ್ನೇಹ್ ರಾಣಾ 34ಕ್ಕೆ 1). ರೈಲ್ವೇಸ್: 18.1 ಓವರ್‌ಗಳಲ್ಲಿ 3ಕ್ಕೆ 165 (ಎಸ್. ಮೇಘನಾ 52, ಡಿ. ಹೇಮಲತಾ 65; ಎಂ.ಡಿ. ಸೋನಾವಾನೆ 22ಕ್ಕೆ 2). ಫಲಿತಾಂಶ: ರೈಲ್ವೇಸ್ ತಂಡಕ್ಕೆ ಏಳು ವಿಕೆಟ್‌ಗಳ ಜಯ ಮತ್ತು ಪ್ರಶಸ್ತಿ.

ಹಾಕಿ: ಪೂಜಾ ನಾಯಕಿ

ಬೆಂಗಳೂರು: ಭೋಪಾಲ್‌ನಲ್ಲಿ ಶುಕ್ರವಾರದಿಂದ ನಡೆಯಲಿರುವ ರಾಷ್ಟ್ರೀಯ ಮಹಿಳಾ ಹಾಕಿ ಟೂರ್ನಿಗೆ ಕರ್ನಾಟಕ ತಂಡವನ್ನು ಪ್ರಕಟಿಸಲಾಗಿದೆ.

ತಂಡ: ಪೂಜಾ ಎಂ. ಡಿ (ನಾಯಕಿ)ಶ್ರಾವ್ಯ ಜಿ. ಬಿ. , ಶೈನಾ ತಂಗಮ್ಮ ಎಂ. ಪಿ, ಹೇಮಾ ಹಪ್ಪಳಿ, ಅಂಜಲಿ, ಯಶಿಕಾ ಎಂ. ಜಿ, ಪೂಜಿತಾ ಬಿ. ಎನ್, ಸಂಧ್ಯಾ ಎಸ್. ಡಿ, ಕಾವ್ಯಾ ಕೆ. ಆರ್, ಆದಿರಾ ಎಸ್, ಪದ್ಮಾವತಿ ಎಸ್, ಮಾದ್ಲಿ, ಲಿಖಿತಾ ಎಸ್. ಪಿ, ದೀಪ್ತಿ ಕೆ. ಎ, ಧನುಶ್ರೀ, ಲೀಲಾವತಿ ಕೊಪ್ಪದ್, ಶಾಯಾ ಕಾವೇರಮ್ಮ, ನಿಶಾ ಪಿ. ಸಿ, ವಿದ್ಯಾ ಕೆ. ಎಸ್,). ಮ್ಯಾನೇಜರ್: ರಾಖೀ ಪೂವಣ್ಣ; ಕೋಚ್: ವರ್ಗೀಸ್ ಜಾನ್.

ನಿವೇಶನ ಮರಳಿಸಿದ ಗಾವಸ್ಕರ್

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಮೂರು ದಶಕಗಳ ಹಿಂದೆ ತಮಗೆ ನೀಡಲಾಗಿದ್ದ ನಿವೇಶನವನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಮರಳಿಸಿದ್ದಾರೆ.

33 ವರ್ಷಗಳ ಹಿಂದೆ ಬಾಂದ್ರಾ ಉಪನಗರದಲ್ಲಿ ಕ್ರಿಕೆಟ್ ತರಬೇತಿ ಅಕಾಡೆಮಿಯನ್ನು ಆರಂಭಿಸಲು ಸರ್ಕಾರವು ಗಾವಸ್ಕರ್ ಅವರಿಗೆ ನಿವೇಶನ ನೀಡಿತ್ತು. ಆದರೆ ಅದರಲ್ಲಿ ಗಾವಸ್ಕರ್ ಇದುವರೆಗೂ ಅಕಾಡೆಮಿ ಆರಂಭಿಸಿರಲಿಲ್ಲ. ಈ ಕುರಿತು ಹೋದ ವರ್ಷ ರಾಜ್ಯ ವಸತಿ ಸಚಿವ ಜಿತೇಂದ್ರ ಅವಹಾದ್ ಅವರು ಆಕ್ಷೇಪ ವ್ಯಕ್ತಪಡಿಸಿದ್ದರು. ಕಳೆದ 8 ತಿಂಗಳುಗಳಿಂದ ಗಾವಸ್ಕರ್ ಮತ್ತು ಸರ್ಕಾರದ ಮಧ್ಯೆ ಮಾತುಕತೆ ನಡೆದಿತ್ತು. ಇದೀಗ ಅವರು ನಿವೇಶನ ಮರಳಿಸಿದ್ದಾರೆ.



ಗಾವಸ್ಕರ್

ಸುಸ್ಥಿರ ಅಭಿವೃದ್ಧಿಗೆ ಭಾರತ–ನಾರ್ಡಿಕ್ ದೇಶಗಳ ಕೊಡುಗೆ ಅಗತ್ಯ: ಮೋದಿ

ಕೋಪನ್‌ಹೆಗನ್ (ಪಿಟಿಐ): ಜಾಗತಿಕ ಸಮೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿಗೆ ಭಾರತ ಮತ್ತು ನಾರ್ಡಿಕ್ ದೇಶಗಳು ಮಹತ್ವದ ಕೊಡುಗೆ ನೀಡಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಯುರೋಪ್ ಪ್ರವಾಸದಲ್ಲಿರುವ ಅವರು ಡೆನ್ಮಾರ್ಕ್‌ನ ರಾಜಧಾನಿ ಕೋಪನ್‌ಹೆಗನ್‌ನಲ್ಲಿ ಬುಧವಾರ ಭಾರತ– ನಾರ್ಡಿಕ್ 2ನೇ ಶೃಂಗಸಭೆಯಲ್ಲಿ ಭಾಗವಹಿಸಿದ ಬಳಿಕ ಈ ಕುರಿತು ಟ್ವೀಟ್ ಮಾಡಿದ್ದಾರೆ.

ಈ ಶೃಂಗಸಭೆಯಲ್ಲಿ ಭಾರತದ ಜೊತೆಗೆ ಡೆನ್ಮಾರ್ಕ್, ಫಿನ್ಲೆಂಡ್, ಐಸ್‌ಲೆಂಡ್, ನಾರ್ವೆ ಮತ್ತು ಸ್ವೀಡನ್ ದೇಶಗಳ ಪ್ರಧಾನಿಗಳೂ ಭಾಗವಹಿಸಿದ್ದರು. ಭಾರತ–ನಾರ್ಡಿಕ್ ದೇಶಗಳ ಮೊದಲನೇ ಶೃಂಗಸಭೆಯು 2018ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ನಡೆದಿತ್ತು.


ಶೃಂಗಸಭೆಗೂ ಮುನ್ನ ಟ್ವೀಟ್ ಮಾಡಿದ್ದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು, ‘ನಾರ್ಡಿಕ್ ದೇಶಗಳೊಂದಿಗಿನ ಶೃಂಗದಿಂದ ತಂತ್ರಜ್ಞಾನ, ಹೂಡಿಕೆ, ಶುದ್ಧ ಇಂಧನ, ಹಿಮಾಚ್ಛಾದಿತ ಧ್ರುವಗಳ ಸಂಶೋಧನೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ನಮ್ಮ ಬಹುಮುಖಿ ಸಹಕಾರಕ್ಕೆ ಉತ್ತೇಜನ ದೊರೆಯಲಿದೆ’ ಎಂದು ಆಶಯ ವ್ಯಕ್ತಪಡಿಸಿದ್ದರು.

ದ್ವಿಪಕ್ಷೀಯ ಮಾತುಕತೆ: ಇದಕ್ಕೂ ಮೊದಲು ಪ್ರಧಾನಿ ಮೋದಿ ಅವರು ಐದು ದೇಶಗಳ ಪ್ರಧಾನಿಗಳಾದ ಫಿನ್ಲೆಂಡ್‌ನ ಸನ್ನಾ ಮರಿನ್, ಸ್ವೀಡನ್‌ನ ಮ್ಯಾಗ್ಡಲೀನಾ ಆಂಡರ್ಸನ್, ಡೆನ್ಮಾರ್ಕ್‌ನ ಮೆಟ್ಟೆ ಫ್ರೆಡೆರಿಕ್ಸನ್, ನಾರ್ವೆಯ ಜೋನಾಸ್ ಗಹರ್ ಸ್ಟೋರ್, ಐಸ್‌ಲೆಂಡ್‌ನ ಕ್ಯಾಟ್ರಿನ್ ಜಾಕೋಬ್ಸ್‌ಡೊಟ್ಟಿರ್ ಅವರೊಂದಿಗೆ ಪ್ರತ್ಯೇಕವಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ನಾರ್ವೆಯೊಂದಿಗೆ ಸಾಗರ ಆಧಾರಿತ ಆರ್ಥಿಕತೆ, ಶುದ್ಧ ಇಂಧನ, ಬಾಹ್ಯಾಕಾಶ, ಆರೋಗ್ಯ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿ ಬಗ್ಗೆ ಸ್ವೀಡನ್ ಜತೆಗೆ ಭದ್ರತೆ, ಮಾಹಿತಿ ತಂತ್ರಜ್ಞಾನ, ಸಂಶೋಧನೆ, ನಾಗರಿಕ ವಿಮಾನಯಾನ, ಧ್ರುವ ಪ್ರದೇಶಗಳಲ್ಲಿನ ಸಂಶೋಧನೆ, ಗಣಿ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಮತ್ತು ನಾವೀನ್ಯ ಕ್ಷೇತ್ರಗಳಲ್ಲಿ ಬಾಂಧವ್ಯ ವೃದ್ಧಿಸಲು ಚರ್ಚಿಸಿದರು.

ಐಸ್‌ಲೆಂಡ್ ಜತೆಗೆ ಶಾಖೋತ್ಪನ್ನ ಇಂಧನ, ಸಾಗರ ಆಧಾರಿತ ಆರ್ಥಿಕತೆ, ಧ್ರುವ ಪ್ರದೇಶಗಳಲ್ಲಿನ ಸಂಶೋಧನೆ, ನವೀಕರಿಸಬಹುದಾದ ಇಂಧನ, ಮೀನುಗಾರಿಕೆ, ಆಹಾರ ಸಂಸ್ಕರಣೆ, ಡಿಜಿಟಲ್ ವಿಶ್ವವಿದ್ಯಾಲಯ ಕುರಿತು; ಫಿನ್ಲೆಂಡ್ ಜತೆ ಡಿಜಿಟಲ್ ಸಹಭಾಗಿತ್ವ, ವ್ಯಾಪಾರ ಮತ್ತು ಹೂಡಿಕೆಯಲ್ಲಿ ಪಾಲುದಾರಿಕೆ, ಟೆಲಿಕಾಂ ಕ್ಷೇತ್ರದಲ್ಲಿ ಮೂಲ ಸೌಕರ್ಯ ವೃದ್ಧಿ ಕುರಿತು ಪ್ರಧಾನಿ ಮೋದಿ ಅವರು ಚರ್ಚಿಸಿದರು.

ಸಾಗರಮಾಲಾ ಯೋಜನೆಯಲ್ಲಿ ಹೂಡಿಕೆ ಮಾಡಿ: ಭಾರತದ ಮಹತ್ವಾಕಾಂಕ್ಷಿಯ ಸಾಗರಮಾಲಾ ಯೋಜನೆಯಡಿ ಹೂಡಿಕೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ನಾರ್ಡಿಕ್ ವಲಯದ ಡೆನ್ಮಾರ್ಕ್, ಫಿನ್ಲೆಂಡ್, ಸ್ವೀಡನ್, ಐಸ್‌ಲೆಂಡ್ ಮತ್ತು ನಾರ್ವೆ ದೇಶಗಳಿಗೆ ಕರೆ ನೀಡಿದ್ದಾರೆ.



ಕೋಪನ್‌ಹೆಗನ್‌ನಲ್ಲಿ ಬುಧವಾರ ನಡೆದ ಭಾರತ–ನಾರ್ಡಿಕ್ ದೇಶಗಳ 2ನೇ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ಆರು ದೇಶಗಳ ಪ್ರಧಾನಿಗಳಾದ ಫಿನ್ಲೆಂಡ್‌ನ ಸನ್ನಾ ಮರಿನ್, ಸ್ವೀಡನ್‌ನ ಮ್ಯಾಗ್ದಲೀನಾ ಆಂಡರ್ಸನ್, ಭಾರತದ ನರೇಂದ್ರ ಮೋದಿ, ಡೆನ್ಮಾರ್ಕ್‌ನ ಮೆಟ್ಟೆ ಫ್ರೆಡೆರಿಕ್ಸನ್, ನಾರ್ವೆಯ ಜೋನಾಸ್ ಗಹರ್ ಸ್ಟೋರ್, ಐಸ್‌ಲೆಂಡ್‌ನ ಕ್ಯಾಟ್ರಿನ್ ಜಾಕೋಬ್ಸ್‌ಡೊಟ್ಟಿರ್ ಫೋಟೊಗೆ ಪೋಸ್ ನೀಡಿದರು –ಪಿಟಿಐ ಚಿತ್ರ

ಮೋದಿ–ಮ್ಯಾಕ್ರಾನ್ ಚರ್ಚೆ

ಪ್ಯಾರಿಸ್ (ಪಿಟಿಐ): ಡೆನ್ಮಾರ್ಕ್‌ನಲ್ಲಿ ಭಾರತ – ನಾರ್ಡಿಕ್ ದೇಶಗಳ ಶೃಂಗದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್‌ಗೆ ಭೇಟಿ ನೀಡಿ, ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರನ್ನು ಭೇಟಿ ಮಾಡಿದರು.

ಈ ವೇಳೆ ಮೋದಿ ಮತ್ತು ಮ್ಯಾಕ್ರಾನ್ ಅವರು ದ್ವಿಪಕ್ಷೀಯ, ಪರಸ್ಪರ ಹಿತಾಸಕ್ತಿಗಳ ಜೊತೆಗೆ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಯ ವಿಷಯಗಳ ಕುರಿತು ಚರ್ಚೆ ನಡೆಸಿದರು.

ವಿಶ್ವದಲ್ಲಿ ಹಸಿವು: 2021ರಲ್ಲಿ ದಾಖಲೆ ಪ್ರಮಾಣ!

ರೋಮ್(ಎಪಿ): ಕಳೆದ ವರ್ಷ ವಿಶ್ವದಾದ್ಯಂತ ಆವರಿಸಿದ ಕೊರೊನಾ ವೈರಸ್ ಮತ್ತು ಹವಾಮಾನ ವೈಪರೀತ್ಯದ ಪರಿಣಾಮ ವಿಶ್ವದ 53 ದೇಶಗಳ 19.3 ಕೋಟಿ ಜನರು ಆಹಾರದ ಕೊರತೆ ಎದುರಿಸಿದ್ದರು ಎಂದು ವಿಶ್ವಸಂಸ್ಥೆ ವರದಿಯೊಂದು ಹೇಳಿದೆ.

2021ರಲ್ಲಿ ವಿಶ್ವದಲ್ಲಿ ನಿತ್ಯ ಅಗತ್ಯ ಆಹಾರ ಪಡೆಯಲಾಗದವರ ಸಂಖ್ಯೆ 4 ಕೋಟಿಯಷ್ಟು ಏರಿಕೆಯಾಗಿದೆ. ಆಹಾರದ ಅಭದ್ರತೆ ಎದುರಿಸುತ್ತಿರುವ ಜನಸಂಖ್ಯೆ ಕಳೆದ ಹಲವು ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಇಷ್ಟು ಪ್ರಮಾಣದ ಏರಿಕೆಯಾಗಿದೆ.

ಅಲ್ಲದೆ ಉಕ್ರೇನ್-ರಷ್ಯಾ ಯುದ್ಧವು ಜಾಗತಿಕ ಆಹಾರ ಉತ್ಪಾದನೆ ಮೇಲೆ ಮತ್ತಷ್ಟು ಪರಿಣಾಮ ಬೀರಲಿದೆ ಎಂದಿದೆ. ಅಫ್ಗಾನಿಸ್ತಾನ, ಕಾಂಗೊ, ನೈಜೀರಿಯಾ, ದಕ್ಷಿಣ ಸುಡಾನ್, ಸಿರಿಯಾ ಮತ್ತು ಯೆಮೆನ್ ದೇಶಗಳಲ್ಲಿ ಅತಿಹೆಚ್ಚು ಜನರು ಆಹಾರದ ಅಭದ್ರತೆ ಎದುರಿಸುತ್ತಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮತ್ತೆರಡು ನಗರಗಳು ರಷ್ಯಾ ಗುರಿ

ಲುವಿವ್, ಕೀವ್ (ಎಪಿ): ಪೂರ್ವ ಉಕ್ರೇನಿನ ಕ್ರಾಮರೊಸ್ಕಿ ಮತ್ತು ಸೆವೆರೊಡೊನೆಟ್‌ಸ್ಕ್ ನಗರಗಳ ವಶಕ್ಕೆ ರಷ್ಯಾ ಸೇನೆ ಯತ್ನಿಸುತ್ತಿದೆ ಎಂದು ಬ್ರಿಟನ್ ಹೇಳಿದೆ.

‘ಒಂದೊಂದು ಗುಂಪಿನಲ್ಲಿ 800 ಸೈನಿಕರಿರುವ ರಷ್ಯಾ ಸೇನೆಯ ಯುದ್ಧತಂತ್ರದ 22 ಬೆಟಾಲಿಯನ್ ಗುಂಪುಗಳು ಇಜಿಯುಮ್ ಬಳಿ ಬೀಡು ಬಿಟ್ಟಿವೆ. ಟ್ಯಾಂಕ್‌ಗಳು, ವಾಯು ರಕ್ಷಣಾ ವ್ಯವಸ್ಥೆ ಮತ್ತು ಫಿರಂಗಿಗಳಿಂದ ಕೂಡಿದ ಪದಾತಿಸೈನ್ಯದ ಘಟಕಗಳಿರುವ ಯುದ್ಧತಂತ್ರದ ಈ ಬೆಟಾಲಿಯನ್ ಗುಂಪುಗಳು ತೀವ್ರ ದಾಳಿ ನಡೆಸುವ ಸಿದ್ಧತೆಯಲ್ಲಿವೆ’ ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ಬುಧವಾರ ‘ಟ್ವೀಟ್’ ಮಾಡಿದೆ.

‘ಡಾನ್‌ಬಾಸ್ ಮೇಲೆ ನಿಯಂತ್ರಣಕ್ಕೆ ಮತ್ತು ಈ ಪ್ರದೇಶಕ್ಕೆ ಉಕ್ರೇನ್ ಸೇನೆ ಕಾಲಿಡದಂತೆ ರಷ್ಯಾ ತಂತ್ರ ರೂಪಿಸಿದೆ’ ಎಂದು ಅದು ಹೇಳಿದೆ.

‘ಇಜಿಯುಮ್ ಬಳಿ ಉಕ್ರೇನ್ ಪಡೆಗಳನ್ನು ಸುತ್ತುವರಿಯಲು ರಷ್ಯಾ ಸೇನೆ ಹವಣಿಸುತ್ತಿವೆ. ಆದರೆ, ಉಕ್ರೇನ್ ಸೈನಿಕರು, ಹೋವಿಟ್ಜರ್ ಫಿರಂಗಿಗಳಿಂದ ಪ್ರತಿರೋಧ ತೋರುತ್ತಿದ್ದಾರೆ’ ಎನ್ನುತ್ತಾರೆ ಬ್ರಿಟನ್ ಸೇನಾ ವಿಶ್ಲೇಷಕರು.

ತೈಲಗಾರ, ರೈಲು ನಿಲ್ದಾಣದ ಮೇಲೆ ದಾಳಿ: ‘ಪಾಶ್ಚಾತ್ಯರಿಂದ ಶಸ್ತ್ರಾಸ್ತ್ರ ಪೂರೈಕೆಯಾಗುತ್ತಿದ್ದ ಆರು ರೈಲು ನಿಲ್ದಾಣಗಳು, ಫಿರಂಗಿ, ಶಸ್ತ್ರಾಸ್ತ್ರಗಳ ನಾಲ್ಕು ಶಸ್ತ್ರಕೋಠಿ, ತೈಲ ಸಂಗ್ರಹಾಗಾರ ಸೇರಿ ಉಕ್ರೇನಿನ 40 ಸೇನಾ ನೆಲೆಗಳ ಮೇಲೆ ಕ್ಷಿಪಣಿ ದಾಳಿ ನಡೆಸಲಾಗಿದೆ’ ಎಂದು ರಷ್ಯಾ ರಕ್ಷಣಾ ಸಚಿವಾಲಯ ಬುಧವಾರ ಹೇಳಿದೆ.

ನಿಪ್ರೊ ಮತ್ತು ಕಿರೊವೊಹ್ರಾದಲ್ಲೂ ರೈಲ್ವೆ ಸೌಲಭ್ಯಗಳು ಕ್ಷಿಪಣಿ ದಾಳಿಗೆ ತುತ್ತಾಗಿದ್ದು, ಹಲವು ಸಾವು–ನೋವು ಸಂಭವಿಸಿವೆ ಎಂದು ಉಕ್ರೇನ್ ರೈಲ್ವೆ ಮುಖ್ಯಸ್ಥ ಒಲೆಕ್ಸಾಂಡರ್ ಕಮಿಶಿನ್ ಮತ್ತು ಗವರ್ನರ್ ವ್ಯಾಲೆಂಟಿನ್ ರೆಜಿನಿಶೆಂಕೊ ತಿಳಿಸಿದರು.

ಉಕ್ರೇನ್ ಯುದ್ಧ: 70ನೇ ದಿನದ ಬೆಳವಣಿಗೆ

- ಮೇ 9ರಂದು 2ನೇ ವಿಶ್ವಸಮರದ ‘ವಿಜಯ ದಿನ’ದ ಪ್ರಯುಕ್ತ ಪುಟಿನ್ ಉಕ್ರೇನ್ ಮೇಲೆ ‘ಆಲ್ ಔಟ್ ವಾರ್’ ಘೋಷಿಸುವ ನಿರೀಕ್ಷೆಯಲ್ಲಿ ರಷ್ಯಾ ಮಿತ್ರರಾಷ್ಟ್ರ ಬೆಲರೂಸ್ ಸೇನಾ ಪರೇಡ್ ಆರಂಭಿಸಿದೆ
- ಅಜೋವ್ ರೆಜಿಮೆಂಟ್ ಉಗ್ರರ ಜತೆ ಇಸ್ರೇಲ್ ಬಾಡಿಗೆ ಸೈನಿಕರು ಕೈಜೋಡಿಸಿದ್ದಾರೆ– ರಷ್ಯಾ ವಿದೇಶಾಂಗ ಸಚಿವಾಲಯದ ವಕ್ತಾರೆ
- ಯುದ್ಧದಲ್ಲಿ ಗಾಯಾಳುಗಳಾದ ಉಕ್ರೇನ್ ಸೈನಿಕರು ಮತ್ತು ನಾಗರಿಕರಿಗೆ ಜೈಪುರ ಕೃತಕ ಅಂಗಾಂಗಗಳ ಮರು ಜೋಡಣೆಗೆ ಶಿಬಿರ– ಅಮೆರಿಕ ಸಿದ್ಧತೆ
- ಮೇ 9ರಂದು ಮರಿಯುಪೋಲ್‌ನಲ್ಲಿ ಸೇನಾ ಪರೇಡ್‌ಗೆ ರಷ್ಯಾ ಸಿದ್ಧತೆ– ಉಕ್ರೇನ್ ಗುಪ್ತಚರ ನಿರ್ದೇಶನಾಲದ ವರದಿ
- ಯುರೋಪ್ ವರ್ಷಾಂತ್ಯದೊಳಗೆ ರಷ್ಯಾದ ತೈಲ ಆಮದು ಸಂಪೂರ್ಣ ನಿಷೇಧಿಸುವ ಜತೆಗೆ ಸ್ಬೆರ್‌ಬ್ಯಾಂಕ್‌ನೊಂದಿಗೆ ಬ್ಯಾಂಕ್‌ನ ವ್ಯವಹಾರ ಸ್ಥಗಿತಗೊಳಿಸಲಿವೆ– ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ

ಸಂಕ್ಷಿಪ್ತ ಸುದ್ದಿ

ಬೀಜಿಂಗ್‌ನಲ್ಲಿ ಅರೆ ಲಾಕ್‌ಡೌನ್

ಬೀಜಿಂಗ್(ಪಿಟಿಐ): ಓಮೈಕ್ರಾನ್ ಪ್ರಕರಣಗಳ ಹೆಚ್ಚಳದಿಂದಾಗಿ ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ ಮೆಟ್ರೊ ನಿಲ್ದಾಣ, ಶಾಲೆಗಳು, ವ್ಯಾಪಾರ– ವಹಿವಾಟು ಕೇಂದ್ರಗಳು, ರೆಸ್ಟೋರೆಂಟ್ ಮತ್ತು ಜಿಮ್‌ಗಳನ್ನು ಬುಧವಾರದಿಂದ ಬಂದ್ ಮಾಡಲಾಗಿದೆ.

ಬೀಜಿಂಗ್‌ನಲ್ಲಿ 53 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಒಟ್ಟು ಪ್ರಕರಣಗಳ ಸಂಖ್ಯೆ 500ಕ್ಕೆ ಏರಿಕೆಯಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಶಾಲೆಗಳ ಪುನರಾರಂಭ ಮುಂದೂಡಲಾಗಿದೆ. ಸೋಂಕು ತಡೆಗಟ್ಟಲು ಕೋವಿಡ್ ಪತ್ತೆ ಪರೀಕ್ಷೆ ಹೆಚ್ಚಿಸಲಾಗಿದೆ. ಅಲ್ಲದೆ, 40 ಸುರಂಗ ಮಾರ್ಗಗಳನ್ನು ಮುಚ್ಚಲಾಗಿದೆ. ಶೇ 10ರಷ್ಟು ಬಸ್ ಸಂಚಾರ ರದ್ದುಗೊಳಿಸಲಾಗಿದೆ.

ಡೆಲ್ಟಾದಿಂದ ಕೋವಿಡ್ ಅಲೆ?

ಜೆರುಸಲೇಮ್ (ಪಿಟಿಐ): ಮುಂದಿನ ಎರಡು ತಿಂಗಳಲ್ಲಿ ಓಮೈಕ್ರಾನ್ ಉಪತಳಿಗಳು ಸ್ವತಃ ನಾಶವಾಗಬಹುದು, ಇಲ್ಲವೇ ಈ ಬೇಸಿಗೆಯಲ್ಲಿ ಮತ್ತೊಂದು ಡೆಲ್ಟಾ ತಳಿ ಅಥವಾ ವಿಭಿನ್ನ ಕೋವಿಡ್ ಪಿಡುಗು ಉಲ್ಬಣಗೊಳ್ಳಬಹುದು ಎಂದು ಇಸ್ರೇಲ್‌ನಲ್ಲಿ ನಡೆಸಲಾದ ಮಾದರಿ ಅಧ್ಯಯನ ಹೇಳಿದೆ.

‘ಸೈನ್ಸ್ ಆಫ್ ದಿ ಟೋಟಲ್ ಎನ್ವಿರಾನ್‌ಮೆಂಟ್’ ಪತ್ರಿಕೆಯಲ್ಲಿ ಕಳೆದ ವಾರ ಈ ಸಂಶೋಧನಾ ವರದಿ ಪ್ರಕಟವಾಗಿದೆ. ಡೆಲ್ಟಾ ತನ್ನ ಹಿಂದಿನ ರೂಪಾಂತರ ತಳಿಗಳನ್ನು ನಾಶಗೊಳಿಸಿದೆ. ಆದರೆ ಮಾರಣಾಂತಿಕ ಓಮೈಕ್ರಾನ್ ತಳಿಯು ಇನ್ನೂ ಮರೆಯಾಗಿಲ್ಲ. ಅದು ಮತ್ತೆ ಕಾಣಿಸಿಕೊಳ್ಳಬಹುದು ಎಂದು ತಿಳಿಸಲಾಗಿದೆ.

ಇಸ್ರೇಲ್‌ನ ನೆಗೆವ್‌ನಲ್ಲಿಯ ಬೆನ್–ಗುರಿಯನ್ ವಿಶ್ವವಿದ್ಯಾಲಯದ (ಬಿಜಿಯು) ಸಂಶೋಧಕರು ಸೂಕ್ಷ್ಮ ರಚನೆಗಳನ್ನು ಅಭಿವೃದ್ಧಿಪಡಿಸಿದ್ದಾರೆ.

ಬೆಂಗಳೂರಿನಲ್ಲಿ 142 ಪ್ರಕರಣಗಳು

ಬೆಂಗಳೂರು: ರಾಜ್ಯದಲ್ಲಿ ಬುಧವಾರ 148 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇವರಲ್ಲಿ ಬೆಂಗಳೂರಿನವರೇ 142 ಮಂದಿ ಸೇರಿದ್ದಾರೆ. ಬಳ್ಳಾರಿ, ಕೋಲಾರ, ಮಂಡ್ಯದಲ್ಲಿ ತಲಾ ಒಂದು ಹಾಗೂ ಮೈಸೂರಿನಲ್ಲಿ ಮೂರು ಪ್ರಕರಣಗಳು ಪತ್ತೆಯಾಗಿವೆ.

ದೆಹಲಿಯಲ್ಲಿ ಕೋವಿಡ್ ಪರಿಸ್ಥಿತಿ ನಿಯಂತ್ರಣದಲ್ಲಿದೆ– ಸಚಿವ ಜೈನ್

ನವದೆಹಲಿ(ಪಿಟಿಐ): ದೆಹಲಿಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ನಡುವೆಯೂ ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆ ತುಂಬಾ ಕಡಿಮೆ ಇದೆ. ಸದ್ಯ ಕೋವಿಡ್ ಪರಿಸ್ಥಿತಿ ಗಂಭೀರವಾಗಿಲ್ಲ ಎಂದು ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಬುಧವಾರ ಹೇಳಿದರು.

ಕೋವಿಡ್ ಪರಿಸ್ಥಿತಿ ಮೇಲೆ ಸರ್ಕಾರ ನಿಗಾ ವಹಿಸಿದೆ. ಪ್ರಸ್ತುತದ ಸ್ಥಿತಿ ಗಮನಿಸಿದರೆ ಕಠಿಣ ನಿರ್ಬಂಧಗಳನ್ನು ಹೇರುವ ಅಗತ್ಯವಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

ಕೋವಿಡ್ ರೋಗಿಗಳ ಚಿಕಿತ್ಸೆಗೆ 10,000 ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ. ಇದರಲ್ಲಿ 200 ಹಾಸಿಗೆ ಮಾತ್ರ ಭರ್ತಿಯಾಗಿದೆ. ಇದು ಕೋವಿಡ್ ನಿಯಂತ್ರಣದಲ್ಲಿದೆ ಎಂಬುದಕ್ಕೆ ಉತ್ತಮ ನಿದರ್ಶನ ಎಂದು ಹೇಳಿದರು.

ಆದರೆ, ಪ್ರತಿನಿತ್ಯ ಸರಾಸರಿ 1,200–1,500 ಹೊಸ ಪ್ರಕರಣಗಳು ವರದಿಯಾಗುತ್ತಿವೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಹಿನ್ನೆಲೆಯಲ್ಲಿ ಸರ್ಕಾರ ಮರು ಪರೀಕ್ಷೆಗೆ ನಿರ್ಧರಿಸಿರುವುದು ಸರಿಯೇ?

ಜನಾಭಿಪ್ರಾಯ:

ಹೌದು	ಇಲ್ಲ
27%	73%

ಐಸಿಸಿ ರ್‍ಯಾಂಕಿಂಗ್: ಟಿ20ಯಲ್ಲಿ ಭಾರತಕ್ಕೆ ಅಗ್ರಸ್ಥಾನ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟ್ವೆಂಟಿ–20 ಕ್ರಿಕೆಟ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದೆ.


ಬುಧವಾರ ಐಸಿಸಿ ಪ್ರಕಟಿಸಿರುವ ವಾರ್ಷಿಕ ರ್‍ಯಾಂಕಿಂಗ್ ಪಟ್ಟಿಯಲ್ಲಿ ಟೆಸ್ಟ್ ಮಾದರಿಯಲ್ಲಿ ಆಸ್ಟ್ರೇಲಿಯಾ ಮತ್ತು ಏಕದಿನ ಕ್ರಿಕೆಟ್‌ನಲ್ಲಿ ನ್ಯೂಜಿಲೆಂಡ್ ತಂಡವು ಅಗ್ರಸ್ಥಾನ ಗಳಿಸಿದೆ.

ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಇಂಗ್ಲೆಂಡ್ ತಂಡಕ್ಕಿಂತ ಐದು ಅಂಕ ಹೆಚ್ಚು ಪಡೆದು ಅಗ್ರಸ್ಥಾನ ಪಡೆದಿದೆ. ಪಾಕಿಸ್ತಾನ ಮೂರನೇ ಸ್ಥಾನದಲ್ಲಿದೆ.

ಈ ಮಾದರಿಯಲ್ಲಿ ಅಫ್ಗಾನಿಸ್ತಾನ ಹತ್ತನೇ ಸ್ಥಾನಕ್ಕೇರಿತು. ಶ್ರೀಲಂಕಾ ಒಂಬತ್ತನೇ ಸ್ಥಾನ ಪಡೆಯಿತು.

ಟೆಸ್ಟ್ ರ್‍ಯಾಂಕಿಂಗ್ 2439 ಪಾಯಿಂಟ್ಸ್ ಹೊಂದಿರುವ ಆಸ್ಟ್ರೇಲಿಯಾ ಮೊದಲ ಸ್ಥಾನದಲ್ಲಿದೆ. ಭಾರತ 2736 ಹಾಗೂ ನ್ಯೂಜಿಲೆಂಡ್ 2552 ಅಂಕಗಳನ್ನು ಗಳಿಸಿದೆ.


ರೋಹಿತ್ ಶರ್ಮಾ–ವಿರಾಟ್ ಕೊಹ್ಲಿ


ಕೇನ್ ವಿಲಿಯಮ್ಸನ್


ಪ್ಯಾಟ್ ಕಮಿನ್ಸ್

ಟೆಸ್ಟ್: ಆಸ್ಟ್ರೇಲಿಯಾಕ್ಕೆ ಅಗ್ರಪಟ್ಟ

ರ್‍ಯಾಂಕ್	ತಂಡ	ಪಂದ್ಯ	ರೇಟಿಂಗ್
1	ಆಸ್ಟ್ರೇಲಿಯಾ	19	128
2	ಭಾರತ	23	119
3	ನ್ಯೂಜಿಲೆಂಡ್	23	111
4	ದ.ಆಫ್ರಿಕಾ	21	110
5	ಪಾಕಿಸ್ತಾನ	20	93

ಏಕದಿನ: ಕಿವೀಸ್‌ಗೆ ಮೊದಲ ಸ್ಥಾನ

ರ್‍ಯಾಂಕ್	ತಂಡ	ಪಂದ್ಯ	ರೇಟಿಂಗ್
1	ನ್ಯೂಜಿಲೆಂಡ್	12	125
2	ಇಂಗ್ಲೆಂಡ್	19	124
3	ಆಸ್ಟ್ರೇಲಿಯಾ	18	107
4	ಭಾರತ	22	105
5	ಪಾಕಿಸ್ತಾನ	16	102

ಟಿ20: ಭಾರತದ ಪಾರಮ್ಯ

1	ಭಾರತ	30	270
2	ಇಂಗ್ಲೆಂಡ್	28	265
3	ಪಾಕಿಸ್ತಾನ	30	261
4	ದ.ಆಫ್ರಿಕಾ	25	253
5	ಆಸ್ಟ್ರೇಲಿಯಾ	33	251

*ಮೂಲ: ಐಸಿಸಿ ವೆಬ್‌ಸೈಟ್

ಫುಟ್‌ಬಾಲ್: ಫೈನಲ್‌ಗೆ ಲಿವರ್‌ಪೂಲ್

ವಿಲಾರಿಯಲ್, ಸ್ಪೇನ್ (ಎಎಫ್‌ಪಿ): ಫ್ಯಾಬಿನೊ, ಲೂಯಿಸ್ ಡಿಯಾಜ್ ಮತ್ತು ಸ್ಯಾಡಿಯೊ ಮಾನೆ ಅವರ ಸಾಹಸದ ನೆರವಿನಿಂದ ಲಿವರ್‌ಪೂಲ್ ತಂಡವು ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿದೆ.

ಮಂಗಳವಾರ ರಾತ್ರಿ ನಡೆದ ಟೂರ್ನಿಯ ಸೆಮಿಫೈನಲ್ ಎರಡನೇ ಲೆಗ್‌ನಲ್ಲಿ ಲಿವರ್‌ಪೂಲ್ 3–2ರಿಂದ ವಿಲಾರಿಯಲ್‌ಗೆ ಸೋಲುಣಿಸಿತು. ಇದರೊಂದಿಗೆ 5–2ರ ಸರಾಸರಿ ಆಧಾರದಲ್ಲಿ ಪ್ರಶಸ್ತಿ ಸುತ್ತು ತಲುಪಿತು. ನಾಲ್ಕರ ಘಟ್ಟದ ಮೊದಲ ಲೆಗ್‌ನಲ್ಲಿ ಲಿವರ್‌ಪೂಲ್ 2–0ಯಿಂದ ಜಯ ಸಾಧಿಸಿತ್ತು.

ಈಸ್ಟಾಡಿಯೊ ಡಿ ಲಾ ಸೆರಾಮಿಕಾ ಕ್ರೀಡಾಂಗಣದಲ್ಲಿ ನಡೆದ ಜಿದ್ದಾಜಿದ್ದಿಯಲ್ಲಿ ವಿಲಾರಿಯಲ್‌ಗೆ ಆರಂಭದಲ್ಲೇ ಮುನ್ನಡೆ ಲಭಿಸಿತು. ಮೂರನೇ ನಿಮಿಷದಲ್ಲಿ ಬೌಲಾಯೆ ಡಿಯಾ ಗಳಿಸಿದ ಗೋಲು ತಂಡದ ಆಸೆಯನ್ನು ಚಿಗುರಿಸಿತು. ಫ್ರಾನ್ಸಿಸ್ ಕಾಕ್ವೆಲಿನ್ 41ನೇ ನಿಮಿಷದಲ್ಲಿ ತೋರಿದ ಕಾಲ್ಚಳಕದ ಬಲದಿಂದ ತಂಡವು ಮುನ್ನಡೆಯನ್ನು 2–0ಗೆ ಹೆಚ್ಚಿಸಿಕೊಂಡಿತು.ಆದರೆ ದ್ವಿತೀಯಾರ್ಧದಲ್ಲಿ ಲಿವರ್‌ಪೂಲ್ ಪಾರಮ್ಯ ಮೆರೆಯಿತು. 12 ನಿಮಿಷಗಳ ಅಂತರದಲ್ಲಿ ಮೂರು ಬಾರಿ ಚೆಂಡನ್ನು ಗುರಿ ಸೇರಿಸಿದ ಆಟಗಾರರು ತಂಡದ ಗೆಲುವನ್ನು ಖಚಿತಪಡಿಸಿದರು. 62ನೇ ನಿಮಿಷದಲ್ಲಿ ಫ್ಯಾಬಿಯಾನೊ, ಲೂಯಿಸ್ ಡಿಯಾಜ್ 67ನೇ ನಿಮಿಷದಲ್ಲಿ ಲಿವರ್‌ಪೂಲ್ ಪರ ಯಶಸ್ಸು ಸಾಧಿಸಿದರೆ, 74ನೇ ನಿಮಿಷದಲ್ಲಿ ಸ್ಯಾಡಿಯೊ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.



ಗೋಲು ಗಳಿಸಿದ ಲಿವರ್‌ಪೂಲ್ ತಂಡದ ಫ್ಯಾಬಿನೊ (ಎಡದಿಂದ 3ನೆಯವರು) ಅವರು ಸಹ ಆಟಗಾರರೊಂದಿಗೆ ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

ಮ್ಯಾಡ್ರಿಡ್ ಓಪನ್ ಟೆನಿಸ್ ಜಬೆವುರ್‌ಗೆ ಮಣಿದ ಹಲೆಪ್

ಮ್ಯಾಡ್ರಿಡ್ (ರಾಯಿಟರ್ಸ್): ವಿಶ್ವದ ಮಾಜಿ ಅಗ್ರಕ್ರಮಾಂಕದ ಆಟಗಾರ್ತಿ ಸಿಮೊನಾ ಹಲೆಪ್ ಅವರಿಗೆ ಸೋಲುಣಿಸಿದ ಆನ್ಸ್ ಜಬೆವುರ್ ಮ್ಯಾಡ್ರಿಡ್ ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ.

ಬುಧವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ ಟ್ಯೂನಿಷಿಯಾದ ಜಬೆವುರ್ 6-3, 6-2ರಿಂದ ರುಮೇನಿಯಾ ಆಟಗಾರ್ತಿಯನ್ನು ಮಣಿಸಿದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 10ನೇ ಸ್ಥಾನದಲ್ಲಿರುವ ಜಬೆವುರ್ ಅವರು ಸೆಮಿಫೈನಲ್‌ನಲ್ಲಿ, ಏಕಟೆರಿನಾ ಅನಿಸಿಮೊವಾ ಮತ್ತು ಅಮಂಡಾ ಅಲೆಕ್ಸಾಂಡ್ರೊವಾ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.


ಪಂದ್ಯ ಗೆದ್ದ ಸಂಭ್ರಮದಲ್ಲಿ ಆನ್ಸ್ ಜಬೆವುರ್– ಎಎಫ್‌ಪಿ ಚಿತ್ರ

ಥಾಮಸ್ ಕಪ್ ಬ್ಯಾಡ್ಮಿಂಟನ್: ಹಿಂದೆ ಸರಿದ ನ್ಯೂಜಿಲೆಂಡ್

ನವದೆಹಲಿ (ಪಿಟಿಐ): ಆಟಗಾರರಲ್ಲಿ ಕೊರೊನಾ ಸೋಂಕು ಪತ್ತೆಯಾದ ಹಿನ್ನೆಲೆಯಲ್ಲಿ ನ್ಯೂಜಿಲೆಂಡ್ ತಂಡವು ಥಾಮಸ್ ಕಪ್ ಬ್ಯಾಡ್ಮಿಂಟನ್ ಫೈನಲ್ಸ್‌ನಿಂದ ಹಿಂದೆ ಸರಿದಿದೆ.

ಥಾಯ್ಲೆಂಡ್‌ನ ಬ್ಯಾಂಕಾಕ್‌ನಲ್ಲಿ ಮೇ 8ರಿಂದ ಥಾಮಸ್ ಕಪ್ ಫೈನಲ್ಸ್ ನಡೆಯಲಿದೆ. ನ್ಯೂಜಿಲೆಂಡ್ ಹಿಂದೆ ಸರಿದಿರುವುದರಿಂದ ಡಿ ಗುಂಪಿನಲ್ಲಿ ಅಮೆರಿಕ ತಂಡಕ್ಕೆ ಆಡುವ ಅವಕಾಶ ಲಭಿಸಿದೆ.

'ಆಟಗಾರರಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾದ ಕಾರಣ, ನ್ಯೂಜಿಲೆಂಡ್ ತಂಡವು ಕಣಕ್ಕಿಳಿಯುತ್ತಿಲ್ಲ' ಎಂದು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ತಿಳಿಸಿದೆ.

ಕಮಲ್‌ಪ್ರೀತ್ ಕೌರ್ ತಾತ್ಕಾಲಿಕ ಅಮಾನತು

ನವದೆಹಲಿ (ಪಿಟಿಐ): ನಿಷೇಧಿತ ಮದ್ದು ಸೇವಿಸಿದ ಆರೋಪದ ಮೇಲೆ ಭಾರತದ ಡಿಸ್ಕಸ್ ಥ್ರೊ ಪಟು ಕಮಲ್‌ಪ್ರೀತ್ ಕೌರ್ ಅವರನ್ನು ಅಥ್ಲೆಟಿಕ್ಸ್ ಇಂಟಿಗ್ರಿಟಿ ಯೂನಿಟ್ (ಎಐಯು) ತಾತ್ಕಾಲಿಕವಾಗಿ ಅಮಾನತು ಮಾಡಿದೆ.


ಕಮಲ್‌ಪ್ರೀತ್

ಕೌರ್ ತಪ್ಪಿತಸ್ಥರು ಎಂದು ಸಾಬೀತಾದಲ್ಲಿ ಗರಿಷ್ಠ ನಾಲ್ಕು ವರ್ಷಗಳ ಕಾಲ ನಿಷೇಧ ಶಿಕ್ಷೆ ಎದುರಿಸುವ ಸಾಧ್ಯತೆಯಿದೆ.

'ಅಥ್ಲೆಟಿಕ್ಸ್ ಡೋಪಿಂಗ್ ತಡೆ ನಿಯಮಗಳ ಉಲ್ಲಂಘನೆಗಾಗಿ ಡಿಸ್ಕಸ್ ಥ್ರೊ ಪಟು ಕಮಲ್‌ಪ್ರೀತ್ ಕೌರ್ ಅವರನ್ನು ಎಐಯು ತಾತ್ಕಾಲಿಕವಾಗಿ ಅಮಾನತುಗೊಳಿಸಿದೆ' ಎಂದು ವಿಶ್ವ ಅಥ್ಲೆಟಿಕ್ಸ್ ಮಂಡಳಿಯು ಬುಧವಾರ ಟ್ವೀಟ್‌ನಲ್ಲಿ ತಿಳಿಸಿದೆ.

ಫುಟ್‌ಬಾಲ್: ಫ್ರೆಂಡ್ಸ್ ಯೂನಿಯನ್‌ಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಮುವಾನ್ಜೊವಾ ಖವಾಲ್‌ರಿಂಗ್ ಗಳಿಸಿದ ನಾಲ್ಕು ಗೋಲುಗಳ ಬಲದಿಂದ ಫ್ರೆಂಡ್ಸ್ ಯೂನಿಯನ್ ಎಫ್‌ಸಿ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಫ್ರೆಂಡ್ಸ್ ಯುನೈಟೆಡ್ 5–1ರಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡವನ್ನು ಸೋಲಿಸಿತು. ಲಾಲ್‌ಮುವಾನ್ಜೊವಾ 2, 10, 48 ಮತ್ತು 61ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಶಿವಕುಮಾರ್ (62ನೇ ನಿಮಿಷ) ಒಂದು ಗೋಲು ಹೊಡೆದರು. ಸೌತ್ ಯುನೈಟೆಡ್ ಪರ ಲೆನಾಲ್ಡ್ ಕ್ಯಾರೊಲ್ ಮಾರ್ಕ್ 80ನೇ ನಿಮಿಷದಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಇನ್ನುಳಿದ ಪಂದ್ಯಗಳಲ್ಲಿ ಬೆಂಗಳೂರು ಗನ್ನರ್ಸ್ ಎಫ್‌ಸಿ 1–0ಯಿಂದ ಆರ್‌ಡಬ್ಲ್ಯುಎಫ್ ಎದುರು, ರೆಬೆಲ್ಸ್ ಎಫ್‌ಸಿ 5–0ಯಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ಎಫ್‌ಸಿ ಎದುರು , ಎಜಿಒಆರ್‌ಸಿ ಎಫ್‌ಸಿ 3–2ರಿಂದ ಬಿಟಿಎಂ ಎಫ್‌ಸಿ ವಿರುದ್ಧ ಜಯ ಗಳಿಸಿದವು.